ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 2 ಜನವರಿ 6-12, 1997 ಬೆಲೆ ರೂ. 2.00

ಕಾಂಗ್ರೆಸ್ಸಿನೊಳಗಿನ ಬದಲಾವಣೆಗಳಿಂದ ಸಂಯುಕ್ತ ರಂಗ ಸರಕಾರಕ್ಕೆ ಬೆದರಿಕೆ ಬಂದಿದೆಯೇ?

ಬಂದಿದೆಯೆಂಬುದು ಕೇವಲ ಪಟ್ಟಭದ್ರರ ಪ್ರಚಾರ. ಸಂಯುಕ್ತ ರಂಗ ಸರಕಾರದ ಭವಿಷ್ಯ ಕಾಂಗ್ರೆಸ್ ಅಥವಾ ಬೇರಾವ ಪಕ್ಷವನ್ನು ಅವಲಂಬಿಸಿಲ್ಲ, ಅದರ ಕೆಲಸಕಾರ್ಯಗಳ ಮೇಲೆಯೇ ಅವಲಂಬಿಸಿದೆ ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು.

ಪುಟ 4

ಗೋಧಿ ಬೆಲೆ, ಹಿಟ್ಟಿನ ಬೆಲೆ ಏರಿದ್ದೇಕೆ?

ಜನ ಹೊಟ್ಟೆ ತುಂಬ ಉಂಡದ್ದರಿಂದಾಗಿ ಅಲ್ಲ, ಉದಾರೀಕರಣ ನೀತಿಯಿಂದಾಗಿ ಗೋಧಿಯ ಸ್ಟಾಕು ಇಳಿಮುಖವಾದ್ದರಿಂದ.

ಪುಟ 5

1996ರ ಜಗತ್ತು - ಒಂದು ಹಿನ್ನೋಟ

ಪುಟ 7

ಪೌರ ಕಾರ್ಮಿಕರಿಗೆ ಪ್ರತಿ ತಿಂಗಳು ಸಂಬಳ ಸಿಗುವಂತಾಗುವುದು ಹೇಗೆ?

ಪುಟ 8

ಅಸಂಘಟಿತ, ಶೋಷಿತ ಕಾರ್ಮಿಕ ವಿಭಾಗವೊಂದಾದ **ಗಾರ್ಮೆಂಟ್ಸ್ ಕಾರ್ಮಿಕರ ಒಂದು ಬೃಹತ್ ಸಮಾವೇಶ** ಈ ದುಡಿಯುವ ಜನವಿಭಾಗದ ಬವಣೆಗಳತ್ತ ಗಮನ ಸೆಳೆಯಿತು.

ವರದಿ: ಪುಟ 3



ಜನ-ವಿರೋಧಿ ನೀತಿಗಳ ವಿರುದ್ಧ ಪ್ರಚಾರಾಂದೋಲನ

ಜನಸಾಮಾನ್ಯರ ಬವಣೆಗಳ ಪರಿಹಾರಕ್ಕೆ ಎಡ ಜಾತ್ಯಾತೀತ, ಪ್ರಜಾಪ್ರಭುತ್ವ ಶಕ್ತಿಗಳು ಬೆಳೆಯಲಿ

ಜನವರಿ 16ರಿಂದ 30ರವರೆಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳ ಜನವಿರೋಧಿ ನೀತಿಗಳ ವಿರುದ್ಧ, ಭ್ರಷ್ಟಾಚಾರವನ್ನು ವಿರೋಧಿಸಿ, ಜನಪರವಾದ ನೀರಾವರಿ ಮೊದಲಾದ ಕಾರ್ಯಕ್ರಮಗಳನ್ನು ತುರ್ತು ಅನುಷ್ಠಾನಗೊಳಿಸುವಂತೆ ಒತ್ತಾಯಿಸಲು, ಕೈಗಾರಿಕೆಗಳ ಖಾಸಗೀಕರಣವನ್ನು ಕೈಬಿಡಬೇಕೆಂದು ಒತ್ತಾಯಿಸಲು ಪ್ರಚಾರ-ಪ್ರಕ್ಷೋಭೆಗಳ ಮೂಲಕ ಜನಾಂದೋಲನ ನಡೆಸಿ ಸಾರ್ವಜನಿಕರಲ್ಲಿ ರಾಜಕೀಯ ಜಾಗೃತಿಯನ್ನುಂಟುಮಾಡಬೇಕೆಂದು ಅದರ ಮೂಲಕ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆಯ ಅವಶ್ಯಕತೆಯನ್ನು ಜನರ ಮಧ್ಯೆ ಮನವರಿಕೆ ಮಾಡಿಕೊಡಬೇಕೆಂದು ಡಿಸೆಂಬರ್ 16-17ರಂದು ಸೇರಿದ್ದ ಸಿಪಿಐ(ಎಂ) ರಾಜ್ಯಸಮಿತಿ ಪಕ್ಷದ ಎಲ್ಲಾ ಘಟಕಗಳಿಗೆ ಕರೆ ಕೊಟ್ಟಿದೆ.

ದೇವೇಗೌಡ ಸರಕಾರದ ಹಿಂದೇಟು

ಬಿಜೆಪಿ-ಕಾಂಗ್ರೆ ಪಕ್ಷಗಳನ್ನು ಅಧಿಕಾರ ಗಳಿಕೆಯಿಂದ ದೂರಗುಳಿಸಿ, ಜಾತ್ಯಾತೀತ ಪಕ್ಷಗಳು ಒಟ್ಟಿಗೆ ಸೇರಿ ಅಧಿಕಾರ ನಡೆಸಬೇಕೆಂಬ ಮಹೋದ್ದೇಶದಿಂದ ಒಂದು ಕಾರ್ಯಕ್ರಮದ ಆಧಾರದಲ್ಲಿ ಜನತಾ ಪಕ್ಷದ ದೇವೇಗೌಡರನ್ನು ಪ್ರಧಾನ ಮಂತ್ರಿಯನ್ನಾಗಿ ಮಾಡಿ ಸಂಯುಕ್ತ ರಂಗ ಆಡಳಿತ ನಡೆಸುತ್ತಿದೆ ಯಷ್ಟೇ. ಹದಿಮೂರು ಪಕ್ಷಗಳ ಈ ಸಂಯುಕ್ತ ರಂಗಸರಕಾರ ಅಧಿಕಾರಕ್ಕೆ ಬಂದು ಅವರೇ ತಯಾರಿಸಿದ ಕನಿಷ್ಠ ಕಾರ್ಯಕ್ರಮವನ್ನು ಜಾರಿಯಲ್ಲಿ ತರಬೇಕಾಗಿರುವುದೇ ದೇವೇಗೌಡರ ಜವಾಬ್ದಾರಿ. ಹಾಗೆ ಆಡಳಿತ ನಡೆಸಬೇಕು, ಸರಕಾರದ ನೀತಿ-ನಿಯಮಗಳು, ಧೋರಣೆಗಳು ಕನಿಷ್ಠ ಕಾರ್ಯಕ್ರಮವನ್ನು ಹೊಂದಿಕೊಂಡಿರಬೇಕು, ಅದಕ್ಕೆ ಪೂರಕವಾಗಿರಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತಲೇ ಬಂದಿದೆ. ಈಗಲೂ ಒತ್ತಾಯಿಸುತ್ತಿದೆ. ಆದರೆ ದೇವೇಗೌಡರ ಸರಕಾರ ತದ್ವಿರುದ್ಧವಾಗಿ ವರ್ತಿಸುತ್ತಿದೆ. ಹಿಂದಿನ ನರಸಿಂಹರಾಯರ ಸರಕಾರ ಜಾರಿಯಲ್ಲಿ ತರಲಿಕ್ಕೆ ಹೆದರುತ್ತಿದ್ದ ಯಾವ ಕರಾರೂ ಇಲ್ಲದ ವಿದೇಶಿ ಬಂಡವಾಳಕ್ಕೆ ಪ್ರವೇಶ, ವಿದೇಶಿಯರಿಗೆ ನೂರಕ್ಕೆ ನೂರರಷ್ಟು ಶೇರುಗಳ ಮಾರಾಟ, ವಿದೇಶಿ ವಿಮೆಗೆ ಯಾವ ಆತಂಕವಿಲ್ಲದೆ ಪ್ರವೇಶ, ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳ ಖಾಸಗೀಕರಣ ಮುಂತಾದ ಕ್ಷೇತ್ರಗಳಲ್ಲಿ ದೇವೇಗೌಡರ ಸರಕಾರ ನರಸಿಂಹರಾವ್ ಸರಕಾರವನ್ನು ಮೀರಿಸಿದೆ. ಮಾತ್ರವಲ್ಲ ಸರಕಾರ ನಡೆಸುತ್ತಿರುವ ಪಕ್ಷಗಳ ಸಮನ್ವಯ ಸಮಿತಿಯ ನಿರ್ಣಯಗಳಾದ ಮಹಿಳೆಯರಿಗೆ ಮೀಸಲಾತಿ ಮಸೂದೆ, ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನ, ಚುನಾವಣೆ ಸುಧಾರಣೆ, ಲೋಕಪಾಲ್ ಮಸೂದೆ ಮೊದಲಾದ ಮಸೂದೆಗಳನ್ನು ಲೋಕಸಭೆಯಲ್ಲಿ ಮಂಡಿಸಲಿಕ್ಕೆ ಹಿಂದೇಟು ಹಾಕುತ್ತಿದೆ. ಬೆಲೆಯೇರಿಕೆ ತಡೆಗಟ್ಟಲು ಏನೂ ಕ್ರಮ ವಹಿಸಿಲ್ಲ. ಪಡಿತರ ಮೂಲಕ ಬಡವರಿಗೆ ಅಗ್ಗದ ದರದಲ್ಲಿ ಆಹಾರ ಧಾನ್ಯಗಳನ್ನು ಒದಗಿಸುವ ಕ್ರಮವಹಿಸಿಲ್ಲ. ಕೈಗಾರಿಕೆಗಳ ಖಾಸಗೀಕರಣದ ಧೋರಣೆ ಕೈ ಬಿಡುತ್ತಿಲ್ಲ, ಹೀಗಾಗಿ ದೇವೇಗೌಡ ಸರಕಾರದ ಕುರಿತು ಅಸಮಾಧಾನ ಬೆಳೆಯುತ್ತಿದೆ.

ಜನಪರ ಪರ್ಯಾಯ ನೀಡದ ಪಟೇಲ್ ಆಡಳಿತ

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಜೆ.ಎಚ್.ಪಟೇಲ್ ಸರಕಾರವೂ ಹಿಂದಿನ ಕಾಂಗ್ರೆಸ್ ಸರಕಾರದಂತೆಯೇ ಆಡಳಿತ ನಡೆಸುತ್ತಿದೆಯಲ್ಲದೆ ಜನಪರವಾದ ಪರ್ಯಾಯ ವ್ಯವಸ್ಥೆಯನ್ನು ಅನುಸರಿಸುತ್ತಿಲ್ಲ. ಪಶ್ಚಿಮ ಬಂಗಾಳದ ಮಾದರಿಯಲ್ಲಿ ವಿದ್ಯುತ್ ಅಭಾವ ನೀಗಿಸುವ ಪ್ರಯತ್ನ ನಡೆಸುವ ಬದಲಾಗಿ ವಿದ್ಯುತ್ ದರ, ನೀರಿನ ದರ, ಹಾಲಿನ ದರ ಏರಿಸಿದೆ. ಈಗ ಮತ್ತೆ ಅವುಗಳ ದರ ಹೆಚ್ಚಿಸುವ ಹೊಂಚು ಹಾಕುತ್ತಿದೆ. ಮುಚ್ಚಿರುವ ಕಾರ್ಖಾನೆಗಳನ್ನು ತೆರೆಯದೆ, ಮುಚ್ಚಿರುವ, ಹಾನಿಯಲ್ಲಿವೆಯೆಂದು ನೆಪ ಹೇಳುವ ಕಾರ್ಖಾನೆಗಳನ್ನು ಖಾಸಗೀಕರಣಗೊಳಿಸುತ್ತಿದೆ. ಕುಸಿಯುತ್ತಿರುವ ಆಡಳಿತೆಯನ್ನು ಚುರುಕುಗೊಳಿಸುವ ಪ್ರಯತ್ನ ಇಲ್ಲವಾಗಿ, ಲಂಚ ರುಶುವತ್ತುಗಳಿಗೆ ಪ್ರೋತ್ಸಾಹ ನೀಡುತ್ತಿದೆ. ಸರಕಾರ ತೀವ್ರ ಆರ್ಥಿಕ ಮುಗ್ಗಟ್ಟಿನಲ್ಲಿರುವಾಗ ಗಜಗಾತ್ರದ ಮಂತ್ರಿಮಂಡಲ ರಚಿಸಿ, ಹಣದ ದುರುಪಯೋಗಕ್ಕೆ ಅವಕಾಶ ಮಾಡಿಕೊಟ್ಟಿದೆ.

ಶಿಕ್ಷಣ ನೀತಿಯ ಅಭಾವದಿಂದಾಗಿ ಶಿಕ್ಷಣ ಕ್ಷೇತ್ರವೆಲ್ಲ ಪಾಲಕರ-ವಿದ್ಯಾರ್ಥಿಗಳ ಸುಲಿಗೆಯ ಆಗರವಾಗಿದೆ. ಶಿಕ್ಷಣದ ಇಳಿಮುಖವಾಗಿದೆ. ಕನಿಷ್ಠವೇತನಕ್ಕೊಳಪಡುವ ಅಸಂಘಟಿತ ಕಾರ್ಮಿಕರೆಲ್ಲ ಸರಕಾರದ ಅನಿಶ್ಚಿತ ಧೋರಣೆಯಿಂದಾಗಿ ಸಂಕಷ್ಟಕ್ಕೊಳಗಾಗಬೇಕಾಗಿದೆ.

ಭೂಸುಧಾರಣೆ, ಭೂಮಿ ಹಂಚಿಕೆ, ಪಟ್ಟಾ ವಿತರಣೆ, ಆಶ್ರಯ ಯೋಜನೆಗಳೆಲ್ಲ ನೆನಗುದಿಗೆ ಬಿದ್ದಿವೆ. ನಿಜವಾದ ಫಲಾನುಭವಿಗಳಿಗೆ ಅವುಗಳು ಸಿಗುತ್ತಿಲ್ಲ. ಭ್ರಷ್ಟಾಚಾರ - ಸ್ವಜನ ಪಕ್ಷಪಾತಗಳಿಗೆ ಅದು ಅವಕಾಶ ಮಾಡಿಕೊಡುತ್ತಿದೆ. ಕುಡಿಯುವ ನೀರಿನ ಸಮಸ್ಯೆ, ವಿದ್ಯುತ್ ಸಮಸ್ಯೆ, ಬೆಲೆಯೇರಿಕೆ, ನಿರುದ್ಯೋಗ, ಕನಿಷ್ಠ ವೇತನ, ಭ್ರಷ್ಟಾಚಾರ, ಡೊನೇಷನ್, ಅಸಮರ್ಪಕ ಶಿಕ್ಷಣ, ಅಸಮರ್ಪಕ ನೀರಾವರಿ ಸೌಕರ್ಯ, ಪೋಲೀಸ್ ಲಾಕಪ್‌ನಲ್ಲಿ ಮರ್ದನ, ದಲಿತರ ಮೇಲೆ, ಮಹಿಳೆಯರ ಮೇಲೆ ದೌರ್ಜನ್ಯ, ವರದಕ್ಷಿಣೆ ಹಾವಳಿ ಮೊದಲಾದ ಗಂಭೀರ ಸಮಸ್ಯೆಗಳು ಜನರನ್ನೆಮರಿಸುತ್ತಿವೆ. ಈ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಜನತಾದಳ ಸರಕಾರ ವಿಫಲವಾಗಿದೆ. ಜಾತಿ-ಉಪಜಾತಿಗಳ ಸಮ್ಮೇಳನಗಳಲ್ಲಿ ಆಯಾ ಜಾತಿಯ ಮಂತ್ರಿಗಳು ಭಾಗವಹಿಸಿ ಗೊಂದಲ ಹುಟ್ಟಿಸುತ್ತಿದ್ದಾರೆ.

ಜನರ ಸಮಸ್ಯೆಗಳನ್ನು ಅರ್ಥೈಸಿಕೊಳ್ಳಬೇಕು

ಭಾರತೀಯ ಜನತಾ ಪಾರ್ಟಿ ಮತ್ತು ಕಾಂಗ್ರೆಸ್‌ನವರು ಜನರ ಅಸಮಾಧಾನವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಇದು ಅಪಾಯಕಾರಿ. ಜನರಲ್ಲಿ ಉಂಟಾಗಿರುವ ಅಸಮಾಧಾನವನ್ನು ಎಡಪಕ್ಷಗಳು ಸರಿಯಾಗಿ ಅರ್ಥೈಸಿಕೊಂಡು ಸಮರ್ಪಕ ರೀತಿಯಲ್ಲಿ ಸಂಘಟಿತ ಹೋರಾಟಗಳನ್ನು ರೂಪಿಸಿ ಚಳುವಳಿ ನಡೆಸುವುದು ಅಗತ್ಯ. ಕಾಂಗ್ರೆ, ಬಿಜೆಪಿ ಸರಕಾರ, ಅವುಗಳ ಧೋರಣೆ, ಅದರಿಂದಾಗಬಹುದಾದ ಅಪಾಯಗಳ ಕುರಿತು ಜನರಲ್ಲಿ ಜಾಗೃತಿಯನ್ನುಂಟು ಮಾಡುವುದು, ಅದಕ್ಕಾಗಿಯೇ ನಗರ, ಹಳ್ಳಿಗಳಲ್ಲಿ ಹಲವಾರು ಸಾರ್ವಜನಿಕ ಸಭೆಗಳನ್ನು ನಡೆಸುವುದು, ಕರಪತ್ರಗಳನ್ನು ಪ್ರತಿಯೊಂದು ಮನೆಗಳಿಗೆ ತಲುಪಿಸುವುದು, ಪರಿಣಾಮ ಕಾರಿಯಾಗಿ ಜನರಿಗೆ ತಿಳಿಯುವಂತೆ ಪ್ರಚಾರ-ಪ್ರಕ್ಷೋಭೆ ಮಾಡಿ ಸಾರ್ವಜನಿಕರಲ್ಲಿಯ ಅಸಮಾಧಾನ ಸರಿಯಾದ ರೀತಿಯಲ್ಲಿ ರೂಪುಗೊಂಡು, ಪ್ರತಿಭಟನಾ ರೂಪದಲ್ಲಿ ಹೊರಹೊಮ್ಮುವಂತೆ ಮಾಡಿ ಸರಕಾರದ ಮೇಲೆ ಪರಿಣಾಮ ಬೀರುವಂತಾಗಬೇಕೆಂಬುದೇ ರಾಜ್ಯ ಸಮಿತಿ ನಿರ್ಣಯದ ಮುಖ್ಯ ಉದ್ದೇಶವಾಗಿದೆ.

ಜನವರಿ 16ರಿಂದ 29ರವರೆಗೆ ಕರಪತ್ರ ವಿತರಣೆ, ಸಭೆ ಮತ್ತಿನ್ನಿತರ ಪ್ರಚಾರ ನಡೆಸಿ, ಅದರ ಪರಿಣಾಮದಿಂದ ಜನವರಿ 30ರಂದು (ಮಹಾತ್ಮ ಗಾಂಧಿಯವರನ್ನು ನಾಥೂರಾಮ ಗೋಡ್ಸೆ ಗುಂಡು ಹಾಕಿ ಕೊಂದ ದಿನ, ಈಗ ಆ ದಿನವನ್ನು ಹುತಾತ್ಮ ದಿನವೆಂದು ಆಚರಿಸಲಾಗುತ್ತಿದೆ) ಬೃಹತ್ ಮತಪ್ರದರ್ಶನವನ್ನು ನಡೆಸಬೇಕೆಂದು ರಾಜ್ಯ ಸಮಿತಿಯ ನಿರ್ಣಯ. ಇದು ಅತಿಮಹತ್ವವಾದ ರಾಜಕೀಯ ನಿರ್ಣಯ. ಈ ನಿರ್ಣಯವನ್ನು ಸಮರ್ಪಕವಾಗಿ ಕಾರ್ಯರೂಪದಲ್ಲಿ ತರೋಣ. ಜನಜಾಗೃತಿ ರಾಜ್ಯದಲ್ಲಿ ಎಡ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆಗೆ ಸಹಾಯವಾಗಲಿ.

- ಎನ್.ಕೆ. ಉಪಾಧ್ಯಾಯ

ಎಡಪಕ್ಷಗಳನ್ನು ಬಿಟ್ಟು ಬೇರೆಲ್ಲಾ ರಾಜಕೀಯ ಪಕ್ಷಗಳ ಪುರುಷ ಸಂಕುಚಿತವಾದಿಗಳು ಶಾಸನಸಭೆಗಳಲ್ಲಿ ಮಹಿಳೆಯರಿಗೆ 33% ಮೀಸಲಾತಿಯ ಮಸೂದೆಯ ವಿರುದ್ಧ ಸಂಯೋಜಿತ ಪ್ರಯತ್ನ ನಡೆಸಿದ್ದಾರೆ. ಈ ಹಿನ್ನೆಲೆಯಲ್ಲಿ ಮಹಿಳೆಯರನ್ನು ಶಕ್ತಿ ಸಂಪನ್ನಗೊಳಿಸುವ ಸಮಸ್ಯೆಯನ್ನು ಎಡ ಮತ್ತು ಪ್ರಜಾಪ್ರಭುತ್ವವಾದೀ ಆಂದೋಲನದ ಅಭಿನ್ನ ಅಂಗವಾಗಿ ಬಿಟ್ಟಿದೆ.

- ಇ.ಎಂ.ಎಸ್. ನಂಬೂದರಿಪಾದ್



ಇಡೀ ಮಾನವ ಕುಲದ ಘನತೆಯ, ಸ್ವಾತಂತ್ರ್ಯದ ಹೋರಾಟದ ಪ್ರತೀಕವಾಗಿರುವ

ಸಮಾಜವಾದಿ ಕ್ಯೂಬಾಕ್ಕೆ ಸಿಪಿಐ(ಎಂ) ಶುಭಾಶಯ

ಜನವರಿ 1ರಂದು ಲ್ಯಾಟಿನ್ ಅಮೇರಿಕಾ ಖಂಡದ ಪುಟ್ಟ ದೇಶ ಕ್ಯೂಬಾದ ಜನತೆ ತಮ್ಮ ಕ್ರಾಂತಿಯ 38ನೇ ವಾರ್ಷಿಕೋತ್ಸವವನ್ನು ಆಚರಿಸಿದ್ದಾರೆ. ಈ ಸಂದರ್ಭದಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಕ್ಯೂಬಾ ಸಮಾಜವಾದಿ ಗಣತಂತ್ರಕ್ಕೆ ಹಾಗೂ ಕ್ಯೂಬಾದ ಜನತೆಗೆ ಹಾರ್ದಿಕ ಶುಭಾಶಯಗಳನ್ನು ವ್ಯಕ್ತಪಡಿಸಿದೆ.

ಕ್ಯೂಬಾದ ಜನತೆ ತಮ್ಮ ದೇಶದ ಇತಿಹಾಸದಲ್ಲಿನ ಈ ಅತ್ಯಂತ ಮಹತ್ವಪೂರ್ಣ ದಿನವನ್ನು ಸದಾ ಹರ್ಷೋಲ್ಲಾಸದಿಂದ ಆಚರಿಸಿದ್ದಾರೆ. ಆದರೆ ಈ ಬಾರಿಯ ಆಚರಣೆಗಂತೂ ಹೆಚ್ಚಿನ ಕಳೆ ಬಂದಿತ್ತು. ಏಕೆಂದರೆ ಕಳೆದ ಒಂದು ವರ್ಷ ಆ ಧೀರ ಜನ ಅಂತರ್ರಾಷ್ಟ್ರೀಯವಾಗಿಯೂ, ಆಂತರಿಕವಾಗಿಯೂ ಮಹತ್ವದ ಮುನ್ನಡೆ ಸಾಧಿಸಿದ ವರ್ಷ.

ವಿಶ್ವದ ಪೋಲೀಸ್ ಪೇದೆಯಂತೆ ವರ್ತಿಸುವ ಅಮೇರಿಕಾದಿಂದ ಕೇವಲ ನೂರು ಕಿಲೋಮೀಟರ್ ದೂರದಲ್ಲಿರುವ ಈ ದೇಶ ಕಳೆದ ನಾಲ್ಕು ದಶಕಗಳಿಂದ ಸಾಮ್ರಾಜ್ಯಶಾಹಿ ಒತ್ತಡವನ್ನು, ಕ್ರಿಮಿನಲ್ ಆರ್ಥಿಕ ದಿಗ್ಬಂಧನವನ್ನು ಎದುರಿಸಿ ನಿಂತಿದೆ. ಸೋವಿಯತ್ ಒಕ್ಕೂಟದ ವಿಘಟನೆಯ ನಂತರ ಅಮೇರಿಕನ್ ಸಾಮ್ರಾಜ್ಯಶಾಹಿ ತನ್ನ ಧಾಳಿಗಳನ್ನು ಇನ್ನಷ್ಟು ತೀವ್ರಗೊಳಿಸಿತು, ಇನ್ನೇನು ಕ್ಯೂಬಾದ ಸಮಾಜವಾದವನ್ನು ನಾಶಗೊಳಿಸುವಲ್ಲಿ ಅದು ಕೊನೆಗೂ ಯಶಸ್ವಿಯಾಗುತ್ತದೆ ಎಂದು ಭಾವಿಸಲಾಯಿತು. ಆದರೆ ಧೀರ ಕ್ಯೂಬನ್ನರು ಆಗಲೂ ಜಗ್ಗಲಿಲ್ಲ. ಎಲ್ಲಾ ಕಷ್ಟ-ನಷ್ಟಗಳನ್ನು ಎದುರಿಸಿ ಸಮಾಜವಾದಕ್ಕೆ ತಮ್ಮ ಬದ್ಧತೆಯನ್ನು ಜಗತ್ತಿಗೇ ಸಾರಿದರು. ಅವರ ಧೀರ ಹೋರಾಟದಿಂದ ಅಮೇರಿಕಾ ಸಾಮ್ರಾಜ್ಯಶಾಹಿಗಳ ಹೊಸ ಕನಸುಗಳೂ ಮಣ್ಣುಗೂಡಿದವು, ಅಮೇರಿಕಾದ ಆಳರಸರು ಈ ವಿಷಯದಲ್ಲಿ ಒಬ್ಬಂಟಿಗರಾಗಬೇಕಾಯಿತು. ಅವರ ಗೆಳೆಯರೂ ಸಹಾಯಕ್ಕೆ ಬರದಂತಹ ಪರಿಸ್ಥಿತಿಯನ್ನು ನಿರ್ಮಿಸುವಲ್ಲಿ ಕ್ಯೂಬನ್ನರು ಇಂದು ಯಶಸ್ವಿಯಾಗಿದ್ದಾರೆ. ಅಮೇರಿಕಾ ತನ್ನ ಆರ್ಥಿಕ ದಿಗ್ಬಂಧನಗಳನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸುವ ನಿರ್ಣಯವನ್ನು ವಿಶ್ವಸಂಸ್ಥೆ ಅಂಗೀಕರಿಸಿದಾಗ ಅದಕ್ಕೆ ವಿರುದ್ಧವಾದ ಮತ ಕೇವಲ ಒಂದೇ-ಸ್ವತಃ ಅಮೇರಿಕಾದ್ದು. ಈಗಾಗಲೇ ಯುರೋಪಿಯನ್ ಸಂಘ ಹಾಗೂ ಕೆನಡಾ ದೇಶಗಳು ಅಮೇರಿಕಾದ ಬೆದರಿಕೆಗಳನ್ನು ನಿರ್ಲಕ್ಷಿಸಿ ಕ್ಯೂಬಾದೊಂದಿಗೆ ವ್ಯಾಪಾರ ಸಂಪರ್ಕಗಳನ್ನು ಆರಂಭಿಸಿವೆ. ಅಷ್ಟೇ ಅಲ್ಲ, ಕಳೆದ ವರ್ಷ ಸಮಾಜವಾದಿ ಕ್ಯೂಬಾದೊಂದಿಗೆ ಅಂತರ್ರಾಷ್ಟ್ರೀಯ ಸೌಹಾರ್ದತೆ ಇನ್ನಷ್ಟು ವ್ಯಾಪಕಗೊಂಡಿದೆ. ಇದರಿಂದ ಕ್ಯೂಬನ್ನರಿಗೆ ನೈತಿಕ ಮತ್ತು ಭೌತಿಕ ಬೆಂಬಲವೂ ದೊರೆತಿದೆ.

ಆಂತರಿಕವಾಗಿಯೂ ಹಿಂದೆಂದೂ ಕಾಣದ ಆರ್ಥಿಕ ಸಂಕಷ್ಟಗಳನ್ನು ಹಿಂದಿನ ಐದು ವರ್ಷಗಳ ಕಾಲ ಸ್ಥೈರ್ಯದಿಂದ, ತಾಳ್ಮೆಯಿಂದ ಎದುರಿಸಿದ ನಂತರ ಕ್ಯೂಬಾದ ಜನ ಈಗ ನಿರಾಳವಾಗಿ ಉಸಿರಾಡುವಂತಾಗಿದೆ. ಈ ವರ್ಷ ಕ್ಯೂಬಾದ ಆರ್ಥಿಕದ ಬೆನ್ನೆಲುಬಾದ ಕಬ್ಬು ಬೆಳೆ ಚೆನ್ನಾಗಿ ಬಂದಿದೆ.

ಕ್ಯೂಬಾ ಕಮ್ಯುನಿಸ್ಟ್ ಪಕ್ಷ ಮತ್ತು ಫಿಡೆಲ್ ಕ್ಯಾಸ್ಟ್ರೋ ನೇತೃತ್ವದಲ್ಲಿ ಕ್ಯೂಬಾದ ಜನತೆ ಸೂರೆಕೋರ ಸಾಮ್ರಾಜ್ಯಶಾಹಿ ಶಕ್ತಿಗಳ ಒತ್ತಡವನ್ನು ಎದುರಿಸಿ ನಿಂತು ಕೆಂಬಾವುಟ ಗಗನದಲ್ಲಿ ಪಟಪಟನೆ ಹಾರುತ್ತಿರುವಂತೆ ನೋಡಿಕೊಳ್ಳುತ್ತಾರೆ ಎಂಬ ವಿಶ್ವಾಸವನ್ನು ಸಿಪಿಐ(ಎಂ) ಕೇಂದ್ರ ಸಮಿತಿ ತನ್ನ ಶುಭಾಶಯ ಸಂದೇಶದಲ್ಲಿ ವ್ಯಕ್ತಪಡಿಸಿದೆ.

"ಸಮಾಜವಾದ ಅಥವಾ ಸಾವು" ಎಂಬ ಘೋಷಣೆ ಈ ಪುಟ್ಟ ದ್ವೀಪದ ಜನಕ್ಕೆ ಇಂತಹ ಅಗಾಧ ಹೋರಾಟ ನಡೆಸಲು ಸ್ಫೂರ್ತಿ ತುಂಬಿದೆ ಮಾತ್ರವಲ್ಲ ವಿಶ್ವಾದ್ಯಂತ ಪ್ರಗತಿಪರ ಜನಗಳಿಗೂ ಒಂದು ಸ್ಫೂರ್ತಿಯ ಮೂಲವಾಗಿದೆ ಎಂದು ಸಿಪಿಐ(ಎಂ) ಹೇಳಿದೆ. ಕಳೆದ ವರ್ಷ ಕ್ಯೂಬಾದೊಂದಿಗೆ ಸೌಹಾರ್ದತೆ ವ್ಯಕ್ತಪಡಿಸಲು ಏಶ್ಯಾ-ಶಾಂತ ಸಾಗರ ಪ್ರಾದೇಶಿಕ ಸಭೆಯನ್ನು ನಡೆಸಿಕೊಟ್ಟು, ತನ್ನ ಅಂತರ್ರಾಷ್ಟ್ರೀಯ ಕರ್ತವ್ಯಗಳನ್ನು ನೆರವೇರಿಸಿದ ತೃಪ್ತಿ ಸಿಪಿಐ(ಎಂ)ನದ್ದು.

ಕ್ಯೂಬಾದ ಹೋರಾಟ ಇಂದು ಘನತೆ, ಸ್ವಾತಂತ್ರ್ಯ ಹಾಗೂ ತಮ್ಮ ಭವಿಷ್ಯವನ್ನು ತಾವೇ ರೂಪಿಸುವ ಪ್ರತಿಯೊಂದು ದೇಶದ ಹಾಗೂ ಜನಗಳ ಸಾರ್ವಭೌಮತ್ವ ಹಕ್ಕಿಗಾಗಿ ಮಾನವ ಕುಲದ ಹೋರಾಟದ ಪ್ರತೀಕವಾಗಿವೆ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಕ್ಯೂಬಾದ ವಿಮೋಚನಾ ದಿನಾಚರಣೆಯ ಸಂದರ್ಭದಲ್ಲಿ ಕ್ಯೂಬಾದ ಜನಗಳು ಹಾಗೂ ಅವರ ಹೋರಾಟದೊಂದಿಗೆ ತನ್ನ ಅವಿಚ್ಛಿನ್ನ ಸೌಹಾರ್ದವನ್ನು, ಕ್ಯೂಬನ್ನರ ಹೋರಾಟಕ್ಕೆ ವಿಜಯ ಖಂಡಿತಾ ಎಂಬ ತನ್ನ ಅಖಂಡ ವಿಶ್ವಾಸವನ್ನು ಪುನರುಚ್ಚರಿಸಿದೆ.

ಉಕ್ಕು ವಲಯದಲ್ಲಿ ಅಸಮಾನ ಸ್ಪರ್ಧೆಯಿಂದ ದೇಶೀ ಉದ್ದಿಮೆಗೆ ವಿಪರೀತ ನಷ್ಟ

ಹಣಕಾಸು ಮಂತ್ರಿಗಳಿಗೆ ಸಂಸತ್ ಸದಸ್ಯರ ದೂರು

ಕಳೆದ ಒಂದು ವರ್ಷದಿಂದ ಭಾರತೀಯ ಉಕ್ಕು ಉದ್ದಿಮೆ ಉತ್ಪಾದನೆ ಮತ್ತು ಮಾರಾಟ ಎರಡೂ ಕಡೆ ತೀವ್ರ ಸಮಸ್ಯೆಗಳನ್ನು ಎದುರಿಸುತ್ತಿದೆ. ಈ ಸಮಸ್ಯೆಗಳಿಗೆ ಮುಖ್ಯ ಕಾರಣ ಸರಕಾರದ ನೀತಿಗಳು. ಈ ಕಡೆ ಕೇಂದ್ರ ಸರಕಾರದ ಗಮನಸೆಳೆಯಲು 65 ಸಂಸತ್ ಸದಸ್ಯರ ಒಂದು ನಿಯೋಗ ಹಣಕಾಸು ಮಂತ್ರಿ ಚಿದಂಬರಂರವರನ್ನು ಭೇಟಿ ಮಾಡಿ ಒಂದು ಮನವಿಯನ್ನು ಅರ್ಪಿಸಿತು. ಎಲ್ಲಾ ರಾಜಕೀಯ ಪಕ್ಷಗಳ ಸದಸ್ಯರು ಈ ನಿಯೋಗದಲ್ಲಿದ್ದರು.

ಪ್ರಸ್ತುತ ವರ್ಷದ ಮೊದಲ ಆರು ತಿಂಗಳಲ್ಲಿ ಹೆಚ್ಚಿನ ಉಕ್ಕು ಉತ್ಪಾದಕರು ನಷ್ಟ ಅನುಭವಿಸಿದ್ದಾರೆ. ಮಾರುಕಟ್ಟೆಯಲ್ಲಿ ಉಕ್ಕು ಆಮದುಗಾರರ ಪಾಲು ಹೆಚ್ಚಿದೆ. ಒಂದೆಡೆ ಆಂತರಿಕ ತೆರಿಗೆಯಲ್ಲಿ, ಉತ್ಪಾದನಾ ಖರ್ಚಿನಲ್ಲಿ ಹೆಚ್ಚಳ, ಇನ್ನೊಂದೆಡೆ ಕಸ್ಟಮ್ಸ್ ಸುಂಕದಲ್ಲಿ ಸತತವಾಗಿ ಕಡಿತ ತಂದು ದೇಶೀ ಉತ್ಪಾದಕರು ವಿದೇಶೀ ಉತ್ಪಾದಕರೊಡನೆ ಅಸಮಾನ ಸ್ಪರ್ಧೆ ಎದುರಿಸುವಂತಾಗಿದೆ ಎಂದು ಸಂಸತ್ ಸದಸ್ಯರು ಸಲ್ಲಿಸಿರುವ ಮನವಿ ಹೇಳಿದೆ.

ಸ್ಪರ್ಧೆ ಅರ್ಥಪೂರ್ಣವಾಗುವುದು ಅದು ಸಮಾನರ ನಡುವೆ ನ್ಯಾಯರೀತಿಯಲ್ಲಿ ನಡೆದಾಗ ಮಾತ್ರ. ಆದರೆ ಉಕ್ಕು ಮಾರುಕಟ್ಟೆಯಲ್ಲಿ ದೇಶೀ ಉತ್ಪಾದಕರು ಮತ್ತು ವಿದೇಶಗಳಿಂದ ತಮ್ಮ ಉತ್ಪಾದನೆಯನ್ನು ಅತಿ ಕಮ್ಮಿ ಬೆಲೆಯಲ್ಲಿ ರಾಶಿ ಹಾಕುತ್ತಿರುವ ಹಿಂದಿನ ಸೋವಿಯತ್ ಒಕ್ಕೂಟದ ದೇಶಗಳು ಹಾಗೂ ಯುರೋಪಿಯನ್ ಮಿಲ್ಲುಗಳ ನಡುವೆ ಸಂಘರ್ಷ ನಡೆಯುವಂತಾಗಿದೆ. 'ಸೆಕೆಂಡ್ಸ್' 'ವೇಸ್ಟ್' ಮುಂತಾದ ಉಕ್ಕುಗಳು ದೊ[ಡ್ಡ] ಪ್ರಮಾಣದಲ್ಲಿ ಆಮದಾಗಿ ಭಾರತದ ಮಾರುಕಟ್ಟೆಯಲ್ಲಿ ಉಕ್ಕಿನ ಗುಣಮಟ್ಟವ[ನ್ನು] ಇಳಿದಿದೆ ಎಂಬುದನ್ನು ಕೂಡಾ ಹಣಕಾಸು ಮಂತ್ರಿಗಳು ಗಮನಿಸಬೇಕು ಎಂದು ಈ ಸಂಸತ್ ಸದಸ್ಯರು ಒತ್ತಾಯಿಸಿದ್ದಾರೆ.

ಸರಕಾರಕ್ಕೆ ದೇಶೀ ಉಕ್ಕು ಉದ್ದಿಮೆಯಿಂದ ಬರುವ ಸುಂಕ, ಲೆವಿ ಮೊತ್ತ 20%, ವಿದೇಶೀ ಉಕ್ಕು ಉತ್ಪಾದಕರಿಂದ ಸಿಗುವಂತದ್ದು 7% ಅಷ್ಟೆ. ಆದ್ದರಿಂದ ಸರಕಾರ ತಮ[್ಮ] ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಿರೀಕ್ಷಿಸುವ ಹಕ್ಕು ದೇಶೀ ಉಕ್ಕು ಉತ್ಪಾದಕರಿಗೆ ಇದೆ ಎಂದು ಈ ನಿಯೋಗ ಹಣಕಾಸು ಮಂತ್ರಿಗಳಿಗ ಹೇಳಿದೆ. ಕಸ್ಟಮ್ಸ್ ಸುಂಕವನ್ನು ಇಳಿಸುತ್ತ ಹೋಗಬೇಕು ಎಂದು ಚೆಲ್ಲಯ್ಯ ಸಮಿತಿಯ ಶಿಫಾರಸು ಹೇಳಿದ್ದರೂ, ಅದರ ಕೆಲವು ಅಂದಾಜುಗಳು ಅವಾಸ್ತವ ಎಂದು ಈಗ ಸಾಬೀತಾಗಿರುವುದರಿಂದ ಈಗಿನ ಕಸ್ಟಮ್ಸ್ - ಅಬಕಾರಿ ಸುಂಕ ವ್ಯವಸ್ಥೆಯ ಮರುವಿಮರ್ಶೆ ಅಗತ್ಯ ಎಂದಿರುವ ಈ 65 ಸಂಸತ್ ಸದಸ್ಯರು ಉಕ್ಕು ಉದ್ದಿಮೆಯ ವಾಸ್ತವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಇನ್ನಷ್ಟು ಕಸ್ಟಮ್ಸ್ ಸುಂಕ ಇಳಿತ ಮಾಡಬಾರದು ಮುಂತಾದ ಏಳು ಪ್ರಸ್ತಾವನೆಗಳನ್ನು ಹಣಕಾಸು ಮಂತ್ರಿಗಳ ಮುಂದಿಟ್ಟು 1997-98 ರ ಬಜೆಟ್ ರೂಪಿಸುವಾಗ ಇದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ತೀವ್ರಗೊಳ್ಳುತ್ತಿರುವ ವಳ್ಳಿಯಪ್ಪ ಮಿಲ್ ಕಾರ್ಮಿಕರ ದೀರ್ಘ ಹೋರಾಟ

ಕಳೆದ ಎರಡೂವರೆ ವರ್ಷಗಳಿಂದ ರಾಮನಗರ ತಾಲೂಕಿನ ಹೆಜ್ಜಾಲ ಪ್ರದೇಶದಲ್ಲಿರುವ ವಳ್ಳಿಯಪ್ಪ ಮಿಲ್ ಕಾರ್ಮಿಕರು ಈಗ ಮೂರನೇ ಬಾರಿಗೆ ಮಾಲೀಕರ ಸಿಐಟಿಯು ಸಂಘ ವಿರೋಧಿ ಧೋರಣೆಯ ವಿರುದ್ಧ ಸಿಡಿದೆದ್ದಿದ್ದಾರೆ.

ಹಿಂದಕ್ಕೆ 1994 ಮತ್ತು 1995ರಲ್ಲಿ ಎರಡು ಬಾರಿ ಮಾಲೀಕರು ಕಾರ್ಖಾನೆಗೆ ತಿಂಗಳುಗಟ್ಟಲೆ ಅಕ್ರಮ ಬೀಗ ಮುದ್ರೆ ಹಾಕಿ ಕಾರ್ಮಿಕರನ್ನು ಸಿಐಟಿಯು ಸಂಘದಿಂದ ದೂರ ಮಾಡಲು ಪ್ರಯತ್ನಿಸಿ ವಿಫಲರಾಗಿದ್ದರು. ಆದರೆ ಮತ್ತೊಮ್ಮೆ ಶ್ರೀವಳ್ಳಿಯಪ್ಪನವರು ತಮ್ಮ ಕೆಂಬಾವುಟದ ಮೇಲಿನ ದ್ವೇಷವನ್ನು ತೀರಿಸಿಕೊಳ್ಳಲು ಹೊರಟಿರುತ್ತಾರೆ. 10 ಮಂದಿ ಕಾರ್ಮಿಕ ಮುಖಂಡರನ್ನು ಕಾನೂನು ಬಾಹಿರವಾಗಿ ಏಕಪಕ್ಷೀಯವಾಗಿ ಒಂದೇ ದಿನದ ವಿಚಾರಣೆ ನಡೆಸಿ ಕೆಲಸದಿಂದ ವಜಾ ಮಾಡಿರುತ್ತಾರೆ. ಏಳು ವರ್ಷಗಳಿಂದ ಕಾರ್ಮಿಕರು ಮೂಲವೇತನದಲ್ಲಿ ಹೆಚ್ಚಳವಾಗದಿದ್ದರೂ, ಈ ಹಿಂದೆ 'ಚಮಚ'ಮೇಸ್ತ್ರಿಗಳ ಮೂಲಕ ಮಾಡಿಕೊಂಡಿದ್ದ ಒಪ್ಪಂದದ ಅವಧಿ ಮುಗಿದು 2 ವರ್ಷಗಳಾಗಿದ್ದರೂ ಸಂಘದೊಡನೆ ಹೊಸ ಕೈಗಾರಿಕಾ ಒಪ್ಪಂದ ಮಾಡಲು ಒಪ್ಪುತ್ತಿಲ್ಲ. 1994ರ ಪ್ರಥಮ ಬೀಗ ಮುದ್ರೆಯ ನಂತರ ಕೆಲಸ ನಿರಾಕರಿಸಲ್ಪಟ್ಟ 40 ಮಂದಿ 'ಕಾರ್ಡ್‌ಲೆಸ್' ಕಾರ್ಮಿಕರನ್ನು ಇನ್ನೂ ಕೆಲಸಕ್ಕೆ ತೆಗೆದುಕೊಂಡಿಲ್ಲ. 73 ಮಂದಿ ಕಾರ್ಮಿಕರು ಮೂರು ವರ್ಷಗಳಿಂದ 8 ವರ್ಷಗಳ ಕಾಲ ಸತತ ಖಾಯಂ ಕಾರ್ಮಿಕರಂತೆ ದುಡಿಯುತ್ತಾ ಬರುತ್ತಿದ್ದರೂ ಅವರನ್ನು ಖಾಯಂ ಮಾಡಿಲ್ಲ. ಇನ್ನೂ ಅವರುಗಳನ್ನು ಖಾಯಂ ಕಾರ್ಮಿಕರ ವೇತನದ ಮೂರನೇ ಒಂದಕ್ಕಿಂತಲೂ ಕಡಿಮೆ ಸಂಬಳದಲ್ಲಿ ದುಡಿಸಿಕೊಳ್ಳುತ್ತಿದ್ದಾರೆ. 8 ಗಂಟೆಗಿಂತ ಹೆಚ್ಚು ಸಮಯ ಕೆಲಸ ಮಾಡುವ ಕಾರ್ಮಿಕರಿಗೆ ಕಾನೂನು ಪ್ರಕಾರ ಎರಡು ಪಾಲು ಓವರ್ ಟೈಂ ಸಂಬಳ ಕೊಡುವ ಪದ್ಧತಿಯೇ ಟೆಕ್ಸ್‌ಟೈಲ್ ಮಿಲ್‌ಗಳಲ್ಲಿಲ್ಲವೆನ್ನುತ್ತಾ ಹೆಚ್ಚುವರಿ ವೇತನ ನಿರಾಕರಿಸುತ್ತಿದ್ದಾರೆ.

ಈ ರೀತಿ ಓವರ್‌ಟೈಂ ವೇತನ ಕೊಡಲು ನಿರಾಕರಿಸಲ್ಪಟ್ಟರೂ, ವಿದ್ಯುಚ್ಛಕ್ತಿ ಸರಬರಾಜು ನಿಂತಾಗ ಉತ್ಪಾದನೆಗೆ ಧಕ್ಕೆಯಾಗಬಾರದೆಂಬ ಉದ್ದೇಶದಿಂದ, ಸಂಬಂಧಪಟ್ಟ ಕಾರ್ಮಿಕ ರಜಾ ಹಾಕಿದಾಗ ಹಿಂದಿನ ಪಾಳೀಯ ಜನರೇಟರ್ ಆಪರೇಟರ್ ಕೆಲಸ ಮುಂದುವರಿಸಿದ್ದಕ್ಕಾಗಿ ಅಪ್ಪಣೆ ಇಲ್ಲದೆ ಯಾಕೆ ಕೆಲಸ ಮಾಡಿದೆ ಎಂಬ 'ಶೋಕಾಸ್' ನೋಟೀಸ್ ಕೊಟ್ಟಾಗ ಕಾರ್ಮಿಕರು ಪ್ರತಿಭಟಿಸಿದ್ದರು. ನಂತರ ಈ ರೀತಿ ಕೆಲಸ ಸ್ಥಗಿತಗೊಂಡ ಸಮಯಕ್ಕೆ ಪಾಳೆಯ ಎಲ್ಲಾ ಕಾರ್ಮಿಕರ ಸಂಬಳವನ್ನು ಅಕ್ಟೋಬರ್ ತಿಂಗಳ ವೇತನದಿಂದ ಕಡಿತ ಮಾಡಿದಾಗ ಸಂಬಳ ಪಡೆದುಕೊಳ್ಳದೆ ಪ್ರತಿಭಟಿಸಿದರು. ನಂತರ ಫ್ಯಾಕ್ಟರಿ ಇನ್ಸ್

8ನೇ ಪುಟ ನೋಡಿ

ರೈತರಿಗೆ 8 ಗಂಟೆವಿದ್ಯುತ್ ರೈತ ಸಂಘ ಸ್ವಾಗತ

ರಾಜ್ಯದ ರೈತರ ಪಂಪ್‌ಸೆಟ್‌ಗಳಿಗೆ ಇನ್ನು ಮುಂದೆ ಪ್ರತಿದಿನ 8 ಗಂಟೆ ವಿದ್ಯುತ್ ಸರಬರಾಜು ಮಾಡಲು ಸರಕಾರ ನಿರ್ಧರಿಸಿರುವುದನ್ನು ಕರ್ನಾಟಕ ಪ್ರಾಂತ ರೈತ ಸಂಘ ಕೋಲಾರ ಜಿಲ್ಲಾ ಸಮಿತಿ ಸ್ವಾಗತಿಸಿದೆ. ಇದು ರೈತರು ನಡೆಸುತ್ತಿರುವ ಹೋರಾಟಕ್ಕೆ ಸಿಕ್ಕ ಜಯ ಎಂದು ತನ್ನ ಅಭಿಪ್ರಾಯ ವ್ಯಕ್ತಪಡಿಸಿದೆ.

ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡಲು ದುಡಿಮೆಗಾರ ವರ್ಗಕ್ಕೆ ಕರೆ

ಜಾತಿ, ಧರ್ಮ, ಭಾಷೆಯ ಹೆಸರಿನಲ್ಲಿ ಜನರನ್ನು ಛಿದ್ರಗೊಳಿಸಲು ಹೊರಟ ಕೋಮುವಾದಿ, ಮೂಲಭೂತವಾದಿ ಶಕ್ತಿಗಳ ವಿರುದ್ಧ ದುಡಿಮೆಗಾರ ವರ್ಗ ದೊಡ್ಡ ರೀತಿಯ ಹೋರಾಟಕ್ಕೆ ಸಜ್ಜಾಗಲು ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾದ ನಿತ್ಯಾನಂದ ಸ್ವಾಮಿ ಕರೆ ನೀಡಿದರು.

ಅವರು ಹೊನ್ನಾವರದಲ್ಲಿ ಡಿಸೆಂಬರ್ 15-16ರಂದು ನಡೆದ ಸಿಐಟಿಯು ಉ.ಕ. ಜಿಲ್ಲಾ 2ನೇ ಸಮ್ಮೇಳನದ ಕೊನೆಗೆ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ನಗರದಲ್ಲಿ ಸುರಿಯುತ್ತಿದ್ದ ಭಾರಿ ಮಳೆಯನ್ನು ಲೆಕ್ಕಿಸದೇ ಸಾವಿರಾರು ಕಾರ್ಮಿಕರು ಮೆರವಣಿಗೆ ನಡೆಸಿ ಬಹಿರಂಗ ಸಭೆಯಲ್ಲಿ ಪಾಲ್ಗೊಂಡಿದ್ದರು.

ಶ್ರೀ ನಿತ್ಯಾನಂದ ಸ್ವಾಮಿಯವರು ಮುಂದುವರೆದು ಮಾತನಾಡುತ್ತಾ ಭಾರತ ಎಂದೆಂದೂ ಹಿಂದೂ ರಾಷ್ಟ್ರವಾಗಲು ಸಾಧ್ಯವಿಲ್ಲ. ಇಲ್ಲಿ ಹಲವು ಧರ್ಮದ ಜನರು ಇದ್ದಾರೆ. ಭಾರತ ಸ್ವತಂತ್ರಕ್ಕಾಗಿ ಇವರೆಲ್ಲ ಹೋರಾಡಿದ್ದಾರೆ. ಇದೊಂದು ಜಾತ್ಯಾತೀತ ರಾಷ್ಟ್ರ. ಆದರೆ ಕೋಮುವಾದಿ ಶಕ್ತಿಗಳ ಇತ್ತೀಚಿನ ಬೆಳವಣಿಗೆಯನ್ನು ನಾವು ಗಮನಿಸಬೇಕಾಗಿದೆ. ಅಂಥ ದುಷ್ಟ ಶಕ್ತಿಗಳ ಬಗ್ಗೆ ಕಾರ್ಮಿಕ ವರ್ಗ ಎಚ್ಚರದಿಂದ ಇಬೇಕು. ಜಾತ್ಯಾತೀತ ಪ್ರಜಾಪ್ರಭುತ್ವ ಚಳುವಳಿ ಬಲಪಡಿಸಲು ನಾವೆಲ್ಲ ಪ್ರಯತ್ನಿಸೋಣ ಎಂದರು.

ಇನ್ನೊಬ್ಬ ಭಾಷಣಕಾರರಾಗಿ ಆಗಮಿಸಿದ್ದ ವಿಜೆಕೆನಾಯರ್ ಇವರು ಮಾತನಾಡುತ್ತ "ಏರುತ್ತಿರುವ ನಿತ್ಯೋಪಯೋಗಿ ವಸ್ತುಗಳ ಬೆಲೆಯಿಂದ ಕಾರ್ಮಿಕವರ್ಗದ ಬಡಜನರ ಜೀವನ ಕಷ್ಟದಲ್ಲಿ ಸಿಲುಕಿದೆ. ವ್ಯಾಪಾರಿಗಳಷ್ಟೇ ಅಲ್ಲ, ಇಂದು ಸರಕಾರವೇ ಬೆಲೆಗಳನ್ನು ಏರಿಸುತ್ತಿದೆ. ಆದರೆ ದುಡಿಮೆಗಾರರ ಕೂಲಿ ಹೆಚ್ಚಾಗುತ್ತಿಲ್ಲ, ಬಾಲ ಕಾರ್ಮಿಕ ಬಗ್ಗೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಕಟ್ಟುನಿಟ್ಟಾಗಿ ಜಾರಿಯಾಗಬೇಕೆಂದು ಅವರು ಒತ್ತಾಯಿಸಿದರು. ಸರಕಾರ ವಿದ್ಯುಚ್ಛಕ್ತಿ, ನೀರು, ರಸ್ತೆಗಳ ಸಮರ್ಪಕ ವ್ಯವಸ್ಥೆಗೆ ಕ್ರಮ ತೆಗೆದುಕೊಳ್ಳಬೇಕು"ಎಂದು ಆಗ್ರಹಿಸಿದರು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಶಂಕರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ.ಎಸ್.ನಾಯ್ಕ ಬಹಿರಂಗ ಸಭೆಯಲ್ಲಿ ಮಾತನಾಡಿದರು. ತಿಲಕ ಗೌಡ ಸ್ವಾಗತಿಸಿದರು. ಸುಭಾಷ್ ಕೊಪ್ಪಿಕರ ವಂದಿಸಿದರು. ಎಂ.ಬಿ.ನಾಯಕ ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನ ತೆಗೆದುಕೊಂಡ ನಿರ್ಣಯಗಳು

1. ಕೋಮುವಾದಿ ಶಕ್ತಿಗಳ ಕುಟಿಲ ತಂತ್ರಕ್ಕೆ ಮರುಳಾಗದಿರಲು ದುಡಿಮೆಗಾರರ ವರ್ಗಕ್ಕೆ ಕರೆ.

2. ಇ.ಎಸ್.ಐ. ಸೌಲಭ್ಯವನ್ನು ಹಂಚು ಮತ್ತು ಇತರೆ ಕಾರ್ಮಿಕರಿಗೆ ಭಟ್ಕಳ, ಹೊನ್ನಾವರ ತಾಲೂಕುಗಳಲ್ಲಿ ನೀಡಲು ಒತ್ತಾಯ.

3. ಜಿಲ್ಲೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಮಿಕರನ್ನು ದುಡಿಸಿಕೊಳ್ಳುವ ಪದ್ಧತಿ ನಿಲ್ಲಬೇಕು. ಈಗ ದುಡಿಯುತ್ತಿರುವವರನ್ನು ಖಾಯಂಗೊಳಿಸಲು ಒತ್ತಾಯ.

4. ದಾಂಡೇಲಿ ಪ್ಲೈವುಡ್ ಕಾರ್ಖಾನೆ ಕೂಡಲೇ ಪುನರ್ ಆರಂಭಿಸಬೇಕು. ನೂರಾರು ಕಾರ್ಮಿಕರಿಗೆ ಬಾಕಿ ವೇತನವನ್ನು ಪಾವತಿಸಲು ಒತ್ತಾಯ.

5. ಮುರ್ಡೇಶ್ವರ ಸೀಫುಡ್ಸ್, ಕಾಸರಗೋಡು ಆಡಳಿತ ವರ್ಗದ ತಪ್ಪು ಧೋರಣೆಯಿಂದ ಸ್ಥಗಿತಗೊಳಿಸಿದ ಉತ್ಪಾದನೆ ಪುನಃ ಪ್ರಾರಂಭವಾಗಬೇಕು. ಅಲ್ಲಿಯ ಕಾರ್ಮಿಕರಿಗೆ ಪುನಃ ಕೆಲಸ ನೀಡಬೇಕು. ಒಪ್ಪಂದದ ಪ್ರಕಾರ ಬೋನಸ್ ವೇತನ ನೀಡಬೇಕು.

6. ಶರಾವತಿಗೆ ಹೊಸ ಸೇತುವೆ ನಿರ್ಮಾಣಕ್ಕೆ ಕೇಂದ್ರ ಸರಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು.

7. ಹಂಚು ಕಾರ್ಮಿಕರಿಗೆ ಪರಿಷ್ಕೃತ ಕನಿಷ್ಟ ವೇತನ ನಿಗದಿಯಾಗಬೇಕು. ಮತ್ತು 1700ರ ಬೆಲೆ ಸೂಚ್ಯಂಕದ ಮೇಲಿನ ಪ್ರತಿ ಅಂಶಕ್ಕೆ 5 ಪೈಸೆಯಂತೆ ತುಟ್ಟಿಭತ್ಯೆ ಸಿಗಬೇಕು.

8. ಅಂಗನವಾಡಿ ನೌಕರರನ್ನು ಖಾಯಂಗೊಳಿಸಿ ಅವರಿಗೆ ಜೀವನಾ[ವಶ್ಯಕ] ವೇತನ ಹಾಗೂ ಇತರ ಕಾರ್ಮಿಕ ವೇತನ ನೀಡಬೇಕೆಂದು ಒತ್ತಾಯ.

9. ಎಲ್.ಐ.ಸಿ. ಖಾಸಗೀಕರಣದ ಬಗ್ಗೆ ಕೇಂದ್ರ ಸರಕಾರ ಮಸೂದೆ ತರಲು ಉದ್ದೇಶಿಸಿರುವುದನ್ನು ಕೈ ಬಿಡಬೇಕು.

ಸಮ್ಮೇಳನದಲ್ಲಿ ಜಿಲ್ಲಾ ಸಮಿತಿಯ ನೂತನ ಅಧ್ಯಕ್ಷರಾಗಿ ಎಂ.ಬಿ.ನಾಯಕ, ಪ್ರಧಾನ ಕಾರ್ಯದರ್ಶಿಯಾಗಿ ಟಿ.ಎಸ್.ನಾಯ್ಕ ಆಯ್ಕೆಯಾದರು. ಉಪಾಧ್ಯಕ್ಷರಾಗಿ ತಿಲಕ ಗೌಡ ಹೊನ್ನಾವರ, ಎಸ್.ವಿ.ಸಾವಂತ ದಾಂಡೇಲಿ, ಕಾರ್ಯದರ್ಶಿಗಳಾಗಿ ಸುಭಾಷ್ ಕೊಪ್ಪಿಕರ ಭಟ್ಕಳ, ಮಾಧವ ಸೇರೆಗಾರ ದಾಂಡೇಲಿ ಹಾಗೂ ಖಜಾಂಚಿಯಾಗಿ ಸಿ.ಆರ್.ಶಾನಭಾಗ ಸಿರ್ಸಿ ಇವರುಗಳು ಆಯ್ಕೆಗೊಂಡರು. ಜಿಲ್ಲಾ ಕಾರ್ಯಕಾರಿ ಸಮಿತಿಗೆ 22 ಜನ ಆಯ್ಕೆಗೊಂಡರು. □

"ಕನಿಷ್ಟ ಕೂಲಿ ಕೂಡಲೇ ಜಾರಿಯಾಗಲಿ"

ಗಾರ್ಮೆಂಟ್ಸ್ ಕಾರ್ಮಿಕರ ಬೃಹತ್ ಸಮಾವೇಶದ ಆಗ್ರಹ



ಬೆಂಗಳೂರು ನಗರದ ಪುರಭವನದಲ್ಲಿ ಡಿಸೆಂಬರ್ 29 ರಂದು ಕಿಕ್ಕಿರಿದಿದ್ದ ಸುಮಾರು 2 ಸಾವಿರಕ್ಕೂ ಹೆಚ್ಚು ಸಿದ್ಧ ಉಡುಪು ಉದ್ಯಮಗಳ ಮಹಿಳಾ ಕಾರ್ಮಿಕರು ತಮ್ಮ ಮೇಲಾಗುತ್ತಿರುವ ದೌರ್ಜನ್ಯ, ಶೋಷಣೆಗಳನ್ನು ದಿನನಿತ್ಯದ ನೋವುಗಳನ್ನು ಜನ ಪ್ರತಿನಿಧಿಗಳ ಮುಂದಿಡಲು ಕಾತರದಿಂದ ಕಾಯುತ್ತಿದ್ದರು.

ಬೆಂಗಳೂರು ಡಿಸ್ಟ್ರಿಕ್ಟ್ ಗಾರ್ಮೆಂಟ್ಸ್ ವರ್ಕರ್ಸ್ ಯೂನಿಯನ್(ಸಿಐಟಿಯು) ಸಂಘಟಿಸಿದ್ದ ಈ ಸಮಾವೇಶದಲ್ಲಿ ನಗರದ ವಿವಿಧ ಸಿದ್ಧ ಉಡುಪುಗಳ ಕಾರ್ಖಾನೆಗಳ ಕಾರ್ಮಿಕರು ತಮಗೆ ನ್ಯಾಯಯುತವಾಗಿ ದೊರಕಬೇಕಾದ ಸೌಲಭ್ಯ, ಹಕ್ಕುಗಳು ಸಿಗುವಂತೆ ಆಗ್ರಹಿಸಿದರು.

ಸಮಾವೇಶವನ್ನು ಉದ್ಘಾಟಿಸಿದ ಕಾರ್ಮಿಕ ಮಂತ್ರಿಗಳಾದ ಸತ್ಯನಾರಾಯಣರವರು ಮಾತನಾಡಿ ಕಾರ್ಮಿಕರ ನಿಜವಾದ ಸಮಸ್ಯೆಗಳನ್ನು ಬಗೆಹರಿಸಲು ಸರಕಾರಕ್ಕೆ ಮನಸಿದ್ದರೂ ಸಹ ಸರಿಯಾದ ಸೌಲಭ್ಯಗಳಿಲ್ಲದೆ, ಸರಿಯಾದ ಸಿಬ್ಬಂದಿವರ್ಗ ಇಲ್ಲದೆ ಕಾನೂನನ್ನು ಜಾರಿ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು. ಮುಂದುವರೆಯುತ್ತಾ ಕಾನೂನು ಜಾರಿಗೊಳಿಸಲು ತ್ರಿಪಕ್ಷೀಯ ಸಮಿತಿಯನ್ನು ರಚಿಸಲು ಸರಕಾರ ಈಗಾಗಲೇ ತೀರ್ಮಾನ ಮಾಡಿದ್ದು ಕೆಲವೇ ದಿನಗಳಲ್ಲಿ ಈ ಸಮಿತಿಯು ಅಸ್ತಿತ್ವಕ್ಕೆ ಬರುತ್ತದೆಂದು ಹೇಳಿದರು.

ಈ ಸಮಾವೇಶದ ಪ್ರಸ್ತಾವನಾ ಭಾಷಣ ಮಾಡಿದ ಜಿ.ರಾಮಯ್ಯನವರು ಕಾರ್ಮಿಕರ ಕುಂದುಕೊರತೆಗಳನ್ನು ವಿವರಿಸಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸಿಪಿಐ(ಎಂ) ಶಾಸಕ ಕಾಂ. ಶ್ರೀರಾಮರೆಡ್ಡಿಯವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕಾರ್ಮಿಕ ವರ್ಗ ಬಲಿಷ್ಠ ಸಂಘಟನೆಯನ್ನು ಕಟ್ಟಿಕೊಳ್ಳಬೇಕು ಹಾಗೂ ರಾಜಕೀಯವಾಗಿ ತನ್ನನ್ನು ಗುರುತಿಸಿಕೊಳ್ಳದಿದ್ದರೆ ಸಮಸ್ಯೆಗಳು ಬಗೆಹರಿಯುವುದು ಕಷ್ಟವಾಗುತ್ತದೆ. ಹೊಸ ಆರ್ಥಿಕ ನೀತಿ ಕೈಗಾರಿಕಾ ನೀತಿಯ ಹಿನ್ನಲೆಯಲ್ಲಿ ಮಾಲೀಕ ವರ್ಗ ತೀವ್ರವಾದ ಶೋಷಣೆಯನ್ನು ಮಾಡುತ್ತಿದೆ ಎಂದರು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಕಾಂ.ವಿಜೆಕೆ ನಾಯರ್‌ರವರು ಮಾತನಾಡಿ ನಮ್ಮ ರಾಜ್ಯದಲ್ಲಿ ಕಾನೂನು ಸರಿಯಾದ ರೀತಿಯಲ್ಲಿ ಜಾರಿಯಾಗಬೇಕಾದರೆ ಸರಿಯಾದ ನೆಲೆಗಟ್ಟಿನಲ್ಲಿ ಹೋರಾಟ ಮುಂದುವರಿಯಬೇಕೆಂದು ಕರೆ ನೀಡಿದರು. ಅಸಂಘಟಿತ ಕಾರ್ಮಿಕರು ಈ ಹಿನ್ನೆಲೆಯಲ್ಲಿ ಸಿದ್ಧ ಉಡುಪು ತಯಾರು ಮಾಡುವ ಕಾರ್ಮಿಕರು ಹೋರಾಟವನ್ನು ಮುಂದುವರಿಸುತ್ತಿರುವುದನ್ನು ನೋಡಿ ನನಗೆ ಸಂತೋಷವಾಗುತ್ತಿದೆ. ಮತ್ತಷ್ಟು ಮುನ್ನಡೆಯಿರಿ ಎಂದು ಕರೆ ನೀಡಿದರು. ಸರಕಾರ ಕಾರ್ಮಿಕರಿಗೆ ಜೀವನಾವಶ್ಯಕ ಕೂಲಿಯನ್ನು ನಿಗದಿ ಮಾಡಿದರೆ ನಮ್ಮ ರಾಜ್ಯದಲ್ಲಿ 40 ಕೋಟಿ ರೂ. ಪ್ರತಿ ದಿವಸ ಚಲಾವಣೆಯಾಗುತ್ತಿದೆ. ಇದರಿಂದ ಮತ್ತಷ್ಟು ಕೈಗಾರಿಕೆಗಳ ಬೆಳವಣಿಗೆಯಾಗುತ್ತದೆ. ಮತ್ತಷ್ಟು ಕಾರ್ಮಿಕರಿಗೆ ಕೆಲಸ ಸಿಗುತ್ತದೆ. ಇದನ್ನು ಸರಕಾರ ಅರ್ಥ ಮಾಡಿಕೊಳ್ಳಬೇಕೆಂದು ಕಿವಿಮಾತನ್ನು ಹೇಳಿದರು.

ಸಿಪಿಐ(ಎಂ)ನ ಕಾರ್ಯದರ್ಶಿ ಕಾಂ. ಪಿ.ರಾಮಚಂದ್ರರಾವ್‌ರವರು ಮಾತನಾಡುತ್ತಾ ಸಿದ್ಧ ಉಡುಪು ತಯಾರು ಮಾಡುವ ಕಾರ್ಮಿಕರು ಎಚ್ಚೆತ್ತುಕೊಳ್ಳುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಈ ಹೋರಾಟವನ್ನು ಮುಂದೆ ತೆಗೆದುಕೊಂಡು ಹೋಗುತ್ತಿರುವ ಸಂಘಟನೆಯನ್ನು ಅಭಿನಂದಿಸಿದರು. ರೈತ ಮುಖಂಡರಾದ ಜಗನ್ನಾಥ್, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷರಾದ ವಿಮಲಾ ಮತ್ತು ಪವರ್‌ಲೂಂ ಕಾರ್ಮಿಕ ಮುಖಂಡರಾದ ಮೀನಾಕ್ಷಿ ಸುಂದರಂ, ಕೆ.ಎಸ್.ಸುಬ್ರಹ್ಮಣ್ಯ ಹಾಗೂ ಅಂಗನವಾಡಿ ನೌಕರರ ಸಂಘಟನೆಯ ಮುಖಂಡರಾದ ಎಸ್. ವರಲಕ್ಷ್ಮಿ, ವಿದ್ಯಾರ್ಥಿ ಮುಖಂಡರಾದ ರಾಮಕೃಷ್ಣ ಇನ್ನೂ ಮುಂತಾದವರು ತಮ್ಮ ಬೆಂಬಲ ಸೂಚಿ ಮಾತನಾಡಿದರು.

ಬೆಂಗಳೂರು ಡಿಸ್ಟ್ರಿಕ್ಟ್ ಗಾರ್ಮೆಂಟ್ಸ್ ವರ್ಕರ್ಸ್ ಯೂನಿಯನ್‌ನ ಅಧ್ಯಕ್ಷರಾದ ಆರ್.ಶ್ರೀನಿವಾಸ್‌ರವರು ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಸಮಾವೇಶದ ಅಗತ್ಯವನ್ನು ವಿವರಿಸುತ್ತಾ ಕಳೆದ ಎರಡು ವರ್ಷಗಳಲ್ಲಿ ಕಾನೂನು ಜಾರಿಗಾಗಿ, ಸಂಘಟನೆ ಕಟ್ಟಲು ಪಟ್ಟ ಶ್ರಮವನ್ನು, ಎದುರಿಸಿದ ಕಷ್ಟ-ಕಾರ್ಪಣ್ಯಗಳನ್ನು ನೆನಪಿಸಿದರು.

ಆರಂಭದಲ್ಲಿ ಸಿಐಟಿಯು ಮುಖಂಡ ಹೆಚ್.ಎನ್.ಗೋಪಾಲಗೌಡರು ಸ್ವಾಗತಿಸಿದರು. ವಿವಿಧ ಕಾರ್ಖಾನೆಗಳಿಂದ ಬಂದಿದ್ದ ಕಾರ್ಮಿಕರ ಪರವಾಗಿ ಸಮಾವೇಶದಲ್ಲಿ ಮಾತನಾಡಿದ ಅವರ ಪ್ರತಿನಿಧಿಗಳು ತಮ್ಮ ಸಮಸ್ಯೆಗಳತ್ತ ಸಭಿಕರ ಗಮನ ಸೆಳೆದರು.

ಕನಿಷ್ಠ ಕೂಲಿಯನ್ನು ಕೂಡಲೇ ಜಾರಿಗೊಳಿಸಬೇಕು, ಕನಿಷ್ಠ 2500 ರೂ. ತಿಂಗಳಿಗೆ ನಿಗದಿಯಾಗಬೇಕು, ತುಟ್ಟಿಭತ್ಯೆ ಪ್ರತಿ ಪಾಯಿಂಟಿಗೆ 5 ಪೈಸೆಯಂತೆ ನಿಗದಿಯಾಗಬೇಕು, ಕಾರ್ಮಿಕರ ಹೋರಾಟದಲ್ಲಿ ಪೋಲೀಸರ ಮಧ್ಯಪ್ರವೇಶ ನಿಲ್ಲಬೇಕು, ಸಾಫ್ಟ್ರಾಟ್ ಅಶೋಕ ಮಾಲೀಕರ ದಬ್ಬಾಳಿಕೆಯನ್ನು ಖಂಡಿಸುವ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ವರದಿ : ಲೀಲಾವತಿ



ಜನಪರ ಬದಲಿ ವ್ಯವಸ್ಥೆ ದುಡಿಮೆಗಾರ ವರ್ಗದಿಂದ ಮಾತ್ರ ಸಾಧ್ಯ

- ವಿ.ಜೆ.ಕೆ.ನಾಯರ್

ಎರಡು ದಿನದ ಉತ್ತರ ಕನ್ನಡ ಜಿಲ್ಲಾ ಸಿಐಟಿಯು 2ನೇ ಸಮ್ಮೇಳನವನ್ನು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ವಿಜೆಕೆ ನಾಯರ್, ಡಿಸೆಂಬರ್ 15ರಂದು ಹೊನ್ನಾವರದಲ್ಲಿ ಉದ್ಘಾಟಿಸಿ ಮಾತನಾಡುತ್ತಾ "ಈಗಿರುವ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಪರ್ಯಾಯವಾದ ಬದಲಿ ವ್ಯವಸ್ಥೆಯನ್ನು ಸೃಷ್ಟಿಸುವ ಅಗತ್ಯ ಇದೆ. ಎಲ್ಲಿಯವರೆಗೆ ಕಾರ್ಮಿಕ ವರ್ಗದಲ್ಲಿ ಇದು ಸಾಧ್ಯ ಇಲ್ಲವೋ ಅಲ್ಲಿಯವರೆಗೆ ನಾವು ಪ್ರಬಲ ಆಗಲು ಸಾಧ್ಯವಿಲ್ಲ, ಈ ಬದಲಿ ವ್ಯವಸ್ಥೆಯ ಸೃಷ್ಟಿ ಸ್ಥಳೀಯವಾಗಿ ಒಂದು ಸಾಮೂಹಿಕ ಚಳುವಳಿಯಾಗಿ ಬೆಳೆಯಬೇಕಾಗಿದೆ" ಎಂದರು. ಕಾರ್ಮಿಕ ರಂಗದ ವಿವಿಧ ಬೇಡಿಕೆಗಳ ಆಧಾರದಲ್ಲಿ ನಡೆದ ಹೋರಾಟದಿಂದಾಗಿ ನಾವು ಒಂದು ಶಕ್ತಿಯಾಗಿ ಬೆಳೆದಿದ್ದೇವೆ. ಬದಲಿ ವ್ಯವಸ್ಥೆಯನ್ನು ರೂಪಿಸಲು ಕಾರ್ಮಿಕ ವರ್ಗದ ಪ್ರಭುತ್ವಕ್ಕೆ ಮಾತ್ರ ಸಾಧ್ಯ ಎಂದರು.

ಉತ್ತರ ಕನ್ನಡದಲ್ಲಿ ನಡೆದ ಹೋರಾಟವನ್ನು ನೆನೆಯುತ್ತಾ ಕಾಂ. ವಿಜೆಕೆ.ನಾಯರ್ ಅವರು 'ಸ್ವಾತಂತ್ರ್ಯ ಪೂರ್ವದಲ್ಲೂ ಕೂಡ ಜಿಲ್ಲೆಯಲ್ಲಿ ರೈತ, ಕಾರ್ಮಿಕರ ಹೋರಾಟ ದೊಡ್ಡ ರೀತಿಯಲ್ಲೇ ನಡೆದಿದೆ' ಎಂದರು.

ಕಾರ್ಖಾನೆಯಲ್ಲಿ ಮಾತ್ರ ನಮಗೆ ಕಾರ್ಮಿಕರು ಕಾಣುತ್ತಿದ್ದರು. ಅದರೆ ಹೊರಗೆ ಕೂಡ ಕಾರ್ಮಿಕರಿದ್ದಾರೆ. ಹಾಗಾಗಿ ನಾವು ಸಮಾಜದ ವಿವಿಧ ಜನಸಮುದಾಯದ ನಡುವೆ ಬೆರೆಯಬೇಕು ಮತ್ತು ಅವರನ್ನು ಸಂಘಟಿಸಿ ರಾಜಕೀಯ ಪ್ರಜ್ಞಾವಂತರನ್ನಾಗಿಸಬೇಕಾಗಿದೆ ಎಂದರು. ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಅಭಿವೃದ್ಧಿ ಎಂದರೆ ಉದ್ಯೋಗವನ್ನು ಹೆಚ್ಚಿಸುವುದೂ ಸಹ ಆಗಿತ್ತು. ಆದರೆ ಇದು ತಂತ್ರಜ್ಞಾನದ ಅಳವಡಿಕೆಯ ಹೆಸರಿನಲ್ಲಿ ಉದ್ಯೋಗರಹಿತ ಅಭಿವೃದ್ಧಿ ಆಗುತ್ತಿದೆ. ಇದು ಈ ವರ್ಗ ಸಮಾಜದಲ್ಲಿ ಹೊಸ ಬಂಡವಾಳ ಗಾರರನ್ನು ಹುಟ್ಟುಹಾಕುತ್ತದೆ. ಮತ್ತು ಬಂಡವಾಳ ಗಾರರ ಬಂಡವಾಳವನ್ನು ಹೆಚ್ಚಿಸುತ್ತದೆ. ಇದು ಹೊಸ ಅರ್ಥಿಕ ನೀತಿಯ ಕಟ್ಟಫಲ" ಎಂದರು.

ಪ್ರಾರಂಭದಲ್ಲಿ ಹಿರಿಯ ಕಾರ್ಮಿಕ ಮುಖಂಡರಾದ ಅಬ್ರಹಾಂ ಕರ್ಕಡ ಅವರು ಧ್ವಜಾರೋಹಣ ಮಾಡಿ ಮಾತನಾಡುತ್ತಾ ಕಾರ್ಮಿಕರಿಗೆ ಅಗತ್ಯವಾದ ರಾಜಕೀಯ ಪ್ರಜ್ಞೆಯ ಸ್ವರೂಪವನ್ನು ಮತ್ತು ಅದರ ಮಹತ್ವವನ್ನು ವಿವರಿಸಿದರು. ಕಾರ್ಮಿಕರಿಗೆ ನಮ್ಮ ರಾಜಕೀಯ ಮುನ್ನೋಟವನ್ನು ತಿಳಿಸುವುದರೊಂದಿಗೆ ಒಂದು ರಾಜಕೀಯ ಶಕ್ತಿಯಾಗಿ ಬೆಳೆಯುವ ಅಗತ್ಯವನ್ನು ವಿವರಿಸಿದರು.

ಅತಿಥಿಗಳಾಗಿ ಆಗಮಿಸಿದ್ದ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಶಂಕರ್‌ರವರು ಮಾತನಾಡುತ್ತಾ "ಕೈಗಾರಿಕಾವಾರು ಸಂಘಟನೆಯನ್ನು ಕಟ್ಟುವವರೊಂದಿಗೆ ನಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಆರ್ಥಿಕ ಬೇಡಿಕೆಗಳನ್ನು ಇಟ್ಟು ಹೋರಾಟ ಮಾಡುವುದಷ್ಟೇ ಅಲ್ಲದೆ ಇಂತಹ ವಿಶಾಲ ದೃಷ್ಟಿಕೋನವನ್ನು ಸಿಐಟಿಯು ಕಾರ್ಮಿಕರು ಬೆಳೆಸಿಕೊಳ್ಳಬೇಕಾಗಿದೆ"ಎಂದರು. ಇನ್ನೊಬ್ಬ ಮುಖ್ಯ ಅತಿಥಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಕಾಂ.ನಿತ್ಯಾನಂದ ಸ್ವಾಮಿ ಅವರು ಮಾತನಾಡಿ ಕಾರ್ಮಿಕರ ಎದುರಿಗಿರುವ ಆರ್ಥಿಕ, ರಾಜಕೀಯ, ಸಾಮಾಜಿಕ ಮರ್ಜಿಗೆ ಅನುಗುಣವಾಗಿ ನಡೆಯುವಂತಹದ್ದಲ್ಲ, ಇದನ್ನು ನಮ್ಮ ಸಂಘಟನೆ ಒಪ್ಪುವುದಿಲ್ಲ ಬದಲಾಗಿ ಪ್ರಜಾಸತ್ತಾತ್ಮಕ ರೀತಿಯನ್ನು ರೂಪಿಸುವುದರಲ್ಲಿ ನಂಬಿಕೆ ಇಟ್ಟಿದೆ, ಎಂದರು. ನರಸಿಂಹರಾಯರ ಕಾಂಗ್ರೆ ಮತ್ತು ಬಿಜೆಪಿಯ ಧೋರಣೆ, ಅರ್ಥಿಕ ನೀತಿಗಳೆರಡೂ ಒಂದೇ ರೀತಿಯದ್ದಾಗಿದೆ. ಇದು ಬಂಡವಾಳ ವರ್ಗದ ಮತ್ತು ಭೂಮಾಲಿಕ ವರ್ಗದ ಹಿತಾಸಕ್ತಿಯನ್ನು ಕಾಯುವಂತಹುದಾಗಿದೆ ಎಂದು ಹೇಳಿ 1996ರ ಚುನಾವಣೆಯಲ್ಲಿ ಜನತೆ ಕೊಟ್ಟ ತೀರ್ಪಿಗೆ ಅನುಗುಣವಾಗಿ ಮೊದಲ ಬಾರಿಗೆ ಸಂಯುಕ್ತ ರಂಗ ಸರಕಾರದ ಕೆಲವು ದೌರ್ಬಲ್ಯಗಳೊಂದಿಗೆ ಕಾರ್ಮಿಕರ ಜವಾಬ್ದಾರಿಯನ್ನು ವಿವರಿಸಿದರು. ಮತ್ತು ಜಿಲ್ಲೆಯ ಸಮಸ್ಯೆಗಳ ಆಧಾರದಲ್ಲಿ ದ್ವಿಮುಖ ಧೋರಣೆಗಳನ್ನು ಕಟುವಾಗಿ ಟೀಕಿಸಿದರು.

ಎಸ್.ಎಫ್.ಐ. ಜಿಲ್ಲಾ ಸಮಿತಿ ಕಾರ್ಯದರ್ಶಿ ಯುವರಾಜ ಕಂಬಾಳಿಮಠ ಮತ್ತು ಡಿವೈಎಫ್‌ಐನ ಉತ್ತರ ಕನ್ನಡ ಜಿಲ್ಲಾಸಂಚಾಲಕ ವಿಠಲ್ ಶುಭಾಶಯ ಕೋರಿ ಮಾತನಾಡಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಹರೀಶ್‌ನಾಯ್ಕ ವಹಿಸಿದ್ದರು. ವೇದಿಕೆ ಮೇಲೆ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ.ಎಸ್.ನಾಯ್ಕ, ದಾಂಡೇಲಿ ಪೇಪರ್‌ಮಿಲ್ ಕಾರ್ಮಿಕರ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಎಸ್.ವಿ.ಸಾವಂತ ಮತ್ತಿತರ ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತಿರಿದ್ದರು. ತಿಲಕ ಗೌಡರವರು ಸ್ವಾಗತ ಭಾಷಣ ಮಾಡಿದರು.

ಪೌರಸೇವಾ ನೌಕರರ ಹೋರಾಟಕ್ಕೆ ಸಿಪಿಐ(ಎಂ)ಬೆಂಬಲ

ಪೌರಸೇವಾ ನೌಕರರು ತಮ್ಮ ಬೇಡಿಕೆಗಳ ಸಲುವಾಗಿ ಡಿ.26 ರಿಂದ ಹೂಡಿರುವ ಮುಷ್ಕರಕ್ಕೆ ತನ್ನ ಬೆಂಬಲ ವ್ಯಕ್ತಪಡಿಸಿ, ಪೌರಸೇವಾ ನೌಕರರ ಮುಷ್ಕರದಿಂದಾಗಿ ನೀರು ಸರಬರಾಜು ನಿಂತು ಹೋಗಿದೆ. ಊರು ಸ್ವಚ್ಛತೆಯ ಕೆಲಸ ನಿಂತು ಹೋಗಿ ಇದರಿಂದಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡುವ ಸಾಧ್ಯತೆ ಇರುವುದರಿಂದ ಸರಕಾರ ಮತ್ತು ಸಂಘದ ಮುಖಂಡರು ಚರ್ಚೆ ಮೂಲಕ ಈ ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕೆಂದು ಪಕ್ಷವು ಒತ್ತಾಯಿಸಿದೆ.

ಮುಷ್ಕರ ನಿರತ ಪೌರ ಕಾರ್ಮಿಕರ ಮೇಲೆ ಕರಾಳ ಎಸ್ಮಾ ಕಾನೂನನ್ನು ಉಪಯೋಗಿಸಲು ಸರಕಾರ ನಿರ್ಧರಿಸಿರುವುದು ಖಂಡನೀಯ ಎಂದು ಸಿಪಿಐ(ಎಂ) ಖಂಡಿಸಿದೆ.

ಕರ್ನಾಟಕದಲ್ಲಿ ಕಳೆದ ವಾರ

ಡಿಸೆಂಬರ್ 27

ಮದ್ಯದ ಮಾರಾಟವನ್ನು ಸರಕಾರಿ ಸ್ವಾಮ್ಯದ ಎಂ.ಎಸ್.ಐ.ಎಲ್. ನಿಂದ ಖಾಸಗಿಯವರಿಗೆ ನೀಡುವ ರಾಜ್ಯ ಸರಕಾರದ ವಿಚಾರದ ವಿರುದ್ಧ ಸಂಸ್ಥೆಯ ನೌಕರರ ಪ್ರತಿಭಟನೆ.

ಅಗತ್ಯ ವಸ್ತುಗಳ ನಿಯಂತ್ರಣ ಕಾಯ್ದೆಯಿಂದ ವಿನಾಯ್ತಿ ಬೇಕೆಂದು ಹೋಟೆಲ್ ಉದ್ಯಮಿಗಳ ಬೇಡಿಕೆ, ಇದು ಸಾಧ್ಯವಾಗದು ಎಂದು ರಾಜ್ಯ ಆಹಾರ ಸಚಿವರು.

ಡಿಸೆಂಬರ್ 28

ತನ್ನ ಕ್ಷಮಾದಾನದ ಬಗ್ಗೆ ರಾಷ್ಟ್ರಾಧ್ಯಕ್ಷರ ನಿರ್ಧಾರವನ್ನು 10 ದಿನದೊಳಗಾಗಿ ತಿಳಿಸಬೇಕೆಂದು ಕುಖ್ಯಾತ ದಂತಚೋರ ವೀರಪ್ಪನ್.

ಖಾಸಗಿ ತಾಜ್‌ರೆಸಾರ್ಟ್ ನಿರ್ಮಾಣಕ್ಕಾಗಿ ನಾಗರಹೊಳೆ ಅಭಯಾರಣ್ಯದಲ್ಲಿ ಆದಿವಾಸಿಗಳನ್ನು ಒಕ್ಕಲೆಬ್ಬಿಸುತ್ತಿರುವುದರ ವಿರುದ್ಧ ತೀವ್ರ ಪ್ರತಿಭಟನೆ.

ಡಿಸೆಂಬರ್ 29

"ಅನೀತಿ, ಭ್ರಷ್ಟಾಚಾರಗಳಿಂದ ಅಧಃಪತನದತ್ತ ಸಾಗುತ್ತಿರುವ ದೇಶವನ್ನು ಮೇಲೆತ್ತಲು ಹಳೆಯ ಕಾಂಗ್ರೆಸ್ಸಿಗೆ ಅಸಾಧ್ಯ" ಅದಕ್ಕೆ ಜೀವ ತುಂಬಲು ತಾನು ಪ್ರಯತ್ನಿಸುವುದಾಗಿ ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪನವರು.

ಡಿಸೆಂಬರ್ 30

ಬೆಂಗಳೂರು - ಮೈಸೂರು 111 ಕಿಮೀ ಉದ್ದದ ಎಕ್ಸಪ್ರೆಸ್ ಹೆದ್ದಾರಿ ರಚಿಸುವ 2000 ಕೋಟಿ ರೂ ಯೋಜನೆಯನ್ನು ಖಾಸಗೀ ಸಂಸ್ಥೆಯೊಂದಕ್ಕೆ ಒಪ್ಪಿಸಲಾಗುವುದೆಂದು ಲೋಕಪಯೋಗಿ ಸಚಿವರು.

ಡಿಸೆಂಬರ್ 31

ಕಾವೇರಿ, ಹೇಮಾವತಿ ಕಾಲುವೆ ಆಧುನೀಕರಣ ಕಾಮಗಾರಿಗಳಿಗೆ ಜಪಾನಿನಿಂದ 225 ಕೋಟಿ ರೂ. ಗಳನ್ನು ರಾಜ್ಯ ಸರಕಾರ ಕೇಳುವುದಾಗಿ ದೊಡ್ಡ ನೀರಾವರಿ ಸಚಿವರು.

ಜನವರಿ 1

ಇತ್ತೀಚೆಗೆ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆದ ಖರ್ಚು 55.5 ಲಕ್ಷ ರೂ ಎಂದು ಸಂಸತ್ ಸದಸ್ಯ ರುದ್ರೇಶಗೌಡರು.

ಜನವರಿ 2

ಪಶ್ಚಿಮ ಘಟ್ಟದಲ್ಲಿ ಗಣಿಗಾರಿಕೆಗೆ ಯಾರಿಗೂ ಪರವಾನಗಿ ನೀಡಿಲ್ಲ, ಖನಿಜ ಸಂಪತ್ತಿನ ನಿಕ್ಷೇಪ ಪತ್ತೆ ಹಚ್ಚಲು ಮಾತ್ರ ಕೆಲವರಿಗೆ ತಾತ್ಕಾಲಿಕ ಪರವಾನಗಿ ನೀಡಲಾಗಿದೆ ಎಂದು ಗಣಿ ಸಚಿವರು.

"ನಮ್ಮ ಕಾನ್‌ಸ್ಟೇಬಲ್‌ಗಳ ಸಂಬಳ ಕಮ್ಮಿ, ಆರೋಗ್ಯ ಸರಿಯಿಲ್ಲ ಮತ್ತು ಅವರು ದಿನದ 24 ಗಂಟೆಯೂ ಕೆಲಸ ಮಾಡಬೇಕಾಗಿದೆ"

- ಎಂ.ಎಫ್.ಪಾಷಾ
ಬೆಂಗಳೂರು ನಗರ ಪೋಲೀಸ್ ಉಪ ಕಮಿಷನರ್(ಡಿಎಸ್‌ಪಿ ಪಶ್ಚಿಮ) ಪತ್ರಿಕಾ ಸಂದರ್ಶನವೊಂದರಲ್ಲಿ.

ಸಂಯುಕ್ತ ರಂಗ ಸರಕಾರದ ಭವಿಷ್ಯ ಅದರ ಕೆಲಸ-ಕಾರ್ಯಗಳ ಮೇಲೆ ನಿಂತಿದೆ - ಬೇರೆ ಪಕ್ಷಗಳ ಬೆದರಿಕೆಗಳ ಮೇಲಲ್ಲ

- ಸುರ್ಜಿತ್

ಕಳೆದ ಆರೇಳು ತಿಂಗಳುಗಳಲ್ಲಿ ಕಾಂಗ್ರೆಸ್ ಪಕ್ಷದೊಳಗೆ ಹಲವು ಬೆಳವಣಿಗೆಗಳು ಆಗಿವೆ. ಇಂತಹ ಪ್ರತಿಯೊಂದು ಬೆಳವಣಿಗೆಯಾದಾಗಲೂ ಇನ್ನೇನು ಸಂಯುಕ್ತರಂಗ ಸರಕಾರದ ಕಥೆ ಮುಗಿಯಿತು ಎಂಬಂತೆ ದೊಡ್ಡ ಪತ್ರಿಕೆಗಳು ಅರಚಿಕೊಳ್ಳುತ್ತಾ ಬಂದಿವೆ. ಇತ್ತೀಚೆಗೆ ನರಸಿಂಹರಾಯರು ಕಾಂಗ್ರೆಸ್ ಸಂಸದೀಯ ಪಕ್ಷದ ಮುಖ್ಯಸ್ಥನ ಸ್ಥಾನಕ್ಕೆ ರಾಜೀನಾಮೆ ಕೊಡಲೇಬೇಕಾಗಿ ಬಂದ ನಂತರ ಮತ್ತೆ ಇದೇ ಪ್ರಶ್ನೆಯನ್ನು ಎಬ್ಬಿಸಲಾಗಿದೆ - ಕಾಂಗ್ರೆಸ್ಸಿನ ಆಂತರಿಕ ಜಗಳದಿಂದ ಸಂಯುಕ್ತ ರಂಗ ಸರಕಾರದ ಸ್ಥಿರತೆಗೆ ಸಂಚಕಾರ ಬಂದಿದೆಯೇ?

ಇಲ್ಲ, ಸಂಯುಕ್ತ ರಂಗ ಸರಕಾರಕ್ಕೆ ಬಿಕ್ಕಟ್ಟಿನ ಪರಿಸ್ಥಿತಿಯನ್ನುಂಟು ಮಾಡುವಂತಹ ಆಟವಾಡಲು ಕಾಂಗ್ರೆಸ್‌ಗೆ ಸಾಧ್ಯವಿಲ್ಲ, ಇಂತಹ ಆಟವಾಡಿದರೆ ಅದು ತನ್ನ ತೊಂದರೆಗಳನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುತ್ತದಷ್ಟೇ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಹೇಳಿದ್ದಾರೆ.

ವಾಸ್ತವವಾಗಿ ಎಡಶಕ್ತಿಗಳ ಬೆಂಬಲವಿರುವ ಸಂಯುಕ್ತರಂಗ ಸರಕಾರದ ಮುಂದುವರಿಕೆ ಹಲವರಿಗೆ, ವಿದೇಶಿ ಶಕ್ತಿಗಳ ಪಟ್ಟಭದ್ರ ಹಿತಾಸಕ್ತಿಗಳಿಗೆ ನುಂಗಲಾರದ ತುತ್ತು. ಆದ್ದರಿಂದಲೇ ಇಂತಹ ಅಪಪ್ರಚಾರ. ದುರದೃಷ್ಟವಶಾತ್ ಪ್ರಸ್ತುತ ಪರಿಸ್ಥಿತಿಯ ಸಾರವನ್ನು ಸಂಯುಕ್ತ ರಂಗದ ಎಲ್ಲಾ ಅಂಗ ಪಕ್ಷಗಳು ಕೂಡಾ ಸರಿಯಾಗಿ ಅರಿತಿಲ್ಲ ಎಂದು ಸುರ್ಜಿತ್ ಖೇದ ವ್ಯಕ್ತಪಡಿಸಿದ್ದಾರೆ.

ಬಹಳ ಸಮಯದಿಂದ ಅನೀತಿಯುತ ಒಳಜಗಳ, ಆಂತರಿಕ ಪ್ರಜಾಪ್ರಭುತ್ವದ ಅಭಾವದಿಂದ ನರಳುತ್ತಿರುವ ಪಕ್ಷ ಕಾಂಗ್ರೆಸ್. ಏಪ್ರಿಲ್-ಮೇ 1996ರಲ್ಲಿ ನಡೆದ ಸಂಸದೀಯ ಚುನಾವಣೆಗಳಲ್ಲಿ ತನ್ನ ವಿನಾಶಕಾರಿ ಆರ್ಥಿಕ ನೀತಿಗಳು, ಕೋಮುವಾದದೊಂದಿಗೆ ರಾಜಿ ನಿಲುವು ಹಾಗೂ ಬೃಹತ್ ಪ್ರಮಾಣದ ಭ್ರಷ್ಟಾಚಾರದಿಂದಾಗಿ ಕಾಂಗ್ರೆಸ್ ಭಾರೀ ಸೋಲನ್ನುಂಡು, ನಂತರ ಮೇ 12 ರಂದು ಒಂದು ಜಾತ್ಯಾತೀತ ಸರಕಾರದ ರಚನೆಗೆ ಬೆಂಬಲ ನೀಡಲು ನಿರ್ಣಯ ಕೈಕೊಂಡಿತು. ಒಂದೆಡೆ ಬಿಜೆಪಿ ಅಧಿಕಾರಕ್ಕೇರುವ ಅಪಾಯ ತಪ್ಪಿಸಲು, ಮತ್ತೊಂದು ಕಡೆ ಬಿಜೆಪಿಯೇತರ, ಕಾಂಗ್ರೆಸ್ಸೇತರ ಮೂರನೇ ಪರ್ಯಾಯದ ಅಂಗಪಕ್ಷಗಳು ಮತ್ತು ಅವುಗಳ ಗುರಿಯನ್ನು ಗಮನಿಸಿದ ಕಾಂಗ್ರೆಸ್ ಆ ನಿರ್ಣಯಕ್ಕೆ ಬಂತು. ಮರುದಿನ ಯಾವುದೇ ಸಂದರ್ಭದಲ್ಲಿ ಬಿಜೆಪಿ ಸರಕಾರ ರಚಿಸಲು ತಮ್ಮ ಬೆಂಬಲ ಇಲ್ಲ ಎಂದು ಅವರು ರಾಷ್ಟ್ರಪತಿಯವರಿಗೆ ಅಧಿಕೃತವಾಗಿ ತಿಳಿಸಿದರು. ಆದರೆ ದೇವೇಗೌಡರ ನೇತೃತ್ವದ ಮೂರನೇ ಶಕ್ತಿ ಸರಕಾರ ರಚಿಸುವ ದಾವೆಯನ್ನು ಮುಂದಿಟ್ಟಾಗ ಕಾಂಗ್ರೆಸ್ ಒಂದೇಟು ಹಾಕಿತು. ಸಮಯ ಮಿತಿಯೊಳಗೆ ತನ್ನ ಬೆಂಬಲದ ಪತ್ರವನ್ನು ರಾಷ್ಟ್ರಪತಿಗಳಿಗೆ ತಲುಪಿಸಲಿಲ್ಲ. ನಂತರ ರಾಷ್ಟ್ರಪತಿಗಳು ಬಿಜೆಪಿಗೆ ಸರಕಾರ ರಚಿಸಲು ಆಹ್ವಾನ ನೀಡಿ ಬಿಜೆಪಿ ಸರಕಾರ ಲೋಕಸಭೆಯಲ್ಲಿ ವಿಶ್ವಾಸಮತ ಮಂಡಿಸಿದಾಗ ಕಾಂಗ್ರೆಸ್ ಬಹಿರಂಗವಾಗಿ ಅದನ್ನು ವಿರೋಧಿಸಿತು.

ಪರಿಸ್ಥಿತಿಯಲ್ಲಿ ಮೂಲಭೂತ ಬದಲಾವಣೆಗಳಿಲ್ಲ

ಅಂದಿಗೂ ಇಂದಿಗೂ ಪರಿಸ್ಥಿತಿಯೇನಾದರೂ ಬದಲಾಗಿದೆಯೇ ಎಂದು ಸುರ್ಜಿತ್ ಪ್ರಶ್ನಿಸುತ್ತಾರೆ. ಈಗಲೂ ಬಿಜೆಪಿ ಅತೀ ದೊಡ್ಡ ಪ್ರತಿಪಕ್ಷವಾಗುಳಿದಿದೆ. ಸದ್ಯಕ್ಕಂತೂ ಬೇರೆ ಪರ್ಯಾಯವಿಲ್ಲ. ಈಗಿರುವಾಗ ಕಾಂಗ್ರೆಸ್ ಇನ್ನೊಂದು ಸಾರ್ವತ್ರಿಕ ಚುನಾವಣೆ ಎದುರಿಸಲು ಸಿದ್ಧವಿದೆಯೋ?

ಉತ್ತರ ಪ್ರದೇಶದಲ್ಲಿ ಮಾಯಾವತಿ ನೇತೃತ್ವದ ಬಿಎಸ್‌ಪಿ ಗೆ ಬೆಂಬಲ ನೀಡುವಂತೆ ಸಂಯುಕ್ತ ರಂಗದ ಮೇಲೆ ಒತ್ತಡ ತಂದು ರಾಷ್ಟ್ರಪತಿ ಆಳ್ವಿಕೆ ಹೇರಬಾರದು ಎನ್ನುತ್ತಿದ್ದ ಕಾಂಗ್ರೆಸ್ ಕೊನೆಗೆ ಯಾವ ಪಕ್ಷ ಅಥವಾ ಕೂಟವೂ ಸರಕಾರ ರಚಿಸದಾದಾಗ ರಾಷ್ಟ್ರಪತಿ ಆಳ್ವಿಕೆಯನ್ನು ಹಾಕಿದ್ದನ್ನು ಸಂಸತ್ತಿನಲ್ಲಿ ಬೆಂಬಲಿಸಿತು ಎಂದೂ ಸುರ್ಜಿತ್ ನೆನಪಿಸುತ್ತಾರೆ.

ಸಂಸತ್ ಚುನಾವಣಾನಂತರ ಕಾಂಗ್ರೆಸಿನೊಳಗಿನ ಬೆಳವಣಿಗೆಗಳನ್ನು ಪರಿಶೀಲಿಸುತ್ತಾ ಸುರ್ಜಿತ್ ರವರು ಕಾಂಗ್ರೆಸಿನ ಕಸರತ್ತು ನಡೆಸುವ ಶಕ್ತಿ ಹೆಚ್ಚಿಲ್ಲ, ಕಡಿಮೆಯಾಗಿದೆ ಎನ್ನುತ್ತಾರೆ. ಒಟ್ಟಾರೆ ಪರಿಸ್ಥಿತಿಯಲ್ಲಿ ತೀವ್ರ ಬದಲಾವಣೆಯೇನೂ ಆಗಿಲ್ಲ, ಇತ್ತ ಕಾಂಗ್ರೆಸ್ ಈಗಲೂ ತನ್ನದೇ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲಾಗಿಲ್ಲ.

ರಾಯರ ನಿರೀಕ್ಷೆ ತಲೆಕೆಳಗಾಯಿತು.

ನರಸಿಂಹರಾಯರು ಮತ್ತು ಅವರ ಹಲವಾರು ಮಂತ್ರಿಗಳು ಹಲವಾರು ಭ್ರಷ್ಟಾಚಾರ ಕೇಸುಗಳಲ್ಲಿ ಸಿಲುಕಿಕೊಂಡ ಮೇಲೆ ಮಾಜಿ ಪ್ರಧಾನಿಯ ವಿಶ್ವಾಸಾರ್ಹತೆ ಸಂಪೂರ್ಣ ಕರಗಿಹೋಯಿತು. ಎಷ್ಟೆಂದರೆ ಉತ್ತರ ಪ್ರದೇಶ ಚುನಾವಣೆಗಳಲ್ಲಿ ರಾವ್ ಕಾಂಗ್ರೆಸ್ ಪರ ಚುನಾವಣಾ ಪ್ರಚಾರ ನಡೆಸಬಾರದೆಂದು ಬೇಡಿಕೆಯೂ ಬಂತು. ನಂತರ ಅವರು ಪಕ್ಷದ ಅಧ್ಯಕ್ಷ ಸ್ಥಾನವನ್ನು ಬಿಡಬೇಕೆಂಬ ಒತ್ತಾಯ ತೀವ್ರಗೊಂಡಾಗ ರಾಯರು ಸೀತಾರಾಂ ಕೇಸರಿಯವರನ್ನು ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿದರು. ಆದರೆ ಈ ಮೂಲಕ ತನ್ನ ಹಿಡಿತ ಮೇಲುಳಿಯುತ್ತದೆ ಎಂಬ ರಾಯರ ನಿರೀಕ್ಷೆಗಳೆಲ್ಲಾ ತಲೆಕೆಳಗಾದವು. ಕಾಂಗ್ರೆಸ್‌ನೊಳಗಿನ ಪರಿಸ್ಥಿತಿಗಳು ಅದರ ನಿರೀಕ್ಷೆಗೂ ಮೀರಿ ಬದಲಾದವು ಎಂದು ಸುರ್ಜಿತ್ ವಿವರಿಸುತ್ತಾರೆ.

ನರಸಿಂಹರಾಯರು ಕಾಂಗ್ರೆಸ್ ಸಂಸದೀಯ ಪಕ್ಷದ ಮುಖಂಡತ್ವದಂತಹ ಪ್ರಮುಖ ಸ್ಥಾನಗಳಲ್ಲಿ ಇರುವವರೆಗೂ ಜನರು ದೂರ ತಳ್ಳಿರುವ ಕಾಂಗ್ರೆಸ್ಸಿನಲ್ಲಿ ಮತ್ತೆ ಅವರ ವಿಶ್ವಾಸ ಮೂಡಿಸಲು ಸಾಧ್ಯವಾಗದು ಎಂಬ ಭಾವನೆ ಕಾಂಗ್ರೆಸ್ಸಿನಲ್ಲಿ ವ್ಯಾಪಿಸಲಾರಂಭಿಸಿತು. ನಿಜ, ತಮ್ಮ ಪಕ್ಷವನ್ನು ಜನಗಳು ದೂರ ತಳ್ಳಿರುವ ಮೂಲ ಕಾರಣ ಏನು ಎಂದು ಕಾಣಲು ಅವರಿಗಿನ್ನೂ ಸಾಧ್ಯವಾಗಿಲ್ಲ.

ಡಿಸೆಂಬರ್ 18 ರಂದು ಹಲವರ ಆಗ್ರಹದ ಮೇಲೆ ನಡೆಸಿದ ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ವಿಶೇಷ ಸಭೆಯಲ್ಲಿ ಪಾರ್ಲಿಮೆಂಟರಿ ಪಕ್ಷದ ಕಾರ್ಯಕಾರಿ ಸಮಿತಿಯ ಎಲ್ಲಾ 24 ಸದಸ್ಯರು ನರಸಿಂಹರಾಯರಿಗೆ 'ನೀವು ರಾಜೀನಾಮೆ ಕೊಡಿ' ಎನ್ನುವ ಪತ್ರ ನೀಡಿದರು. ಆದರೂ ರಾಯರು ಜಗ್ಗಲಿಲ್ಲ. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಸೇರಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಪಕ್ಷದ ಅಧ್ಯಕ್ಷರಿಗೆ ಅಧಿಕಾರ ನೀಡಿತು. ಅಧ್ಯಕ್ಷರು ಡಿಸೆಂಬರ್ 19ರ ಸಂಜೆ 4ರೊಳಗೆ ರಾಜೀನಾಮೆ ನೀಡಬೇಕೆಂದು ರಾಯರಿಗೆ ಪತ್ರ ಕಳಿಸಿದರು. ಕೊನೆಯವರೆಗೂ ಜಗ್ಗದ ರಾಯರು ಅಂತೂ ಗಡುವಿನ ಸಮಯಕ್ಕೆ 5 ನಿಮಿಷ ಇರುವಾಗ ರಾಜೀನಾಮೆ ಪತ್ರ ಕಳಿಸಿದರು.

ಇದರಿಂದಲಾದರೂ ಆ ಪಕ್ಷದ ಆಂತರಿಕ ಸಮಸ್ಯೆ ಪರಿಹಾರ ಕಂಡೀತೆ? ಇಲ್ಲ ಈಗ ಕಾಂಗ್ರೆಸ್ ಸಂಸದೀಯ ಪಕ್ಷದ ಮುಖಂಡನ ಸ್ಥಾನಕ್ಕೆ ಪೈಪೋಟಿಯಲ್ಲಿ ಹಲವು ಜನರಿದ್ದಾರೆ. ಶರದ್ ಪವಾರ್, ರಾಜೇಶ್ ಪೈಲಟ್ ಹೆಸರುಗಳು ಕೇಳಿಸುತ್ತಿವೆ. ಎರಡೆರಡು ಅಧಿಕಾರದ ಕೇಂದ್ರಗಳು ಸೃಷ್ಟಿಯಾಗುವುದನ್ನು ತಪ್ಪಿಸಲು ಪಕ್ಷದ ಅಧ್ಯಕ್ಷ ಕೇಸರಿಯವರನ್ನೇ ಆರಿಸಬೇಕೆಂಬ ಪ್ರಯತ್ನವೂ ನಡೆದಿದೆ. ಆದರೆ ರಾವ್ ಬೆಂಬಲಿಗರು ಈಗ 'ಆಂತರಿಕ ಪ್ರಜಾಪ್ರಭುತ್ವ'ದ ಮಾತನಾಡುತ್ತಾ 'ಒಬ್ಬ ವ್ಯಕ್ತಿ, ಒಂದೇ ಹುದ್ದೆ'ಯ ಮಾತನ್ನಾಡುತ್ತಿದ್ದಾರೆ(ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ "ಸರ್ವಸಮ್ಮತಿ"ಯ ಗುಂಪಿನವರ ಕೈ ಮೇಲಾಗಿದೆ)

ಕಾಂಗ್ರೆಸ್ಸಿಗರ ನಿರಾಶೆ

ಈ ನಡುವೆ ಕಾಂಗ್ರೆಸ್ ಅಧ್ಯಕ್ಷರು ಎಲ್ಲಾ ಕಾಂಗ್ರೆಸ್ಸಿಗರು ಒಂದಾಗಬೇಕೆಂದು ಕರೆ ನೀಡಿದರು. ಆದರೆ ಇದರಿಂದ ಸಂಸತ್ತಿನಲ್ಲಿ ಕಾಂಗ್ರೆಸ್ಸಿನ ಬೆಂಬಲದಲ್ಲಿ ಬಹಳಷ್ಟೇನೂ ಹೆಚ್ಚಳ ಆಗಲಿಲ್ಲ. ಬಂಗಾರಪ್ಪನವರು, ಸಿಂಧ್ಯಾ ಪಕ್ಷದ ಇಬ್ಬರು ಹಾಗೂ ಕಾಂಗ್ರೆಸ್(ತಿವಾರಿ) ಪಕ್ಷದ ನಾಲ್ವರು- ಇವರಲ್ಲಿ ಇಬ್ಬರು ಸಂಯುಕ್ತ ರಂಗ ಬಿಡಲು ನಿರಾಕರಿಸಿದ್ದಾರೆ. ಗಮನಾರ್ಹ ಸಂಖ್ಯಾಬಲ(20) ಇರುವ ಟಿಎಂಸಿ ಪಕ್ಷ ವಿವಿಧ ಕಾರಣಗಳಿಂದಾಗಿ ಸದ್ಯಕ್ಕಂತೂ ಕಾಂಗ್ರೆಸ್ ಸೇರಲು ಸಿದ್ಧವಿಲ್ಲ. ಹೀಗೆ ಕಾಂಗ್ರೆಸ್‌ನ ಬಲದಲ್ಲಿ ಕೇವಲ 5 ಹೆಚ್ಚಿತು. ಆದರೆ ಸಂಯುಕ್ತ ರಂಗದ ಬಲ ಈಗಲೂ 190ಕ್ಕಿಂತ ಹೆಚ್ಚಿದೆ. ಹೀಗಿರುವಾಗ ಕಾಂಗ್ರೆಸ್ ಪ್ರಸ್ತುತ ಸರಕಾರದ ಬದಲು ತನ್ನ ಸರಕಾರ ರಚಿಸಲು ಹೇಗೆತಾನೇ ಮುಂದೆ ಬರಲು ಸಾಧ್ಯ, ಅದಕ್ಕೆ ಅವಕಾಶವೇ ಇಲ್ಲ ಎಂದು ಸುರ್ಜಿತ್ ಹೇಳುತ್ತಾರೆ.

ಒಂದು ಹಂತದಲ್ಲಿ ಸಂಯುಕ್ತರಂಗದಿಂದ ತಾನು ಭಿನ್ನ ಎಂದು ತೋರಿಸಿಕೊಳ್ಳುವ ಆದರ ಸರಕಾರದ ನೀತಿಗಳ ವಿಮರ್ಶೆಯೊಂದನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಮಂಡಿಸಲು ಮನಮೋಹನ್ ಸಿಂಗ್‌ರಿಗೆ ಹೇಳಲಾಯಿತು. ಆದರೆ ಅವರು ಮಂಡಿಸಿದ ವಿಮರ್ಶೆಯಿಂದ ಬಂದದ್ದೆಂದರೆ ಕಾಂಗ್ರೆಸ್ ನೀತಿಗಳೇ ಮುಂದುವರಿಯುತ್ತಿವೆ ಎಂಬ ಅಂಶ. ಇದರಿಂದ ಸರಕಾರದ ತೀವ್ರ ಟೀಕೆಯನ್ನು ನಿರೀಕ್ಷಿಸಿದ್ದ ಬಹುಮಂದಿ ಕಾಂಗ್ರೆಸ್ಸಿಗರಿಗೆ ನಿರಾಶೆಯಾಯಿತು.

ಅಂತೂ ಸದ್ಯ ಕಾಂಗ್ರೆಸ್ ಪಕ್ಷ ತನ್ನದೇ ಉಳಿವಿಗಾಗಿ ಪ್ರಯತ್ನಿಸುವುದರಲ್ಲಿ ಮಗ್ನವಾಗಿದೆ. ಅಲ್ಲದೆ ಹಲವು ರಾಜ್ಯಗಳಲ್ಲಿ ಗುಂಪುಗಾರಿಕೆಯನ್ನೆದುರಿಸುತ್ತಿರುವ ಆ ಪಕ್ಷ ಸಂಘಟನಾ ಚುನಾವಣೆಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಪ್ರತಿಯೊಬ್ಬ ಮುಖಂಡರೂ ತಂತಮ್ಮ ಬಲವರ್ಧಿಸಲು ಏನು ಮಾಡಬೇಕೆಂಬ ಪ್ರಯತ್ನದಲ್ಲಿ ಮಗ್ನರಾಗಿರುವಾಗ ಪ್ರಸ್ತುತ ಪರಿಸ್ಥಿತಿಯನ್ನು ಕಲಕಲಾಗಲೀ, ಸಾರ್ವತ್ರಿಕ ಚುನಾವಣೆಗಳನ್ನು ಎದುರಿಸಲಾಗಲೀ ಅವರು ಸಿದ್ಧರಿಲ್ಲ ಎಂಬುದು ಸುರ್ಜಿತ್ ತರ್ಕ.


ನಿಜವಾದ ಪ್ರಶ್ನೆ

ಆದ್ದರಿಂದ ಕಾಂಗ್ರೆಸ್ಸಿಗರಿಂದ ಸಂಯುಕ್ತ ರಂಗಕ್ಕೆ ಬೆದರಿಕೆ ಈಗಿನ ಮುಖ್ಯ ಪ್ರಶ್ನೆ ಅಲ್ಲವೇ ಅಲ್ಲ, ನಿಜವಾದ ಪ್ರಶ್ನೆ ಎಂದರೆ ಆರು ತಿಂಗಳು ಕಳೆದರೂ ಭಾರತದ ವಿಶಾಲ ಜನ ವಿಭಾಗಗಳನ್ನು ತನ್ನ ತೆಕ್ಕೆಗೆ ತಗೊಳ್ಳಲು ಸಂಯುಕ್ತ ರಂಗಕ್ಕೆ ಇನ್ನೂ ಏಕೆ ಆಗಿಲ್ಲ ಎಂಬುದು. ಕೇವಲ ರಾಷ್ಟ್ರೀಯ ಐಕ್ಯತೆ ಹಾಗೂ ಜಾತ್ಯಾತೀತತೆಯ ರಕ್ಷಣೆಯ ಘೋಷಣೆಗಳಿಂದಲೇ ಜನಗಳನ್ನು ಜಾಗ್ರತರಾಗಿಸಲು ಸಾಧ್ಯವಿಲ್ಲ. ತನ್ನ ಆದ್ಯತೆಗಳೇನು ಎಂದು ಸಂಯುಕ್ತ ರಂಗ ಸರಕಾರ ರೂಪಿಸಿಕೊಳ್ಳಬೇಕು ಎಂದು ಸುರ್ಜಿತ್ ಆಗ್ರಹ ಪಡಿಸಿದಾರೆ.

ಪ್ರಧಾನ ಮಂತ್ರಿಗಳು ತನ್ನ ದೇಶಸಂಚಾರಗಳ ವೇಳೆ ಬಡ ಜನರ ಪರಿಸ್ಥಿತಿ ಸುಧಾರಿಸಲು ಹಲವು ವಚನಗಳನ್ನು ನೀಡಿದ್ದಾರೆ. ಇವನ್ನು ಸರಕಾರ ಈಡೇರಿಸಬೇಕು. 9ನೇ ಯೋಜನೆ ಅಭಿವೃದ್ಧಿಯ ಫಲಗಳಿಂದ ಅತ್ಯಂತ ವಂಚಿತರಾದ ಗ್ರಾಮೀಣ ಜನಸಮೂಹಗಳನ್ನು ಗಮನದಲ್ಲಿಟ್ಟುಕೊಂಡು ರೂಪುಗೊಳ್ಳಬೇಕು. ಜನಗಳ ಆಕಾಂಕ್ಷೆಗಳನ್ನು ಈಡೇರಿಸಿ ಅವರ ನಡುವೆ ತನ್ನ ನೆಲೆಯನ್ನು ಭದ್ರಗೊಳಿಸಬೇಕು. ಇದರಲ್ಲಿ ಎಡಪಕ್ಷಗಳ ಪಾತ್ರವನ್ನು ಸಂಯುಕ್ತ ರಂಗ ಅರಿಯಬೇಕು. ದೇಶದ ಅತ್ಯಂತ ಬಡ, ದಲಿತ ವಿಭಾಗಗಳನ್ನು ಈ ಸರಕಾರದ ಸುತ್ತ ಅಣಿನೆರಸಿ ಅದಕ್ಕೊಂದು ವಿಶ್ವಾಸಾರ್ಹತೆ ಬಂದದ್ದು ಎಡಪಕ್ಷಗಳ ಪ್ರಯತ್ನದಿಂದಾಗಿ. ಆದ್ದರಿಂದ ಸಂಯುಕ್ತರಂಗ ಇನ್ನಷ್ಟು ಕ್ರೋಢೀಕರಣಗೊಳ್ಳಬೇಕಾದರೆ ಎಡ ಪಕ್ಷಗಳ ಅಭಿಪ್ರಾಯಗಳಿಗೆ ತಕ್ಕ ಮಹತ್ವ ನೀಡಬೇಕು ಎಂದಿರುವ ಸುರ್ಜಿತ್ ಅವರು ಈ ಸರಕಾರದ ಮುಂದುವರಿಕೆ ಅದರ ಕೆಲಸ ಕಾರ್ಯಗಳ ಮೇಲೆ ನಿಂತಿದೆ, ಯಾವುದೇ ಪಕ್ಷದ ಬೆದರಿಕೆಯ ಮೇಲಲ್ಲ ಎಂದು ಸ್ಪಷ್ಟಪಡಿಸಿದೆ.

ಸಂಯುಕ್ತ ರಂಗ ಸರಕಾರದ ಭವಿಷ್ಯದ ಬಗ್ಗೆ ಶಂಕೆ ಹುಟ್ಟಿಸುವುದು ಬಲಪಂಥೀಯ ಶಕ್ತಿಗಳ ಒಂದು ಕಿಡಿಗೇಡಿ ಪ್ರಯತ್ನ. ಈ ಮೂಲಕ ಬಿಜೆಪಿಯ ವಿರುದ್ಧ ಬೆಸದಿರುವ ಐಕ್ಯತೆಯನ್ನು ಒಡೆಯುವುದು ಅವರ ಉದ್ದೇಶ. ಇದರರ್ಥ ಸಂಯುಕ್ತರಂಗ ಸರಕಾರದ ಕೆಲಸ ಕಾರ್ಯಗಳಿಂದ ತೃಪ್ತರಾಗಿ ಕೂರಬೇಕೆಂದೇನೂ ಅಲ್ಲ. ಸರಕಾರ ತನ್ನ ಆದ್ಯತೆಗಳನ್ನು ಗುರುತಿಸಿ ಸಮಾನ ಕನಿಷ್ಟ ಕಾರ್ಯಕ್ರಮದಲ್ಲಿನ ಬಡ ಜನಗಳ, ಶೋಷಿತರ ಪರವಾದ ಅಂಶಗಳನ್ನು ಅನುಷ್ಠಾನಕ್ಕೆ ತಂದು ಮಹತ್ವದ ಪ್ರಶ್ನೆಗಳನ್ನು ಎದುರಿಸಲು ಪ್ರಯತ್ನಿಸುವಂತೆ ಜನಗಳು ಒತ್ತಡ ತರಬೇಕು ಎಂದು ಸುರ್ಜಿತ್ ಕರೆ ನೀಡಿದ್ದಾರೆ. □

ಕಾಂಗ್ರೆಸ್ಸಿನ ಆಂತರಿಕ ಪರಿಸ್ಥಿತಿಯ ಬಗ್ಗೆ 'ದಿ ಹಿಂದೂ' ಪತ್ರಿಕೆಯಲ್ಲಿ ಕೇಶವ್‌ರ ವ್ಯಂಗ್ಯ



ಗೋಧಿ ಬೆಲೆ ಏಕೆ ಹೆಚ್ಚಾಯಿತು?

ಇತ್ತೀಚೆಗೆ ಗೋಧಿ ಬೆಲೆ ತೀವ್ರವಾಗಿ ಹೆಚ್ಚಾಗಿ ಕೇಂದ್ರ ಸರಕಾರ ಗೋಧಿಯನ್ನು ಆಮದು ಮಾಡಿಕೊಳ್ಳುವ ನಿರ್ಧಾರ ಮಾಡಿದ್ದು ಸಂಸತ್ತಿನಲ್ಲಿ ಕೋಲಾಹಲವೆಬ್ಬಿಸಿತು. ಆಮದಿನ ವಿಷಯ ಒತ್ತಟ್ಟಿಗಿರಲಿ ಯಾಕೆ ಗೋಧಿಯ ಬೆಲೆ ಹೀಗೆ ಒಮ್ಮಿಂದಲೇ ಹೆಚ್ಚಾಯಿತು?

ಗೋಧಿಯ ಉತ್ಪಾದನೆ ಐದುದಶಲಕ್ಷ ಟನ್ನುಗಳಷ್ಟು ಕಡಿಮೆಯಾಗಿದೆ. ಹಿಂದಿನ ಸಾಲಿನಲ್ಲಿ ಅಂದರೆ 1995-96 ರ ಸಾಲಿನಲ್ಲಿ. ಇದಕ್ಕೆ ಕಾರಣವೇನು? ಇದಕ್ಕೆ ಆರ್ಥಿಕ ಸುಧಾರಣೆಗಳು, ಒಟ್ಟಾರೆ ಆರ್ಥಿಕ ನೀತಿಗಳೇ ಕಾರಣ. ಹೇಗೆ? ಉದಾರೀಕರಣದೊಂದಿಗೆ ರಫ್ತಿನ ಮೇಲೆ ಒತ್ತು ಇರುವುದರಿಂದಾಗಿ ವಾಣಿಜ್ಯ ಬೆಳೆಗಳಿಗೆ ಹೆಚ್ಚಿನ ಮನ್ನಣೆ ದೊರೆಯುತ್ತಿದೆ. ಇದರಿಂದಾಗಿ ಗೋಧಿ ಬೆಳೆವ ಪ್ರದೇಶ ಕಡಿಮೆಯಾಗಿದೆಯಾದ್ದರಿಂದ ಉತ್ಪಾದನೆ ಸಹಜವಾಗೇ ಕುಸಿದಿದೆ.

ಈಗೆ ಹದಿನೆಂಟು ತಿಂಗಳುಗಳ ಹಿಂದೆ 34 ದಶಲಕ್ಷ ಟನ್ನುಗಳಷ್ಟು ಆಹಾರ ಧಾನ್ಯಗಳ ಶಿಲ್ಕು ಇದ್ದದ್ದು ಈಗ 20 ದಶಲಕ್ಷ ಟನ್ನುಗಳಿಗಿಂತ ಕೆಳಗಿಳಿದಿದೆ. ಇದಕ್ಕೆ ಕಾರಣ ಕೇಂದ್ರ ಸರಕಾರ ಈ ಶಿಲ್ಕನ್ನು ಬಡ ಜನಗಳಿಗೆ ಉದ್ಯೋಗ ಸೃಷ್ಟಿಸಿ 'ಕೆಲಸಕ್ಕಾಗಿ ಆಹಾರ' ಎಂದು ನೀಡಿದ್ದರೆ ಅದರಿಂದ ಅಭಿವೃದ್ಧಿ ಮತ್ತು ಬಡತನದ ನಿರ್ಮೂಲನೆ ಎರಡೂ ಸಾಧಿಸುವತ್ತ ಹೆಜ್ಜೆಯಿಟ್ಟಂತಾಗುತ್ತಿತ್ತು. ಆದರೆ ಸರಕಾರ ಈ ಶಿಲ್ಕನ್ನು ಖಾಸಗೀಯವರಿಗೆ ಮಾರಿತು.

ಗ್ರಾಮೀಣ ಪ್ರದೇಶಗಳಲ್ಲಿ ಬಡತನ 1991ರಿಂದೀಚೆಗೆ ತೀವ್ರವಾಗಿ ಹೆಚ್ಚಿದೆ. ಆದ್ದರಿಂದ ಜನ ಹೊಟ್ಟೆ ತುಂಬ ಉಣ್ಣುವುದರಿಂದಾಗಿ ಗೋಧಿ ಕಡಿಮೆಯಾಗಿದೆ ಎಂದು ಹೇಳುವಂತಿಲ್ಲ.

1995-96ನೇ ಸಾಲಿನಲ್ಲಿ ಲೆವಿ ಗೋಧಿಯ ಸಂಗ್ರಹಣೆಯೂ ಕಡಿಮೆಯೇ. ಸಾರ್ವಜನಿಕ ವಿತರಣಾ ವ್ಯವಸ್ಥೆಯೇ ದುರ್ಬಲವಾಗಿರುವುದರಿಂದ ಈ ಸಂಗ್ರಹಣೆಗೂ ಸಿಗಬೇಕಾದ ಪ್ರಾಧಾನ್ಯತೆ ಸಿಗುತ್ತಿಲ್ಲ.

ಇವೆಲ್ಲವೂ ಖಾಸಗಿ ವ್ಯಾಪಾರಸ್ಥರಿಗೆ ಅನುಕೂಲಕರವಾಗುವಂತಹ ಪರಿಸ್ಥಿತಿ. ಈ ಪರಿಸ್ಥಿತಿಯ ಲಾಭವನ್ನು ಅವರು ಪಡೆಯದೇ ಬಿಟ್ಟಾರೆಯೇ? ಇದರಿಂದಾಗಿಯೇ ಗೋಧಿಯ ಬೆಲೆ ಒಮ್ಮಿಂದೊಮ್ಮಲೇ ಏರಿದ್ದು.

ಮುಂದಿನ ವರ್ಷ ಪರಿಸ್ಥಿತಿ ಸುಧಾರಿಸುವುದೇ? ಗೋಧಿ ಆಮದಿನಿಂದಾಗುವ ಪರಿಣಾಮಗಳೇನು?

ಆಹಾರ ಧಾನ್ಯಗಳ ಉತ್ಪಾದನೆ ಮುಂದಿನ ವರ್ಷ ಸುಧಾರಿಸಿದರೂ ದೀರ್ಘ ಕಾಲಿನ ಪರಿಣಾಮಗಳು ಉಳಿಯುತ್ತವೆ. ವ್ಯಾಪಾರದ ಉದಾರೀಕರಣ, ಕೃಷಿಯ ಉದಾರೀಕರಣ, ಗ್ರಾಮೀಣ ಹೂಡಿಕೆ ಮತ್ತು ಗ್ರಾಮೀಣ ಬಡತನದ ನಿರ್ಲಕ್ಷ್ಯ, ಕೃಷಿ ರಫ್ತಿನ ಮೇಲೆ ಅರ್ಥಹೀನ ಒತ್ತು ಇವೆಲ್ಲವೂ ಇಂತಹ ಪರಿಣಾಮವನ್ನೇ ಉಂಟು ಮಾಡುವುದು. ಇವೆಲ್ಲದರ ಒಟ್ಟು ಪರಿಣಾಮವೇನೆಂದರೆ ಭಾರತದಂತಹ ಬೃಹತ್ ರಾಷ್ಟ್ರ ಆಹಾರ ಆಮದು ಮಾಡಿಕೊಳ್ಳುವ ರಾಷ್ಟ್ರವಾಗಿ ಪರಿವರ್ತನೆ ಹೊಂದುವುದು, ಚೀನಾ ಸಹ ಆಹಾರ ಆಮದು ಮಾಡಿಕೊಳ್ಳುವ ರಾಷ್ಟ್ರವಾಗುವ ಲಕ್ಷಣಗಳಿವೆ.

ಹೀಗಾದರೆ ಯಾರಿಗೆ ಲಾಭ? ಅಮೆರಿಕ ಮತ್ತು ಇತರ ಮುಂದುವರಿದ ದೇಶಗಳಿಗೆ. ಈಗ ಈ ದೇಶಗಳು ತಮ್ಮ ರೈತರು ಬೆಳೆದ ಆಹಾರ ಧಾನ್ಯಗಳಿಗೆ ಅಪಾರ ಪ್ರಮಾಣದ ಸಹಾಯ ಧನ ನೀಡುತ್ತಿದ್ದಾರೆ. ಭಾರತ ಮತ್ತು ಚೀನಾ ಆಹಾರ ಆಮದು ಮಾಡಿಕೊಳ್ಳುವ ದೇಶಗಳಾಗಿ ಪರಿವರ್ತಿತವಾದರೆ ಆಗ ಈ ದೇಶಗಳ ಪರಾವಲಂಬನೆ ಹೆಚ್ಚುತ್ತದೆ. ಆಗ ಅಮೆರಿಕ ಮತ್ತು ಇತರ ಮುಂದುವರಿದ ದೇಶಗಳು ಆಹಾರ ಧಾನ್ಯದ ಬೆಲೆಗಳನ್ನು ಯದ್ವಾತದ್ವಾ ಏರಿಸುತ್ತವೆ. ಆಗ ಆ ದೇಶಗಳ ರೈತರಿಗೆ ಸಹಾಯಧನ ನೀಡುವ ಅವಶ್ಯಕತೆ ಇರುವುದಿಲ್ಲ(ಈ ಮೂಲಕ ಈ ದೇಶಗಳು ಗ್ಯಾಟ್ 94ರ ನಿಯಮಗಳನ್ನು ಪಾಲಿಸಿದಂತಾಗುತ್ತದೆ!) ಆದರೆ ಇದರ ಬೆಲೆಯನ್ನು ಭಾರತದಂತಹ ದೇಶಗಳು ತೆರಬೇಕಾಗುತ್ತದೆ, ರಾಜಕೀಯ ಸಾರ್ವಭೌಮತೆಯನ್ನು ಕಳೆದುಕೊಳ್ಳಬೇಕಾಗುತ್ತದೆ.

ಇದು ಇತ್ತೀಚೆಗೆ ಗೋಧಿಯ ಬೆಲೆ ಏರಿದ್ದರ ಹಿನ್ನೆಲೆ ಮತ್ತು ಅದು ಮುಂದೆ ಬೆಳೆಯಬಹುದಾದ ರೀತಿ. ಹೇಗಿದೆ ಉದಾರೀಕರಣದ ಉಡುಗೊರೆ? □

"ಆರ್ಥಿಕ ಸುಧಾರಣೆಗಳು ಯಶಸ್ವಿಯಾಗಲು ರಾಜ್ಯಗಳು ಕಚ್ಚಾಡಬೇಕು"!

ಇದನ್ನು ವಿಶ್ವ ಬ್ಯಾಂಕಿನ ನಿರ್ದೇಶಕರೊಬ್ಬರು ಹೇಳಿದ್ದಾರೆ. ಉದಾರೀಕರಣ/ಖಾಸಗೀಕರಣಗಳೆಂಬ ಆರ್ಥಿಕ ಸುಧಾರಣೆಗಳಿಂದಲೇ ಭಾರತದ ಉಳಿವು ಎಂದು ಹೇಳಿ ಅದಕ್ಕೆ ಎಲ್ಲ ತರಹದ ವಿವರಣೆ ನೀಡುತ್ತಾ ತಾನು ನೀಡುವ ಸಾಲಗಳಿಗೆಲ್ಲ ಷರತ್ತುಗಳ ಗೊಂಚಲುಗಳನ್ನೇ ಸೇರಿಸಿದ ವಿಶ್ವ ಬ್ಯಾಂಕ್ ತಾನು ಹೇಳಿದ್ದಂತೆ ಭಾರತವೇಕೆ "ಸ್ವರ್ಗ"ವಾಗಿಲ್ಲ ಎಂಬ ವಿವರಣೆಯನ್ನು ಆಗಾಗ ನೀಡುತ್ತಲೇ ಬಂದಿದೆ. ಅದಾಗಿಲ್ಲ, ಇದಾಗಿಲ್ಲ, ಅದನ್ನು ಮಾಡಬೇಕಾಗಿತ್ತು, ಇದನ್ನು ಸರಿಯಾಗಿ ಮಾಡಬೇಕಾಗಿತ್ತು, ಇತ್ಯಾದಿ ನೆವಗಳು ಅದರ ಬತ್ತಳಿಕೆಯಲ್ಲಿ ವಿಪುಲವಾಗಿ ದೊರೆಯುತ್ತವೆ. ಈಗಿನದು ಹೊಸದೊಂದು ವರಸೆ ಅಷ್ಟೇ.

ಈ ನಿರ್ದೇಶಕರ ಪ್ರಕಾರ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತರುವಲ್ಲಿ ರಾಜ್ಯಗಳ ನಡುವೆ ಸ್ಪರ್ಧೆ ಏರ್ಪಟ್ಟರೆ, ಆಗ ಇಡೀ ದೇಶಕ್ಕೆ ಲಾಭವಾಗುತ್ತದೆ. ಇದರಿಂದ ಪ್ರತಿರಾಜ್ಯಕ್ಕೂ ವಿದೇಶೀ ನೇರ ಹೂಡಿಕೆ ಅಪಾರ ಪ್ರಮಾಣದಲ್ಲಿ ಹರಿದು ಬಂದು ಅಭಿವೃದ್ಧಿಗೆ ನೆರವಾಗುತ್ತದಂತೆ. ಇದಲ್ಲದೆ ಆರ್ಥಿಕ ಸುಧಾರಣೆಗಳ ಗತಿಯನ್ನು ಇನ್ನೂ ಹೆಚ್ಚು ಮಾಡಬೇಕೆಂದೂ ಆತ ಹೇಳಿದ್ದಾರೆ.

ಈ ಮಾತುಗಳ ಜೊತೆಗೇ ಈ ಮಹಾಶಯ ಇನ್ನೂ ಒಂದು ಮುಖ್ಯವಾದ ಮಾತು ಹೇಳಿದ್ದಾನೆ. ಬಡತನ ನಿರ್ಮೂಲನಾ ಕಾರ್ಯಕ್ರಮವನ್ನು ಜಾರಿಗೆ ತರುವುದರಿಂದ ಆರ್ಥಿಕ ಸುಧಾರಣೆಗಳಿಗೆ ಹೆಚ್ಚು ಸ್ವೀಕಾರಾರ್ಹ ಬರುತ್ತದಂತೆ. ಈ ಮಾತು ಹೇಗಿದೆಯೆಂದರೆ ಕೂಲಿ ಮಾಡಿಸಿಕೊಳ್ಳುವವನಿಗೆ ಬಹಳ ಕಡಿಮೆ ಕೂಲಿ ನೀಡಿ ಹಬ್ಬ ಹರಿದಿನಗಳಲ್ಲಿ ಊಟ ಉಡುಗೊರೆ ನೀಡಿದಂತೆ. ಬಡತನ ನಿರ್ಮೂಲನೆಗೆ ಜನಗಳಿಗೆ ಕೊಳ್ಳುವ ಸಾಮರ್ಥ್ಯ ಬರಬೇಕು. ಅದು ಬರುವುದು ಉದ್ಯೋಗದ ಮೂಲಕ ಉತ್ತಮ ವೇತನದ ಮೂಲಕ. ಉದಾರೀಕರಣ ವೆಂಬುದು ಇದಕ್ಕೆ ಪೂರ್ತಿ ವಿರುದ್ಧವಾಗಿಯೇ ಕೆಲಸ ಮಾಡುತ್ತದೆ. ಆದ್ದರಿಂದಲೇ ಉದಾರೀಕರಣ ಬಂದಂದಿನಿಂದ ಬಡತನ ಹೆಚ್ಚಾಗಿದೆ. ಈ ವಿಷಯವನ್ನು ಯೋಜನಾ ಆಯೋಗವು ಇತ್ತೀಚೆಗೆ ದೃಢಪಡಿಸಿದೆ. ಜನರ ಬಡತನ ಹೆಚ್ಚು ಮಾಡುವ ಉದಾರೀಕರಣದಿಂದ ಹೆಚ್ಚಿನ ವಿದೇಶಿ ನೇರ ಹೂಡಿಕೆಯ ಮೂಲಕ ಅಭಿವೃದ್ಧಿ ಆಗುತ್ತದೆ ಎಂದು ಯಾರಾದರೂ ಹೇಳಿದರೆ ಹೇಗೆ ನಂಬುವುದು.

ವಿಶ್ವಬ್ಯಾಂಕಿನವರು ಇತ್ತೀಚೆಗೆ ಕರಗತಮಾಡಿಕೊಳ್ಳುತ್ತಿರುವ ಕಲೆ ಯಾವುದೆಂದರೆ ಉದಾರೀಕರಣದಿಂದ ಸಮಾಜವಾದದಿಂದಾಗುವ ಪರಿಣಾಮ ಆಗುತ್ತದೆ ಎಂಬಂತಹ ಸುಳ್ಳುಗಳನ್ನು ಪರೋಕ್ಷವಾಗಿ ಹೇಳುವುದು. ಆದ್ದರಿಂದಲೇ ಉದಾರೀಕರಣದಿಂದ ಬಡತನ ಹೆಚ್ಚಾಗುತ್ತಿದ್ದರೆ ಅದರಿಂದ ಬಡತನ ಕಡಿಮೆ ಆಗುತ್ತದೆ ಎನ್ನುವುದು ಎಂದು ಇವರು ಹೇಳುತ್ತಾರೆ. ಜೊತೆಗೇ ಇನ್ನೂ ಹೆಚ್ಚು ಉದಾರೀಕರಣ ಆಗಬೇಕು ಎನ್ನುವುದು.

ಹಾಗೆ ಭಾರತದ ಬಹುತೇಕ ರಾಜ್ಯಗಳೂ (ಎಡರಂಗ ಸರಕಾರಗಳಿರುವ ರಾಜ್ಯಗಳನ್ನು ಹೊರತು ಪಡಿಸಿ) ಆರ್ಥಿಕ ಸುಧಾರಣೆಗಳ ಪರವಾಗೇ ಇವೆ. ಹೀಗಿರುವಾಗ ಆರ್ಥಿಕ ಸುಧಾರಣೆಗಳಿಂದ ನಿರೀಕ್ಷಿತ ಪರಿಣಾಮಗಳು ಆಗಲೇ ಬೇಕಾಗಿತ್ತು, ಆದರೆ ಆಗಿಲ್ಲ. ಯಾಕೆ ಎಂದು ವಿಶ್ವಬ್ಯಾಂಕಿನವರು ಕೇಳಿಕೊಳ್ಳಲಾರರು. ಯಾರಾದರೂ ಕೇಳಿದರೂ ಮತ್ತೆ ಕುಂಟು ನೆಪಗಳನ್ನು ಹುಡುಕುತ್ತಾರೆ. ಇದಲ್ಲವೇ ಸಾಮ್ರಾಜ್ಯಶಾಹಿಗಳ ಹಿತಾಸಕ್ತಿಗಳನ್ನು ಕಾಯುವ ಪರಿ?

ಸಿಟಿ ಬ್ಯಾಂಕಿನ 'ಚಮಗಾರ' ಹಗರಣ

ಏನಿದು ಹೊಸ ಹಗರಣ ಎಂದಿರಾ? ಇದು ಸಿಟಿ ಬ್ಯಾಂಕ್ ಎಂಬ ಬಹುರಾಷ್ಟ್ರೀಯ ಬ್ಯಾಂಕ್ (ಬಹುರಾಷ್ಟ್ರೀಯ ಕಂಪನಿ) ಮಹಾರಾಷ್ಟ್ರದಲ್ಲಿ ಮಾಡಿದ ಹಗರಣ. ನಮ್ಮ ದೇಶದ ಸರಕಾರವನ್ನು, ಬಡಜನರನ್ನು ಈ ಬ್ಯಾಂಕುಗಳು ಹೇಗೆ ಮೋಸಗೊಳಿಸಿ ಪರೋಪಕಾರಿ ಪೋಸು ಕೊಡುತ್ತವೆ ಎಂಬುದಕ್ಕೆ ಇದೊಂದು ಒಳ್ಳೆಯ ನಿದರ್ಶನ.

ಇಂದಿಗೂ ಬ್ಯಾಂಕುಗಳು ಆದ್ಯತೆಯ ವಲಯಕ್ಕೆ ಸಾಲದ ನೆರವು ನೀಡಲೇ ಬೇಕು. ಈ ಸಾಲಗಳ ಮೇಲಿನ ಬಡ್ಡಿಯೂ ಕಡಿಮೆಯಾಗಿರುತ್ತವೆ. ಈ ನಿಯಮದಲ್ಲಿ ವಿದೇಶೀ ಬ್ಯಾಂಕುಗಳಿಗೆ ಸ್ವಲ್ಪ ರಿಯಾಯಿತಿಯೂ ಇದೆ. ಅಂದರೆ ಅವರು ಈ ಆದ್ಯತೆ ವಲಯಕ್ಕೆ ನೀಡಬೇಕಾದ ಪ್ರಮಾಣದಲ್ಲಿ ರಿಯಾಯಿತಿ ಇದೆ. ಅಷ್ಟೇ ಅಲ್ಲ ಸಾಲ ನೀಡಬೇಕಾದ ಚಟುವಟಿಕೆಗಳಲ್ಲಿ ಅವರಿಗೆ ರಿಯಾಯಿತಿ ಇದೆ. ಆದ್ಯತೆ ವಲಯಕ್ಕೆ ಬ್ಯಾಂಕುಗಳು ಸಾಲ ನೀಡುವುದನ್ನು ಪ್ರೋತ್ಸಾಹಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಅದರ ಸಹ ಸಂಸ್ಥೆಗಳು ಈ ಬ್ಯಾಂಕುಗಳಿಗೆ ಪುನರ್ಸಾಲದ ನೆರವು ನೀಡುತ್ತವೆ. ಈ ಸಾಲದ ಮೇಲೆ ಬಡ್ಡಿ ಕಡಿಮೆ ಇರುವುದರಿಂದ ಬ್ಯಾಂಕುಗಳಿಗೆ ಲಾಭವಾಗುತ್ತದೆ.

ಸಿಟಿ ಬ್ಯಾಂಕು ಮಾಡಿದ್ದು ಇದು. ಜೈಹಿಂದ್ ಸಹಕಾರಿ ಚರ್ಮ ಉತ್ಪಾದಕ ಸಂಘಕ್ಕೆ ಎರಡು ಕೋಟಿ ರೂಪಾಯಿಗಳ ಸಾಲ ನೀಡಿತು. ಈ ಹಣವನ್ನು ಸಂಘ ತನ್ನ ಸದಸ್ಯರಾದ ಚಮಗಾರರಿಗೆ ನೀಡಬೇಕಿತ್ತು. ಆದರೆ ಆ ಸಂಘವೇ ನಿಜದಲ್ಲಿ ಇರಲಿಲ್ಲ. 'ಬೇನಾಮಿ' ಸಂಘಕ್ಕೆ ನೀಡಿದ ಸಾಲಕ್ಕೆ ಪುನರ್ಸಾಲ ಯಾ ಪುನಃರ್ಧನದ ನೆರವನ್ನೂ ಸಿಟಿ ಬ್ಯಾಂಕ್ 'ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್'ನಿಂದ ಪಡೆಯಿತು. ಸಿಟಿ ಬ್ಯಾಂಕಿನ ಸಾಲದ ಮರುಪಾವತಿಯೂ ಆಯಿತು.

ಜೈಹಿಂದ್ ಸಹಕಾರಿ ಸಂಘ ಎಂಬ ಸಂಘ ಒಂದು ಕಾಲದಲ್ಲಿ ಅಸ್ತಿತ್ವದಲ್ಲಿತ್ತಂತೆ. ಅದನ್ನು 'ಮೆಟ್ರೋ ಕೂಸ್' ಎಂಬ ಸಂಸ್ಥೆ ವಹಿಸಿಕೊಂಡಿತಂತೆ. ಅನಂತರದಲ್ಲಿ ಆ ಹಗರಣ ಮಾಡಲಾಯಿತು. ಆದ್ಯತೆಯ ವಲಯಕ್ಕೆ ಸಾಲ ನೀಡಿದಂತಾಯಿತು, ಅದಕ್ಕಿರುವ ರಿಯಾಯಿತಿಯನ್ನು ಪಡೆದಂತಾಯಿತು, ಸಾಲ ವಸೂಲಿಯೂ ಆಯಿತು. ಭಾರತದಲ್ಲಿ ಯಾರ ಅಭಿವೃದ್ಧಿಯಾಯಿತು? ಯಾರದ್ದೂ ಇಲ್ಲ ಸಿಟಿ ಬ್ಯಾಂಕಿಗೇನು? ಅದಕ್ಕೆ ಲಾಭವಾದರೆ ಆಯಿತು ಅಲ್ಲವೇ?

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಎಚ್ಚರಿಕೆ: ಕುಸುಬಲಕ್ಕಿ ಕಳ್ಳರು ಬಂದಿದ್ದಾರೆ

ಅಂತಿಂತಹ ಕಳ್ಳರಲ್ಲ ಸ್ವಾಮಿ ಇವರು 'ಜಗಕಳ್ಳರು'. ನೆಸ್ಲೆ ಎಂಬ ಕಂಪನಿ ಹಿಂದೆ ಬೇವು ಮತ್ತು ಅರಿಶಿಣಕ್ಕೆ ಪೇಟೆಂಟ್ ಪಡೆದಂತೆ ಈಗ ಕುಸುಬಲಕ್ಕಿಗೆ ಪೇಟೆಂಟಿಗೆ ಅರ್ಜಿ ಹಾಕಿದೆಯಂತೆ.

ಹೆಚ್ಚಾಗಿ ಬಡವರು ಉಣ್ಣುವ ಕುಸುಬಲಕ್ಕಿಗೂ ಈ ಕಂಪನಿ ಈಗ ಗಂಟುಬಿದ್ದಿದೆ. ಗಂಟುಮಾಡಿಕೊಳ್ಳುವ ಉದ್ದೇಶ ಈ ಕಂಪನಿಯದು.

ಇನ್ನೂ ಹಲವು ಆಹಾರ ಪದಾರ್ಥಗಳಿಗೆ ಪೇಟೆಂಟ್ ಅರ್ಜಿ ಸಲ್ಲಿಸಿರುವ ನೆಸ್ಲೆ 1970ರ ಭಾರತೀಯ ಪೇಟೆಂಟ್ ಕಾಯಿದೆಯ ಬದಲಾವಣೆ ಆಗುವುದನ್ನೇ ಕಾಯುತ್ತಿದೆ. ಯಾಕೆಂದರೆ ಈಗ ಈ ಕಾಯಿದೆಯ ಪ್ರಕಾರ ಆಹಾರ ಪದಾರ್ಥಗಳಿಗೆ ಪೇಟೆಂಟ್ ಮಾಡುವಂತಿಲ್ಲ.

ಕುಸುಬಲಕ್ಕಿ ಉಣ್ಣುವ ಜನ ಸಾಮಾನ್ಯರೇ ಹೋರಾಟಕ್ಕೆ ಸಿದ್ಧವಾಗಿ

"ಆರ್ಥಿಕ ಸುಧಾರಣೆಗಳ ಅಡಿಪಾಯವೇ ಟೊಳ್ಳು"

ಹೀಗೆ ನೇರವಾಗಿ ಯಾರೂ ಹೇಳಿಲ್ಲ. ಆದರೆ ಪರೋಕ್ಷವಾಗಿ ಇದನ್ನೇ ಹೇಳಿರುವ ಯೋಜನಾ ಆಯೋಗದ ವರದಿಯೊಂದರ ಸುದ್ದಿ ಬಂದಿದೆ. ಎಂಟನೇ ಪಂಚವಾರ್ಷಿಕ ಯೋಜನೆಯ ಮಧ್ಯಕಾಲೀನ ಸಮೀಕ್ಷೆಯ ಪ್ರಕಾರ ರಫ್ತು ಬೆಳವಣಿಗೆ ಆರ್ಥಿಕ ಸುಧಾರಣೆಗಳ ಅವಧಿಯಲ್ಲಿ 1985-86 ಮತ್ತು 1990-91ರ ಅವಧಿಗಿಂತ ಕಡಿಮೆ ಪ್ರಮಾಣದಲ್ಲಿತ್ತು.

ನರಸಿಂಹರಾಯರ ಸರಕಾರ 1991 ರಲ್ಲಿ ಅಧಿಕಾರಕ್ಕೆ ಬಂದ ಸಂದರ್ಭವನ್ನು ನೆನಪಿಸಿಕೊಂಡರೆ ಆಗ ಭಾರತ ತೀವ್ರ ಬಿಕ್ಕಟ್ಟಿನಲ್ಲಿತ್ತು ಎಂಬುದು ನೆನಪಾಗುತ್ತದೆ. ಬಿಕ್ಕಟ್ಟು ಯಾಕೆಂದರೆ ವಿದೇಶಿ ವ್ಯಾಪಾರ ಬಾಕಿ ಅಪಾರವಾಗಿ ಬೆಳೆದು ನಿಂತಿತ್ತು. ವಿದೇಶೀ ವಿನಿಮಯ ಶಿಲ್ಕು ಇರಲೇ ಇಲ್ಲ. ಸರಕಾರ ಮುಖ್ಯ ಅವಶ್ಯಕತೆಗಳಾದ ತೈಲವನ್ನೂ ಆಮದು ಮಾಡಿಕೊಳ್ಳುವ ಪರಿಸ್ಥಿತಿಯಲ್ಲಿರಲಿಲ್ಲ. ಭಾರತ ಸರಕಾರ ಚಿನ್ನವನ್ನು ಬ್ರಿಟನ್ನಿಗೆ ಒತ್ತೆಯಿಟ್ಟು ಸಾಲ ಪಡೆಯುವಂತಹ ಪರಿಸ್ಥಿತಿ ಉಂಟಾಗಿತ್ತು.

ಆಗ ಐಎಂಎಫ್ ಮತ್ತು ವಿಶ್ವ ಬ್ಯಾಂಕುಗಳು ಹೇರಿದ ಎಲ್ಲ ಶರತ್ತುಗಳನ್ನು ಒಪ್ಪಿಕೊಂಡು ಸಾಲ ಪಡೆಯಲಾಯಿತು. ಆ ಷರತ್ತುಗಳನ್ನು ಒಪ್ಪಿಕೊಂಡಿದ್ದರಿಂದಲೇ ಆರ್ಥಿಕ ಸುಧಾರಣೆಗಳು ಜಾರಿಗೆ ಬಂದವು. ಹಿಂದೆಯೂ ಈ ಸುಧಾರಣೆಗಳಿದ್ದವು. ಆದರೆ ಈಗ ಈ ಸುಧಾರಣೆಗಳ ಪ್ರಮಾಣ, ವೇಗ ಎರಡೂ ಹೆಚ್ಚಾಗಿದ್ದವು. ಆಗ ಈ ಆರ್ಥಿಕ ಸುಧಾರಣೆಗಳಿಂದ ದೇಶಕ್ಕೆ ಆಗಬಹುದಾದ ಹಲವು ಲಾಭಗಳ ಬಗ್ಗೆ ದೊಡ್ಡ ಪ್ರಚಾರ ಪ್ರಾರಂಭಿಸಿತ್ತು ಸರಕಾರ ಮತ್ತು ಉದಾರೀಕರಣ ಪರ ಅರ್ಥಶಾಸ್ತ್ರಜ್ಞರ ಗುಂಪು.

ಆರ್ಥಿಕ ಸುಧಾರಣೆಗಳು ಜಾರಿಗೆ ಬಂದ ಮೇಲೂ ರಫ್ತು ಬಹಳ ಹೆಚ್ಚಾಗಿದೆ ಎಂದೂ ದೊಡ್ಡ ಪ್ರಚಾರ ಮಾಡಲಾಯಿತು. ಆದರೆ ಈಗ ಸರಕಾರದ ಅಂಗವೇ ಆದ ಯೋಜನಾ ಆಯೋಗ ಹೇಳುತ್ತದೆ ಆರ್ಥಿಕ ಸುಧಾರಣೆಗಳ ನಂತರ ರಫ್ತು ಬೆಳವಣಿಗೆ ಕಡಿಮೆ ಆಗಿದೆ ಎಂದು.

ಹೇಗಿದೆ ಉದಾರೀಕರಣದ ಆರ್ಥಿಕ ಸುಧಾರಣೆಗಳ ಪರಿಣಾಮ?

"ಖಾಸಗೀ ವಿವಿ ಸ್ಥಾಪನೆಗೆ ಮುನ್ನ ರಾಷ್ಟ್ರೀಯ ಚರ್ಚೆ ನಡೆಯಲಿ"

"ಜ್ಞಾನ ಭಾರತಿ"ಯಲ್ಲೊಂದು ಸಂವಾದ

ವರದಿಗಳು
ಕೃಷ್ಣಚೆನ್ನ, ಪೋಲಂಪಲ್ಲಿ

ಸೌರಿಂಗ, ಕೈಗಾರಿಕೆ, ಇತರ ಎಲ್ಲಾ ರಂಗಗಳಲ್ಲಿಯೂ ಖಾಸಗೀಕರಣ ಬೇತಾಳವಾಗಿದ್ದದ್ದು ಈಗ ಶಿಕ್ಷಣವನ್ನು ಆಡರಿಕೊಂಡಿದೆ. ನಾಯಿ ಕೊಡೆಗಳಂತೆ ಹುಟ್ಟಿಕೊಂಡಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಂತೆಯೇ 'ಖಾಸಗೀ ವಿಶ್ವವಿದ್ಯಾಲಯ'ಗಳನ್ನು ಸ್ಥಾಪಿಸುವ ಬಗ್ಗೆ ಕೇಂದ್ರದ ಮಾನವ ಸಂಪನ್ಮೂಲ ಸಚಿವ ಎಸ್.ಆರ್.ಬೊಮ್ಮಾಯಿ, ಈ ಬಗ್ಗೆ ಈಗಾಗಲೇ ಸಂಸತ್ತಿನಲ್ಲಿ ಮಸೂದೆ ಯನ್ನು ಜಾರಿ ಮಾಡುವುದಾಗಿ ಹೇಳಿದ್ದು ವಿವಾದಕ್ಕೆಡೆ ಮಾಡಿದ್ದಾರೆ. ಪರಿಣಾಮವಾಗಿ ದೇಶಾದ್ಯಂತ ವಿರೋಧ ಹುಟ್ಟಿಕೊಂಡು ಮಸೂದೆಯ ಬಗ್ಗೆ ಚರ್ಚೆ ನಡೆಯಲು ಶುರುವಾಗಿದೆ. ಹಿಂದೆ ನರಸಿಂಹರಾವ್ ಕಾಂಗ್ರೆಸ್ ಸರಕಾರ ಭಾರತದಲ್ಲಿ ನಿರ್ಲಜ್ಜವಾಗಿ ಅನುಷ್ಠಾನಗೊಳಿಸಿದ 'ಆರ್ಥಿಕ ಉದಾರೀಕರಣ'ವೆಂಬ ಪೆಡಂಭೂತದ ಬಗ್ಗೆ ಬರೆಯುವುದು ವಿಪುಲವಾಗಿದೆ. ನಮ್ಮಂತಹ ಪ್ರಜಾಸತ್ತಾತ್ಮಕ ದೇಶದಲ್ಲಿ, ಮೂಲಭೂತ ಆದ್ಯತೆಗಳ ಬೇರುಗಳನ್ನೇ ಕಿತ್ತೊಗೆಯುವ ಹೇಯ ಕೆಲಸ ಮಾಡಹೊರಟಿರುವ ಈ ನೀತಿಯೂ ಇಪ್ಪತ್ತನೇ ಶತಮಾನದಲ್ಲಿ ಭಾರತಕ್ಕೆ ತಟ್ಟಿದ ಶಾಪ ಎನ್ನುವಂತಿದೆ.

ಈ ಆರ್ಥಿಕ ಉದಾರೀಕರಣದ ಭಾಗವಾಗಿ ಅನುಷ್ಠಾನಕ್ಕೆ ಬರಹೊರಟಿರುವುದು 'ಖಾಸಗೀ ಕರಣ' ನಮ್ಮನ್ನು ಆಳುವವರು ಪ್ರತಿಯೊಂದಕ್ಕೂ 'ಖಾಸಗೀಕರಣ'ದ ಮಾತನಾಡುತ್ತಿರುವುದನ್ನು ನಾವು ಕಾಣಬಹುದಾಗಿದೆ.

ಈ ವಿವಾದಾಸ್ಪದ ವಿಷಯದ ಬಗ್ಗೆ ಭಾರತ ವಿದ್ಯಾರ್ಥಿ ಫೆಡರೇಷನ್ ಕಳೆದ ಡಿಸೆಂಬರ್ 31ರಂದು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್ಸಿನ 'ಕನ್ನಡ ವಿಭಾಗ' ದಲ್ಲಿ ಸಂವಾದ ಚರ್ಚೆ ಕಾರ್ಯಕ್ರಮವೊಂದನ್ನು ಏರ್ಪಡಿಸಿತ್ತು.

ಸಂವಾದದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವ ತಿಮ್ಮಪ್ಪ, ರಾಜ್ಯಶಾಸ್ತ್ರ ಪ್ರಾಧ್ಯಾಪಕ ಸಂದೀಪ್ ಶಾಸ್ತ್ರಿ, ಎಸ್.ಎಫ್.ಐ. ರಾಜ್ಯಕಾರ್ಯದರ್ಶಿ ಕೆ.ಪ್ರಕಾಶ್, ಸೆನೆಟ್ ಸದಸ್ಯ ಕೆ.ಎಸ್.ಲಕ್ಷ್ಮಿ ವಿ.ವಿ.ಯ ಎಸ್.ಎಫ್.ಐ. ಮುಖಂಡರಾದ ಶ್ರೀನಿವಾಸ್ ಮತ್ತು ರಾಮಕೃಷ್ಣ ಸೇರಿದಂತೆ ನೂರಾರು ವಿದ್ಯಾರ್ಥಿ - ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

ನಾನು ಕಂಡ ಅನೇಕ ಸಂವಾದಗಳಿಗಿಂತ ಇದು ತುಸು ಭಿನ್ನವಾಗಿತ್ತು. ವಿದ್ಯಾರ್ಥಿಗಳು ಆವೇಶಭರಿತರಾಗಿ ಸಂವಾದದಲ್ಲಿ ಭಾಗವಹಿಸುತ್ತಾರೆಂಬ ನನ್ನ ನಿರೀಕ್ಷೆ ಹುಸಿಯಾದರೂ, ವಿಷಯದ ಕುರಿತು ಅವರು ನಡೆಸಿದ ಚರ್ಚೆ ಮಾತ್ರ ಪರಿಪೂರ್ಣ ಆರೋಗ್ಯಕರವಾಗಿತ್ತು. ಯಾವುದೇ ಬಗೆಯ ಅತಿರೇಕ, ಮಾತಿನ ಚಕಮಕಿ ಅನುವು ಮಾಡಿಕೊಡದಂತೆ ಸಂವಾದ ಯಶಸ್ವಿಯಾಯಿತು.

ವಿವಿಯ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾದ ಸಂದೀಪ್ ಶಾಸ್ತ್ರಿ ಮಾನವ ಸಂಪನ್ಮೂಲ ಸಚಿವ ಬೊಮ್ಮಾಯಿ ಈ ಮಸೂದೆಯನ್ನು ಮಂಡಿಸುವ ಮುನ್ನ ಯಾವುದೇ ರೀತಿಯ ಚರ್ಚೆ ಮಾಡದಿರುವುದನ್ನು ಬಲವಾಗಿ ಟೀಕಿಸಿದರು.

ಖಾಸಗಿ ವಿವಿಗಳ ಮಸೂದೆಯನ್ನು ಮಂಡಿಸುವ ಮಾತನಾಡುವ ಮುನ್ನವೇ ಆ ಬಗ್ಗೆ ರಾಷ್ಟ್ರೀಯ ಚರ್ಚೆ ಮಾಡುವ ಅಗತ್ಯವಿತ್ತು ಎಂದು ಒತ್ತಿಹೇಳಿದ ಸಂದೀಪ್ ಶಾಸ್ತ್ರಿಯವರು ಆರ್ಥಿಕ ಉದಾರೀಕರಣವಾದದ ಹಿನ್ನಲೆಯ ಉನ್ನತ ಶಿಕ್ಷಣವನ್ನು ಖಾಸಗೀಕರಣಗೊಳಿಸುವುದು ಭಾರತದಂತಹ ಪ್ರಜಾಸತ್ತಾತ್ಮಕ ದೇಶದಲ್ಲಿ ಸೂಕ್ತವಾದುದಲ್ಲ ಎಂದು ಟೀಕಿಸಿದರು.

ಖಾಸಗೀಕರಣ ಮಾಡುವುದು ಮುಖ್ಯವಲ್ಲ, ಖಾಸಗೀಕರಣ ಮಾಡಿದರೆ ಉಂಟಾಗುವ ಅನಾಹುತಗಳ ಬಗ್ಗೆ ಎಚ್ಚರ ವಹಿಸುವುದು ಮುಖ್ಯ. ಪರಿಣಾಮವಾಗಿಯೇ ದೀರ್ಘಕಾಲದ ಶಿಕ್ಷಣ ನೀತಿಯ ಅನುಷ್ಠಾನ ಮಾಡುವುದು ಅಗತ್ಯವೆಂದು ಅವರು ನುಡಿದರು.

ಭಾರತ ವಿದ್ಯಾರ್ಥಿ ಫೆಡರೇಷನ್ ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್, ಖಾಸಗಿ ವಿ.ವಿ. ಸ್ಥಾಪಿಸುವ ಕೇಂದ್ರ ಸರಕಾರದ ನಿಲುವನ್ನು ಕಠಿಣವಾಗಿ ತರಾಟೆಗೆ ತೆಗೆದುಕೊಂಡರು.

ಶಿಕ್ಷಣ ಯಾಕೆ ಕೊಡಬೇಕು? ಯಾರಿಗೆ ಕೊಡಬೇಕು? ಎನ್ನುವ ಮೂಲಭೂತ ಕಲ್ಪನೆಗಳನ್ನೇ ಹೊಂದಿರದ ವ್ಯಕ್ತಿಗಳು ಶಿಕ್ಷಣವನ್ನು ಅಧೋಗತಿಗೆ ತಳ್ಳಿದ್ದಾರೆ. ಮೇಲಾಗಿ ಸ್ವಾತಂತ್ರ್ಯ ಬಂದ ನಂತರದ ನೆಹರೂ ಸರಕಾರದಿಂದ ಮೊದಲಾಗಿ ದೇವೇಗೌಡರ ಸರಕಾರದವರೆಗೂ ಸಮಗ್ರ ಶಿಕ್ಷಣ ನೀತಿಯೊಂದನ್ನು ರೂಪಿಸಲು ಸಾಧ್ಯವಾಗಿಲ್ಲದಿರುವುದು ಈ ದೇಶದ ಮಹಾ ದುರಂತವೆಂದು ಅರ್ಥೈಸಿದರು.

ಬರೀ ಸಮಿತಿ, ಆಯೋಗಗಳನ್ನು ರಚಿಸುವುದರಲ್ಲಿಯೇ ಕಾಲ ಕಳೆದ ಸರಕಾರಗಳು ಇವತ್ತಿನ ಶೈಕ್ಷಣಿಕ ದೌರ್ಬಲ್ಯಕ್ಕೆ ನೇರವಾಗಿ ಹೊಣೆಯಾಗಿದೆ ಎಂದು ಆರೋಪಿಸಿದ ಪ್ರಕಾಶ್ ಇದು ಬಂಡವಾಳಶಾಹಿಗಳು ಖಾಸಗೀಕರಣವೆಂಬ ನೆಪದಲ್ಲಿ ಮಾಡುತ್ತಿರುವ ವ್ಯವಸ್ಥಿತ ಪಿತೂರಿಯಾಗಿದೆ ಎಂದು ಆರೋಪಿಸಿದರು.

ನಮ್ಮ ನಾಯಕರಿಗೆ ಶಿಕ್ಷಣವನ್ನು ಸುಧಾರಿಸುವ ಯೋಜನೆಗಳನ್ನು ಅನುಷ್ಠಾನಗೊಳಿಸುವ ವಿಚಾರದಲ್ಲಿ ಯಾವುದೇ ಬಗೆಯ ಆಸಕ್ತಿ, ಇಚ್ಛಾಶಕ್ತಿ ಇಲ್ಲವಾಗಿದೆ ಎಂದು ಅವರು ತೀವ್ರ ವಿಷಾದ ವ್ಯಕ್ತಪಡಿಸಿದರು. ಹಾಗೂ ಖಾಸಗಿ ವಿ.ವಿ. ಸ್ಥಾಪನೆಯಿಂದ ಯಾವುದೇ ಪ್ರಯೋಜನವಾಗದು ಎಂದರು. ವಿದ್ಯಾದಾನ ಮಾಡುವುದಾಗಿ ಹುಟ್ಟಿಕೊಂಡ ಮಠಗಳ ಶಿಕ್ಷಣ ಸಂಸ್ಥೆಗಳು ಹಣ ಲೂಟಿ ಮಾಡುತ್ತಿವೆ. ಸ್ವಾಮಿಜಿಗಳು ತಮ್ಮ ಮಾತನ್ನು ತಪ್ಪಿ ಸರಕಾರವನ್ನೇ ತಮ್ಮ ಕಿಸೆಯಲ್ಲಿಟ್ಟುಕೊಂಡವರಂತೆ ವರ್ತಿಸುತ್ತಿರುವುದು ಈ ದೇಶದ ದುರಂತ ಎಂದವರು ಅಭಿಪ್ರಾಯಪಟ್ಟರು.

ಮೂಲತಃ ಯಾವುದೇ ವಿ.ವಿ., ಶಿಕ್ಷಣ ಸಂಸ್ಥೆಯ ಆಡಳಿತದಲ್ಲಿ ಅಲ್ಲಿರುವ ಶಿಕ್ಷಕರು, ವಿದ್ಯಾರ್ಥಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಅವರಿಗೂ ಅವಕಾಶ ನೀಡಬೇಕು ಎಂದು ಪ್ರಕಾಶ ಕರೆ ನೀಡಿದರು.

ಸಂವಾದದ ಅಧ್ಯಕ್ಷತೆಯನ್ನು ವಹಿಸಿದ್ದ ವಿ.ವಿಯ ಕುಲಸಚಿವ ತಿಮ್ಮಪ್ಪ ಶಿಕ್ಷಣ ಸುಧಾರಣೆಯಾಗದೆ ದೇಶದ ಉನ್ನತಿ ಅಸಾಧ್ಯವೆಂದು ಹೇಳಿದರಲ್ಲದೆ, ಸಂವಾದ ಕಾರ್ಯಕ್ರಮದ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ಆರಂಭದಲ್ಲಿ ಸೆನೆಟ್ ಸದಸ್ಯ ಕೆ.ಎಸ್.ಲಕ್ಷ್ಮಿ ಪ್ರಾಸ್ತವಿಕ ಭಾಷಣ ಮಾಡಿದರು. ಸಾಕಷ್ಟು ವಿದ್ಯಾರ್ಥಿಗಳು ಸಕ್ರಿಯವಾಗಿ ಸಂವಾದದಲ್ಲಿ ಪಾಲ್ಗೊಂಡಿದ್ದರು.

ಖಾಸಗಿ ವಿ.ವಿ. ಸ್ಥಾಪನೆ:
ಹಣ ಲೂಟಿ ಮಾಡುವವರಿಗೆ ದೊಡ್ಡ ಅವಕಾಶ

ಖಾಸಗಿ ವಿ.ವಿ. ಸ್ಥಾಪಿಸಲು ಮುಂದೆ ಬರುವ ಕೋಟ್ಯಾಂತರ ರೂ. ಹಣ ಠೇವಣಿ ಅಥವಾ ಶಾಶ್ವತ ದತ್ತಿ ಇಡುವಂತಿರಬೇಕು. ಹಾಗೆ ದತ್ತಿ ಇದ್ದವನು ಮೂಲತಃ ವ್ಯಾಪಾರಿ ಮನೋಭಾವದವನಾಗಿರುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಮೇಲಾಗಿ ಅವನು ಹಣ ಮಾಡುವುದೇ ವೃತ್ತಿಯನ್ನಾಗಿ ಮಾಡಿಕೊಂಡು ಹಗಲು ದರೋಡೆಗೆ ಇಳಿಯುವುದರಲ್ಲಿ ಅನುಮಾನವಿಲ್ಲ, ಸರಕಾರಿ ವಿ.ವಿ.ಯಂತೆ ಇಲ್ಲಿಯೂ ಎಲ್ಲಾ ಆಡಳಿತಾತ್ಮಕ ವ್ಯವಸ್ಥೆ ಇದ್ದರೂ ಕೂಡ ಪ್ರಜಾಸತ್ತಾತ್ಮಕ ಉಳಿಯಲು ಸಾಧ್ಯವಿಲ್ಲ.

ವಿದ್ಯಾರ್ಥಿಗಳು ದುಪ್ಪಟ್ಟು ಹಣ ತೆತ್ತು ಓದುವಂತಾಗುತ್ತವೆ. ಇದರಿಂದ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಲ್ಲದೆ, ಅವನು ವ್ಯಾಸಂಗವನ್ನೇ ಬಿಡುವ ಅಪಾಯವೂ ಇಲ್ಲದಿಲ್ಲ. ಇವಂತೂ ಬಂಡವಾಳಶಾಹಿಗಳ ಪಿತೂರಿ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. □

ದೇಶದೊಳಗೆ



ಬೋಡೋ ಉಗ್ರರ ದುಷ್ಕೃತ್ಯಕ್ಕೆ ನೂರಾರು ಮುಗ್ಧರ ಬಲಿ

1996 ನೇ ವರ್ಷ ಉರುಳಲು ಇನ್ನೊಂದು ದಿನ ಇದೆ ಎನ್ನುವಾಗ ಇಡೀ ದೇಶದಲ್ಲಿ ಶೋಕದ ವಾತಾವರಣ ಮೂಡುವಂಥ ಘೋರ ದುರಂತವೊಂದು ಅಸ್ಸಾಮಿನಿಂದ ವರದಿಯಾಗಿದೆ.

ಆ ರಾಜ್ಯದ ಕೊಕ್ರಜಾರ್ ಜಿಲ್ಲೆಯ ಟೆಜಾಮುಖ್ ಎಂಬಲ್ಲಿ ರೈಲಿನಲ್ಲಿ ಬಾಂಬ್ ಸ್ಫೋಟಿಸಿ ಸಂಭವಿಸಿದ ಭೀಕರ ದುರ್ಘಟನೆಯಲ್ಲಿ ಮುನ್ನೂರಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ.

ಡಿಸೆಂಬರ್ 30 ರಂದು ಸಂಜೆ 7.15ರ ಸುಮಾರಿಗೆ ದೆಹಲಿಗೆ ಹೋಗುತ್ತಿದ್ದ ಬ್ರಹ್ಮಪುತ್ರ ಮೇಲ್ ಗಾಡಿ ಕೊಕ್ರಜಾರ್ ರೈಲ್ವೆ ನಿಲ್ದಾಣವನ್ನು ಬಿಟ್ಟು ಕೇವಲ ಒಂದು ನಿಮಿಷದಲ್ಲಿ ರೈಲಿನ ಒಂದು ಬೋಗಿಯಲ್ಲಿ ಬಲಿಷ್ಠ ಬಾಂಬೊಂದು ಸ್ಫೋಟಿಸಿತು.

ಪ್ರತ್ಯೇಕ ಬೋಡೋ ರಾಜ್ಯಕ್ಕಾಗಿ ಹಿಂಸಾತ್ಮಕ ಚಳುವಳಿ ನಡೆಸುತ್ತಿರುವ ಬೋಡೋ ಉಗ್ರಗಾಮಿಗಳು ಈ ಭಯಾನಕ ಕೃತ್ಯಕ್ಕೆ ಕಾರಣರಾಗಿದ್ದಾರೆ ಎಂದು ಶಂಕಿಸಲಾಗಿದೆ.

ಕೇವಲ ಒಂದು ದಿನದ ಹಿಂದೆಯಷ್ಟೆ ಅಂದರೆ ಡಿಸೆಂಬರ್ 29 ರಂದು ಬೋಡೋ ಉಗ್ರಗಾಮಿಗಳು ಅಸ್ಸಾಮಿನ ಭೂಮಿ ಗಾಂವ್ ಜಿಲ್ಲೆಯ ರಾಜೈದಬಿ ಎಂಬಲ್ಲಿ ಸೇತುವೆಯೊಂದನ್ನು ಸ್ಫೋಟಿಸಿದ್ದರಿಂದ ಏಳು ಜನರು ಸತ್ತಿದ್ದರು.

ಸೇತುವೆ ಸ್ಫೋಟದಿಂದಾಗಿ ಇಡೀ ಈಶಾನ್ಯ ಭಾರತ ದೇಶದ ಇತರ ಭಾಗದೊಂದಿಗಿನ ರಸ್ತೆ ಸಂಪರ್ಕವನ್ನು ಕಳೆದುಕೊಂಡಿತ್ತು.

ಬಾಂಬ್ ಸ್ಫೋಟಿಸಿ ದುರಂತ ಸಂಭವಿಸಿದ ಸ್ಥಳದಲ್ಲಿ ಎಲ್ಲಿ ನೋಡಿದಲ್ಲಿ ರಕ್ತ ಮತ್ತು ತುಂಡರಿಸಿದ ಕೈಕಾಲು-ದೇಹದ ಭಾಗಗಳು ಹರಡಿಕೊಂಡಿದ್ದರಿಂದ ಅಲ್ಲಿನ ದೃಶ್ಯ ಘೋರವಾಗಿತ್ತು.

ಪ್ರತ್ಯೇಕ ರಾಜ್ಯವೊಂದರ ಸ್ಥಾಪನೆಗೆ ಒತ್ತಾಯಿಸಿ ದೇಶದ ಏಕತೆಗೆ ಭಂಗ ತರುತ್ತಿರುವುದೇ ಅಲ್ಲದೆ ನೂರಾರು ಮುಗ್ಧ ಜನರ ಪ್ರಾಣವನ್ನು ಹರಣಮಾಡುತ್ತಿರುವ ಪ್ರತ್ಯೇಕತವಾದಿಗಳ ದುಷ್ಕೃತ್ಯ ಖಂಡನೀಯವಾಗಿದೆ. ಮುಗ್ಧಜನರನ್ನು ಕೊಲ್ಲುವುದರಿಂದ ತಮ್ಮ ಉದ್ದೇಶ ಸಾಧನೆ ಆಗದು ಎನ್ನುವುದನ್ನು ಪ್ರತ್ಯೇಕತಾವಾದಿಗಳು ತಿಳಿಯಬೇಕು

ಬಿಹಾರ್: ಕೊಲೆ ಪ್ರತಿಭಟಿಸಿ ಸಭೆ

ಬಡರೈತರ ಒಕ್ಕಲೆಬ್ಬಿಸುವುದನ್ನು ಹಾಗೂ ಕೃಷಿ ಕೂಲಿಗಾರರ ಸಂಘಟನೆಯ ಕಾರ್ಯಕರ್ತರೊಬ್ಬರ ಹತ್ಯೆಯನ್ನು ಪ್ರತಿಭಟಿಸಿ ಬಿಹಾರದ ಖರ್ಗಿಯಾ ಜಿಲ್ಲೆಯ ಹರ್ಡಿಯಾ ಗ್ರಾಮದಲ್ಲಿ ಡಿಸೆಂಬರ್ 14 ರಂದು ಬೃಹತ್ ಸಭೆ ನಡೆಯಿತು. ಸಿಪಿಐ(ಎಂ) ಈ ಸಭೆಯನ್ನು ವ್ಯವಸ್ಥೆಗೊಳಿಸಿತ್ತು.

ಭೂದಾನಿ ಜಮೀನು ಹಾಗೂ ಘೋಷಿಸಲಾಗಿರುವ ಹೆಚ್ಚುವರಿ ಜಮೀನಲ್ಲಿ ವಾಸವಿದ್ದು ಅದರ ಹಕ್ಕು ಪತ್ರಗಳನ್ನೂ ಪಡೆದಿರುವ ಬಡ ಜನರನ್ನು ಎಬ್ಬಿಸಲು ಭೂಮಾಲಿಕರ ಗೂಂಡಾಗಳು ಯತ್ನಿಸುತ್ತಿದ್ದಾರೆ. ಭೂಮಾಲಿಕರ ಹಾಗೂ ಗೂಂಡಾಗಳ ಆಕ್ರಮಣವನ್ನು ಗ್ರಾಮಸ್ಥರು ತೀವ್ರವಾಗಿ ಪ್ರತಿರೋಧಿಸುತ್ತಿದ್ದಾರೆ. ದುಷ್ಕರ್ಮಿಗಳು ಬಿಹಾರ ಪ್ರಾಂತ್ಯ ಕೃಷಿ ಕೂಲಿಕಾರರ ಸಂಘದ ಸದಸ್ಯ ಹಾಗೂ ಸಿಪಿಐ(ಎಂ) ಬೆಂಬಲಿಗ ಕಾಂ॥ ರಾಮ್ ಭಜನ್ ಪಾಸ್ವಾನ್ ಎಂಬುವರನ್ನು ಅಪಹರಿಸಿ ಕೊಂದು ಹಾಕಿದರು. ಈ ಹತ್ಯೆಯನ್ನು ಪ್ರತಿಭಟಿಸಿ ಸಭೆಯನ್ನು ಏರ್ಪಡಿಸಲಾಗಿತ್ತು.

ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಗಣೇಶ ಶಂಕರ ವಿದ್ಯಾರ್ಥಿ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೃಷ್ಣಕಾಂತ ಸಿಂಗ್, ಶಾಸಕ ಪಕ್ಷ ನಾಯಕ ರಾಮದೇವ ವರ್ಮ ಮತ್ತು ಕೃಷಿ ಕಾರ್ಮಿಕರ ಸಂಘದ ರಾಜ್ಯ ಕಾರ್ಯದರ್ಶಿ ರಾಮನಾಥ ಮೊದಲಾದವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಭೂಮಾಲಿಕ-ಕ್ರಿಮಿನಲ್‌ಗಳೊಂದಿಗೆ ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿ(ಎಸ್‌ಪಿ) ಸಹಿತ ಜಿಲ್ಲೆಯ ಆಡಳಿತ ವರ್ಗ ಶಾಮೀಲಾಗಿದೆ. ಪೋಲೀಸು ಯಾವುದೇ ಪ್ರಕರಣವನ್ನು ದಾಖಲಿಸಿಕೊಂಡಿಲ್ಲ, ಯಾರನ್ನೂ ಬಂಧಿಸಿಯೂ ಇಲ್ಲ.

ಮೃತ ರಾಮ ಭಜನ್ ಪಾಸ್ವಾನ್‌ರ ಸಂಬಂಧಿಗಳಿಗೆ ಒಂದು ಲಕ್ಷ ರೂ ಪರಿಹಾರ ನೀಡಬೇಕು, ಎಸ್.ಪಿ ಸಹಿತ ತಪ್ಪಿತಸ್ಥ ಅಧಿಕಾರಿಗಳನ್ನು ವರ್ಗಾಯಿಸಬೇಕು ಹಾಗೂ ಆರೋಪಿಗಳನ್ನು ಬಂಧಿಸಬೇಕು ಎಂದು ಸಿಪಿಐ(ಎಂ) ಬಿಹಾರ ರಾಜ್ಯ ಸಮಿತಿ ಒತ್ತಾಯಿಸಿದೆ.

ತ್ರಿಪುರಾ: ಹತ್ಯಾಕಾಂಡದ ವಿರುದ್ಧ ಪ್ರತಿಭಟನೆಯ ಅಲೆ

ತ್ರಿಪುರಾದ ಹಲವು ಭಾಗಗಳಲ್ಲಿ ಡಿಸೆಂಬರ್ 14 ರಂದು ಶಾಂತಿಪ್ರಿಯ ಜನಗಳು ಡಿ.13 ರಂದು ಎನ್‌ಎಲ್‌ಎಫ್‌ಟಿ ದುರುಳರು ಕಲಾನ್‌ಪುರದಲ್ಲಿ 24 ಜನರನ್ನು ಘೋರವಾಗಿ ಕೊಂದು ಹಾಕಿದ್ದನ್ನು ಪ್ರತಿಭಟಿಸಿದರು. ಈ ಹತ್ಯಾಕಾಂಡವನ್ನು ಪ್ರತಿಭಟಿಸಲು ಎಡರಂಗ ನೀಡಿದ ಕರೆಯ ಮೇರೆಗೆ ರಾಜ್ಯ ಬಂದ್ ಕೂಡ ನಡೆಯಿತು.

ಹತ್ಯಾಕಾಂಡ ನಡೆದ ಖೊವೈ ಉಪವಿಭಾಗದಲ್ಲಿ ದುರಂತ ಸಂಭವಿಸಿದ ದಿನವೇ ಸಿಪಿಐ(ಎಂ) ಕರೆಯ ಮೇರೆಗೆ ಪೂರ್ಣ ಬಂದ್ ಆಚರಿಸಲಾಯಿತು. ಎಡರಂಗದ ಕರೆಯನ್ವಯ ಡಿ.14 ರಂದು ನಡೆದ 12 ಗಂಟೆಗಳ ತ್ರಿಪುರಾ ಬಂದ್ ಬುಡಕಟ್ಟು ಮತ್ತು ಬುಡಕಟ್ಟೇತರ ಜನಗಳ ಮಧ್ಯೆ ದ್ವೇಷ ಹುಟ್ಟಿಸಿ ಎಡರಂಗ ಸರಕಾರಕ್ಕೆ ಮಸಿಬಳಿಯುವ ದುಷ್ಕರ್ಮಿಗಳ ಕ್ರೂರ ಆಟಕ್ಕೆ ನೀಡಿದ ಸಮರ್ಥ ಉತ್ತರವಾದಂತಿತ್ತು.

ಈ ಹತ್ಯಾಕಾಂಡ ಜನರಿಂದ ತಿರಸ್ಕೃತವಾದ ಕಾಂಗ್ರೆಸ್(ಐ), ಟಿಯುಜೆಎಸ್, ಟಿಎಸ್‌ಪಿ ಮುಂತಾದ ಪಕ್ಷ - ಸಂಘಟನೆಗಳು ಜನಪ್ರಿಯ ಎಡರಂಗ ಸರಕಾರದ ವಿರುದ್ಧ ನಡೆಸುತ್ತಿರುವ ಪಿತೂರಿಯ ಭಾಗವಾಗಿದೆ. ಇದು ಒಂದೆಡೆಯಾದರೆ, ಇನ್ನೊಂದೆಡೆ ಸಿಐಎ ಮತ್ತು ಐಎಸ್‌ಐನಂಥ ಸಾಮ್ರಾಜ್ಯಶಾಹಿ ಹಾಗೂ ಅವುಗಳ ಕೈಗೊಂಬೆ ದೇಶಗಳ ಬೇಹುಗಾರಿಕೆ ಸಂಸ್ಥೆಗಳು ದೇಶದ ಈಶಾನ್ಯ ಭಾಗದಲ್ಲಿ ಎಡಶಕ್ತಿಗಳ ವಿರುದ್ಧ ನಡೆಸುತ್ತಿರುವ ಚಟುವಟಿಕೆಗಳನ್ನು ಈ ಪ್ರಕರಣ ಬಹಿರಂಗಗೊಳಿಸಿದೆ.

ರಾಜ್ಯ ವಿಧಾನಸಭೆ ಚುನಾವಣೆಗೆ ಇನ್ನು ಕೇವಲ ಒಂದು ವರ್ಷಕ್ಕಿಂತ ಸ್ವಲ್ಪ ಹೆಚ್ಚು ಅವಧಿಯಷ್ಟು ಬಾಕಿಯಿದೆ. 1990 ರ ಚುನಾವಣಾ ಸಂದರ್ಭದಲ್ಲಿ ಟಿಎಸ್‌ವಿ ಸರಣಿ ಹತ್ಯಾಕಾಂಡಗಳನ್ನು ನಡೆಸಿತ್ತು. ಮತ್ತು ಈಗ ಜನರಿಂದ ತಿರಸ್ಕೃತವಾದ ಈ ಉಗ್ರಗಾಮಿ ಸಂಘಟನೆಗಳು ಮತ್ತದೇ ತಂತ್ರಕ್ಕೆ ಶರಣಾಗುತ್ತಿರುವಂತೆ ಕಾಣುತ್ತದೆ. ಆದರೆ ರಾಜ್ಯದ ಜನರು ಪ್ರತ್ಯೇಕವಾದಿಗಳ ಹಾಗೂ ಸಾಮ್ರಾಜ್ಯಶಾಹಿಗಳ ಪಿತೂರಿಯನ್ನು ಸೋಲಿಸುವರು ಎಂದು ಎಡಪಂಥೀಯ ಸಂಘಟನೆಗಳು ಆಶಯ ವ್ಯಕ್ತಪಡಿಸಿದೆ.

ತಪ್ಪಿಸಬಹುದಾಗಿದ್ದ ದುರಂತ

ಪಶ್ಚಿಮ ತ್ರಿಪುರಾ ಕಲ್ಯಾಣಪುರದಲ್ಲಿ ಡಿಸೆಂಬರ್ 13 ರಂದು ಸಂಭವಿಸಿದ ಘೋರ ಹತ್ಯಾಕಾಂಡವನ್ನು ತಪ್ಪಿಸಬಹುದಾಗಿತ್ತು ಎಂದು ಹೃದಯ ವಿದ್ರಾವಕ ದೃಶ್ಯದ ಸ್ಥಳಕ್ಕೆ ಭೇಟಿ ನೀಡಿದ್ದ ಸಿಪಿಐ(ಎಂ) ಸಂಸತ್ ಸದಸ್ಯರ ತಂಡ ಹೇಳಿದೆ.

ರಾಜ್ಯಕ್ಕೆ ಹೆಚ್ಚಿನ ಕೇಂದ್ರೀಯ ಪಡೆಗಳನ್ನು ಕಳಿಸಬೇಕೆಂದು ರಾಜ್ಯದ ಎಡರಂಗ ಸರಕಾರ ಕಳೆದ ಮೂರುವರೆ ವರ್ಷಗಳಿಂದ ಮಾಡುತ್ತಿದ್ದ ಮನವಿಗೆ ಹಿಂದಿನ ನರಸಿಂಹರಾವ್ ಸರಕಾರ ಕಿವಿಗೊಟ್ಟಿದಿದ್ದರೆ ಅಥವಾ ಆರು ತಿಂಗಳ ಹಿಂದೆ ಅಧಿಕಾರಕ್ಕೆ ಬಂದ ಸಂಯುಕ್ತ ರಂಗ ಸರಕಾರ ಈ ವಿಷಯಕ್ಕೆ ಆದ್ಯತೆ ಕೊಟ್ಟಿದ್ದಿದ್ದರೆ ಈ ಹೇಯ ಕೃತ್ಯ ನಡೆಯುತ್ತಿರಲಿಲ್ಲ ಎಂದು ಸಂದೀಯ ತಂಡ ಅಭಿಪ್ರಾಯ ಪಟ್ಟಿದೆ.

ಸಿಪಿಐ(ಎಂ) ಸಂಸತ್ ಸದಸ್ಯರಾದ ಅನಿಲ್ ಬಸು, ಬ್ರತಿನ್ ಸೇನ್ ಗುಪ್ತಾ, ಬಾದಲ್ ಚೌಧರಿ ಮತ್ತು ಬಜುಬಿನ ರಿಯಾಂಗ್ ಸಶಸ್ತ್ರ ಉಗ್ರಗಾಮಿಗಳು ನಡೆಸಿದ ಹತ್ಯಾಕಾಂಡದ 'ಸುದ್ದಿ ತಿಳಿಯುತ್ತಲೇ ಪರಿಸ್ಥಿತಿಯ ಅಧ್ಯಯನಕ್ಕಾಗಿ ಸ್ಥಳಕ್ಕೆ ಧಾವಿಸಿದ್ದರು.

ಅವರು ದುಷ್ಕರ್ಮಿಗಳಿಗೆ ಬಲಿಯಾದವರ ಸಂಬಂಧಿಗಳು ಮತ್ತು ಗಾಯಗೊಂಡವರನ್ನು ಭೇಟಿಯಾಗಿ ಸಂತೈಸಿದರು. ಅವರು ರಾಜ್ಯದ ಮುಖ್ಯಮಂತ್ರಿ ಮತ್ತು ಗೃಹ ಸಚಿವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಹಲವು ದಿನ ಪೂರ್ಣಿಯಾ ಬಂದ್

ಲಾಲೂ ಪ್ರಸಾದ್ ಯಾದವ್ ನೇತೃತ್ವದ ಬಿಹಾರ ಸರಕಾರದಡಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿರುವುದಕ್ಕೆ ಸಾಕ್ಷಿಯಾಗಿ ಇನ್ನೊಂದು ಘಟನೆ ಇಲ್ಲಿದೆ.

ರಾಜ್ಯದ ಪೂರ್ಣಿಯಾ ಜಿಲ್ಲೆಯಲ್ಲಿ ಮೂರು ವ್ಯಾಪಾರಿಗಳನ್ನು ಕೊಂದು ಹಾಕಿದ ಪ್ರಕರಣವನ್ನು ಪ್ರತಿಭಟಿಸಿ ಡಿಸೆಂಬರ್ 22 ರಿಂದ ಅನಿರ್ದಿಷ್ಟ ಅವಧಿಯ ಜಿಲ್ಲಾ ಬಂದ್ ನಡೆಯುತ್ತಿದ್ದು ಬಂದ್ ಬೆಂಬಲಿಗರ ಮೇಲೆ ನಡೆದ ಪೋಲೀಸ್ ಗೋಲೀಬಾರಿನಲ್ಲಿ ಇಬ್ಬರು ಮೃತಪಟ್ಟರೂ ಧೃತಿಗೆಡದೆ ಹೋರಾಟ ಮುಂದುವರಿಯುತ್ತಿದೆ.

ಸಿಪಿಐ(ಎಂ) ಶಾಸಕ ಅಜಿತ್ ಸರ್ಕಾರ್ ವಿಧಾನಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸಿದರು. ಪರಿಸ್ಥಿತಿ ಇನ್ನಷ್ಟು ಹದಗೆಡಬಹುದು ಎಂದು ಅವರು ಎಚ್ಚರಿಕೆ ನೀಡಿದರು.

ಸಮಾಜವಾದಿ ಪಕ್ಷದ ಸಂಸತ್ ಸದಸ್ಯ ರಾಜೇಶ್ ರಂಜನ್ ಆಲಿಯಾಸ್ ಪಪ್ಪುಯಾದವ್ ಬೆಂಬಲಿಗರು ವರ್ತಕರ ಹತ್ಯೆ ಹಾಗೂ ಪ್ರಕರಣದ ಹಿಂದೆ ಇದ್ದಾರೆ. ಪ್ರತಿಭಟನೆ ಚಳುವಳಿಯನ್ನು ಬುಡಮೇಲು ಮಾಡಲೂ ಇವರು ಪ್ರಯತ್ನಿಸಿದರು.

ಕಳೆದ ಮೂರು ತಿಂಗಳಿಂದ ಪೂರ್ಣಿಯಾ ಜಿಲ್ಲೆಯಲ್ಲಿ ಕಾನೂನು ವ್ಯವಸ್ಥೆಯನ್ನು ಕಾಪಾಡಲು ಹಾಗೂ ಜನರಲ್ಲಿ ಸುರಕ್ಷತೆಯ ಭಾವನೆಯನ್ನು ಮೂಡಿಸಲು ಕ್ರಮ ಕೈಗೊಳ್ಳುವಂತೆ ಜನರು ಒತ್ತಾಯಿಸುತ್ತಿದ್ದಾರೆ.

ಪೋಲೀಸರ ಅತಿರೇಕದ ವರ್ತನೆಗೆ ಖಂಡನೆ

ಮಳವಳ್ಳಿ: ಮಳವಳ್ಳಿ ತಾಲೂಕು ಕಾಗೇಪುರ ಗ್ರಾಮದಲ್ಲಿ ಕ್ಷುಲ್ಲಕ ಕಾರಣವನ್ನು ಮುಂದೊಡ್ಡಿ ಯುವಜನ ಕಾರ್ಯಕರ್ತರು ಮತ್ತು ಗ್ರಾಮಸ್ಥರ ಮೇಲೆ ಏಕಾಏಕಿ ಲಾಠಿ ಛಾರ್ಜ್‌ಗೆ ಆಜ್ಞೆ ಮಾಡಿ ಗಲಭೆಗೆ ಪ್ರಚೋದಿಸಿದ ಪೋಲೀಸರ ಕ್ರಮದಿಂದ ಉಂಟಾದ ಪರಿಸ್ಥಿತಿಯನ್ನು ತಿಳಿಗೊಳಿಸಲು ಜನರನ್ನು ಶಾಂತಗೊಳಿಸಲು ಶ್ರಮಿಸಿದ ಡಿವೈಎಫ್‌ಐ ಕಾರ್ಯಕರ್ತರು ಮತ್ತು ಗ್ರಾಮಸ್ಥರ ಮೇಲೆ ಮೊಕದ್ದಮೆ ಹಾಕಿ ದಬ್ಬಾಳಿಕೆ ಹಾಗೂ ಕಿರುಕುಳವನ್ನು ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ(ಡಿವೈಎಫ್‌ಐ), ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್‌ಎಫ್‌ಐ) ಹಾಗೂ ಕರ್ನಾಟಕ ಪ್ರಾಂತ ರೈತ ಸಂಘಗಳು ಖಂಡಿಸಿ, ಇದನ್ನು ತಕ್ಷಣ ನಿಲ್ಲಿಸಬೇಕೆಂದು ಆಗ್ರಹಪಡಿಸಿವೆ.

ಹಿನ್ನೆಲೆ: ಊರಿನಲ್ಲಿ ಬಸ್ ನಿಲ್ಲಿಸದೇ ಇರುವಾಗ ಯಾರೋ ಒಬ್ಬರು ಕಲ್ಲು ತೂರಿದರೆಂಬ ಕಾರಣ ಮುಂದೊಡ್ಡಿ ಸಮಸ್ಯೆ ಬಗೆಹರಿಸಲು ಮುಂದಾದ ಡಿವೈಎಫ್‌ಐನ ಘಟಕದ ಉಪಾಧ್ಯಕ್ಷ ಫಯಾಜ್‌ನನ್ನು ಡಿ.27 ರಂದು ನಾಗಲಿಂಗೇಶ್ವರ ಬಸ್ ಸಿಬ್ಬಂದಿ ಅಪಹರಣ ಮಾಡಿದ್ದು ಅಪಹರಣಗೊಂಡ ಫಯಾಜ್‌ರನ್ನು ಕೂಡಲೇ ಮನೆಗೆ ಕಳುಹಿಸಿಕೊಡಬೇಕೆಂದು ಆಗ್ರಹಿಸಿ 28 ರಂದು ಬಸ್ ನಿಲ್ಲಿಸಿ ಶಾಂತ ರೀತಿಯಿಂದ ಚಳುವಳಿ ಮಾಡುತ್ತಿದ್ದಾಗ ಆ ಬಗ್ಗೆ ಸಹಕಾರಕ್ಕಾಗಿ ಪೋಲೀಸರು ಮಾಡಿದ ಮನವಿಯ ಮೇರೆಗೆ ಇನ್ನೇನು ಜನರು ಸತ್ಯಾಗ್ರಹ ಹಿಂತೆಗೆದುಕೊಳ್ಳುವ ಸ್ಥಿತಿಯಲ್ಲಿದ್ದಾಗ ಅಲ್ಲಿಗೆ ಆಗಮಿಸಿದ ಡಿವೈಎಸ್‌ಪಿ ಬಿ.ಎಂ.ಉತ್ತಯ್ಯ ಪ್ರಕರಣದ ಹಿಂದೆ ಮುಂದೆ ಗೊತ್ತಿಲ್ಲದೆ ಲಾಠಿ ಛಾರ್ಜ್‌ಗೆ ಆಜ್ಞೆ ಮಾಡಿ ಗಲಭೆಗೆ ಪ್ರಚೋದಿಸಿದರು.



ಈ ಹಿಂದೆ ಕಾಳಮುದ್ದನದೊಡ್ಡಿ, ಕರಡಕೆರೆ, ಶೆಟ್ಟಹಳ್ಳಿ, ಹನುಮಂತನಗರ ಮೊದಲಾದ ಗ್ರಾಮಗಳಲ್ಲಿ ಸಾವಿರಾರು ಜನರ ಮೇಲೆ ಕೇಸು ಹಾಕಿದ ದಬ್ಬಾಳಿಕೆ ನಡೆಸಿದ ವ್ಯಕ್ತಿಯೇ ಈ ಡಿವೈಎಸ್‌ಪಿ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಪರಿಸ್ಥಿತಿಯನ್ನು ತಿಳಿಗೊಳಿಸಲು ಶ್ರಮಿಸಿದವರ ಮೇಲೆ ಅನಾವಶ್ಯಕ ಸುಳ್ಳು ಮೊಕದ್ದಮೆ ಹೂಡಿ ಆ ಮೂಲಕ ಭಯ ಸೃಷ್ಟಿಸಲು ಕುತಂತ್ರ ನಡೆಸಿದ್ದಾರೆ. ಈ ಕಿರುಕುಳವನ್ನು ನಿಲ್ಲಿಸಿ, ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಪೋಲೀಸ್ ವರಿಷ್ಠಾಧಿಕಾರಿಗಳನ್ನು ಆಗ್ರಹಿಸಿ, ಕಿರುಕುಳ ಮುಂದುವರಿದರೆ ರಾಜ್ಯಾದ್ಯಂತ ಚಳುವಳಿ ನಡೆಸಬೇಕಾಗಿದೀತು ಎಂದು ಎಚ್ಚರಿಸಿವೆ.

ಫಯಾಜ್ ಅಪಹರಣ ಪ್ರಕರಣದಲ್ಲಿ ಇಬ್ಬರು ಪೋಲೀಸ್ ಪೇದೆಗಳು ಭಾಗಿಯಾಗಿದ್ದು ಅದರ ಬಗ್ಗೆ ಇಲಾಖೆ ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೆಯೇ ದೌರ್ಜನ್ಯ ಎಸಗಿದ ಸರ್ಕಲ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್‌ಗಳನ್ನು ವರ್ಗಾಯಿಸ ಬೇಕೆಂದು :ಆಗ್ರಹಿಸಿದೆ.

ಜೀವನಾವಶಕ ವಸ್ತುಗಳಿಗೆ ಆಗ್ರಹಿಸಿ :ಮೆರವಣಿಗೆ

ಮಳವಳ್ಳಿ: ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ತಳಗವಾದಿ, ಕಾಗೇಪುರ, ಹುಲ್ಲೆಗಾಲ ಹಾಗೂ ಮಳವಳ್ಳಿಯ ಬಸವಲಿಂಗಪ್ಪ ನಗರದ ಬಡಜನರು ಜೀವನಾವಶ್ಯ ವಸ್ತುಗಳ ಪೂರೈಕೆಗಾಗಿ ಹಾಗೂ ಇನ್ನಿತರೆ ಅವಶ್ಯಕ ವಸ್ತುಗಳಿಗಾಗಿ;ಆಗ್ರಹಿಸಿ ಡಿ.20 ರಂದು ಮಳವಳ್ಳಿಯ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ತಾಲೂಕಿನ ಗಮನ ಸೆಳೆಯಲು ಮೆರವಣಿಗೆ ನಡೆಸಿದರು.

ಕೇಂದ್ರ ಸರಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಡಿಯಲ್ಲಿ ಬರುವ 14 ಜೀವನಾವಶ್ಯಕ ವಸ್ತುಗಳನ್ನು ಒದಗಿಸಿ ಹಾಗೂ ಅದನ್ನು ಅರ್ಧಬೆಲೆಗೆ ವಿತರಿಸಬೇಕು, ಪಡಿತರ ವಸ್ತುಗಳ ಬೆಲೆ ಮತ್ತು ತೂಕದಲ್ಲಿ ಮೋಸ ನಡೆಯುತ್ತಿರುವುದನ್ನು ಕಟ್ಟುನಿಟ್ಟಾಗಿ ತಡೆಯಬೇಕು. ಭಾಗ್ಯಜ್ಯೋತಿ, ಸಾರ್ವಜನಿಕ ಸಶಾನಗಳಿಗೆ ಒತ್ತಾಯಿಸಿ, ಪ್ರತಿ ಪಡಿತರ ಚೀಟಿಗೆ ವಿತರಿಸುತ್ತಿರುವ ಆಹಾರ ಧಾನ್ಯಗಳ ಪ್ರಮಾಣವನ್ನು ದ್ವಿಗುಣಗೊಳಿಸಬೇಕು, ಕೂಲಿಕಾರರ ಮೇಲೆ ನಡೆಯುವ ದೌರ್ಜನ್ಯಗಳನ್ನು ತಡೆಯಬೇಕು. ಎಂಬಿತ್ಯಾದಿ ಬೇಡಿಕೆಗಳನ್ನಿಟ್ಟು ನೂರಾರು ಕೃಷಿ ಕಾರ್ಮಿಕರು ಪಟ್ಟಣ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಇವರ ಮುಂದಾಳತ್ವವನ್ನು ನಿಂಗಣ್ಣ, ನಾಗೇಗೌಡ, ಜಯಶೇಖರಪ್ಪ, ಮರಿಗೌಡ, ಬೋರಯ್ಯ, ಎಸ್.ಶಿವಕುಮಾರ್, ಮರಿಶೆಟ್ಟಿ ಹಾಗೂ ಮಳವಳ್ಳಿ ಪುರಸಭೆಯ ಸದಸ್ಯರಾದ ಜಯಲಕ್ಷ್ಮಮ್ಮ ವಹಿಸಿದ್ದರು.

ತಾಲೂಕು ಕಛೇರಿಯ ಮುಂದೆ ನಡೆದ ಸಭೆಯನ್ನುದ್ದೇಶಿಸಿ ತಾಲೂಕು ಸಿಪಿಎಂ ಕಾರ್ಯದರ್ಶಿ ಜಿ.ರಾಮಕೃಷ್ಣ, ಜಯಶೇಖರಪ್ಪ ಮತ್ತು ಹನುಮಂತು ಮಾತನಾಡಿದರು.

1996ರ ಜಗತ್ತು - ಒಂದು ಹಿನ್ನೋಟ

ಸಾಮ್ರಾಜ್ಯಶಾಹಿಗಳ ಆಟ ನಡೆಯುತ್ತಿಲ್ಲ......ಆದರೂ

ಅಮೆರಿಕನ್ ಸಾಮ್ರಾಜ್ಯಶಾಹಿ 1996 ರಲ್ಲಿ ತನ್ನ ಅಧಿಪತ್ಯಕ್ಕೆ ತೀವ್ರ ಸವಾಲು ಎದುರಿಸಿತು. - ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿಯ ಆಯ್ಕೆಯಿಂದ ಹಿಡಿದು, CTBT ಒಪ್ಪಂದ, APEC ಮತ್ತು WTO ಸಮ್ಮೇಳನದ ಎಲ್ಲಡೆ. ಆದರೂ ಹೆಚ್ಚು ಕಡಿಮೆ ಖಡಾಖಂಡಿತ ಸೋಲನ್ನು ಅದಕ್ಕೆ ಗೆಲುವಾಗಿ ಪರಿವರ್ತಿಸಲು ಸಾಧ್ಯವಾಯಿತು. ಸಾಮ್ರಾಜ್ಯಶಾಹಿ ವಿರೋಧಿ ಏಕತೆ, ಧೃಢತೆಯ ಅಭಾವದ ಪ್ರಯೋಜನ ಪಡೆದು, ಸಾಮ್ರಾಜ್ಯಶಾಹಿ ಜಗತ್ತಿನಲ್ಲಿ ಕಾರ್ಮಿಕರು ರಾಜಕೀಯ ಅಂಗಳಕ್ಕೆ ಇಳಿಯಲಾರಂಭಿಸಿದ್ದಾರೆ. ಎಲ್ಲೆಡೆ ಹಿಂದೆ ನಿಸ್ತೇಜವಾಗಿದ್ದ ಕಾರ್ಮಿಕ ವರ್ಗ ಫ್ರೆಂಚ್, ಜರ್ಮನ್, ಬ್ರಿಟಿಷ್ ಹಾಗೂ ಅಮೆರಿಕಾದ ಭಾರಿ ಟ್ರೇಡ್ ಯೂನಿಯನ್‌ಗಳು ಸಕ್ರಿಯವಾಗಲಾರಂಭಿಸಿವೆ. ಭಾರಿ ಪ್ರತಿಭಟನೆ ಆರಂಭಿಸಿವೆ.

ಮೂರನೇ ಜಗತ್ತಿನ ಹಲವೆಡೆ ಅರಾಜಕತೆ, ಆಂತರಿಕ ಕಲಹ ಮುಂದುವರಿದಿದೆ. ಮಾಜಿ ಯುಗೋಸ್ಲಾವಿಯಾ, ಆಫ್ರಿಕಾದ ಝೈರೆ-ಬುರಂಡಿ, ಅರೇಬಿಯನ್ ಕೊಲ್ಲಿ ಪ್ರದೇಶ, ಅಫಘಾನಿಸ್ತಾನ, ಪಾಕಿಸ್ತಾನ, ಶ್ರೀಲಂಕಾದಲ್ಲಿ ತೀವ್ರ ಆತಂಕಕಾರಿ ಪರಿಸ್ಥಿತಿ ಮುಂದುವರಿದಿದೆ. ಎಲ್ಲೂ 1996 ಆಶಾಜನಕ ಹೊಂಗಿರಣ ಕಾಣಿಸಲಿಲ್ಲ.

ಮಾಜಿ ಸಮಾಜವಾದಿ ಜಗತ್ತಿನಲ್ಲಿ ರಶ್ಯಾದಲ್ಲಿ ಅಧ್ಯಕ್ಷೀಯ ಚುನಾವಣೆಯಲ್ಲಿ ಎಡ-ದೇಶಪ್ರೇಮಿ ಅಭ್ಯರ್ಥಿ ಝುಗನೋವ್ ತೀವ್ರ ಸವಾಲು ಒಡ್ಡಿ, ಎರಡನೇ ಸುತ್ತಿಗೆ ಯೆಲ್ಟ್‌ಸಿನ್‌ನ್ನು ಇಳಿಸಿದರೂ, ಕೊನೆಗೂ ಯೆಲ್ಟ್‌ಸಿನ್ ಯೇನಕೇನ ಪ್ರಕಾರೇಣ ಗೆದ್ದರು. ಬಲ್ಗೇರಿಯಾ ಹಾಗೂ ರುಮೇನಿಯಾಗಳಲ್ಲಿ ಸರಕಾರದಲ್ಲಿದ್ದ ಮಾಜಿ ಕಮ್ಯುನಿಸ್ಟರು ಅಧಿಕಾರ ಕಳೆದುಕೊಂಡಿದ್ದಾರೆ. ಮಾಜಿ ಸೋವಿಯತ್ ಗಣರಾಜ್ಯಗಳು ಪರಸ್ಪರ ಸಹಕಾರ, ಸಡಿಲವಾದ ಒಕ್ಕೂಟದತ್ತ ಒಲವು ತೋರಿಸಿದ್ದರೂ, ನಿರ್ದಿಷ್ಟವಾಗಿ 1996 ರಲ್ಲಿ ಪ್ರಗತಿ ಏನೂ ಕಾಣಲಿಲ್ಲ .

ಸಮಾಜವಾದಿ ಜಗತ್ತಿನಲ್ಲಿ ಮಾತ್ರ ಚೀನಾ ತನ್ನ ತೀವ್ರ ಆರ್ಥಿಕ ಮುನ್ನಡೆಯನ್ನು ಮುಂದುವರಿಸಿದೆ. ವಿಯೆಟ್ನಾಂ, ಕ್ಯೂಬಾ, ಉತ್ತರ ಕೊರಿಯಾಗಳು ತಮ್ಮ ಸಮಾಜವಾದಿ ಪ್ರಗತಿಯನ್ನು ತೀವ್ರ ಸವಾಲು, ಅಡೆತಡೆಗಳೆದುರೂ ಮುಂದುವರಿಸಿವೆ. ಇದು ಮಾತ್ರ 1996 ರ ಆಶಾಜನಕ ಅಂಶ.

ಆದರೆ ಸಾಮ್ರಾಜ್ಯಶಾಹಿ ಅಧಿಪತ್ಯದ ವಿರುದ್ಧ ಗರಿಗೆದರಿಕೊಳ್ಳುತ್ತಿರುವ ಮೂರನೇ ಜಗತ್ತಿನ ದೇಶಗಳ ಪ್ರತಿರೋಧ, ಕಾರ್ಮಿಕ ವರ್ಗದ ತೀವ್ರ ಹೋರಾಟಗಳು, 1997ರಲ್ಲಿ ಪರಿಣಾಮಕಾರಿಯಾಗಲಾರಂಭಿಸಬಹುದೆಂದು ಆಶಿಸಬಹುದು.

1996ರ ಅಂತರ್‍ರಾಷ್ಟ್ರೀಯ ವಿದ್ಯಮಾನಗಳ ಕೆಲವು ಮೈಲಿಗಲ್ಲುಗಳು

ಅಮೆರಿಕನ್ ಸಾಮ್ರಾಜ್ಯಶಾಹಿ ಅಧಿಪತ್ಯಕ್ಕೆ ಸವಾಲು

❑ ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಘಾಲಿ ಹಾಗೂ ಅಮೆರಿಕನ್ ರಾಯಭಾರಿ ನಡುವೆ ಚಕಮಕಿ(ಜನವರಿ)

❑ ಕ್ಯೂಬಾದಲ್ಲಿ ಬುಡಮೇಲು ಕೃತ್ಯಗಳಿಗಾಗಿ ತೆರಳುತ್ತಿದ್ದ ಎರಡು ಅಮೆರಿಕನ್ ವಿಮಾನಗಳನ್ನು ಹೊಡೆದುರುಳಿಸಿದ್ದಕ್ಕೆ ಅಮೆರಿಕದ ಬೊಬ್ಬೆ.(ಮಾರ್ಚ್)

❑ ಕ್ಯೂಬಾದ ವಿರುದ್ಧ ದಿಗ್ಬಂಧನ ಬಿಗಿಗೊಳಿಸುವ, ಕ್ಯೂಬಾದಲ್ಲಿ ಬೇರೆ ದೇಶದಲ್ಲಿ ವಾಣಿಜ್ಯದಲ್ಲಿ ತೊಡಗುವ ಕಂಪನಿಗಳ ಮೇಲೆ ಕ್ರಮ ಕೈಗೊಳ್ಳುವ ಹೆಲ್ಮ್ಸ್-ಬರ್ಟನ್ ಕಾನೂನು ಪಾಸು. ಅಂತರ್‍ರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸುವ ಈ 'ಕಾನೂನಿ'ಗೆ ಯುರೋಪಿಯನ್ ಒಕ್ಕೂಟ, ಕೆನಡಾಗಳ ಸವಾಲು(ಏ.-ಮೇ)

❑ ವಿಶ್ವಸಂಸ್ಥೆ ಬಗೆಗೆ ಅಮೆರಿಕದ ಅಧ್ಯಕ್ಷ ಕ್ಲಿಂಟನ್ ಹಾಗೂ ಸೆನೆಟ್‌ನ ಧೋರಣೆ ವಿರುದ್ಧ ಘಾಲಿ ತೀವ್ರ ಟೀಕೆ.(ಜೂ.)

❑ ಅಮೆರಿಕದ ಜತೆ ಮಿಲಿಟರಿ ಕವಾಯತಿಗೆ ಮೆಕ್ಸಿಕನ್ ನಿರಾಕರಣೆ.

❑ ಹಲವಾರು ಮೂರನೇ ಜಗತ್ತಿನ ದೇಶಗಳೊಂದಿಗೆ ರಫ್ತಿನ ಬಗ್ಗೆ ಅಮೆರಿಕದ ವಾಣಿಜ್ಯ ಯುದ್ಧ. ಕೋಸ್ಟಾರಿಕರ ಜತೆ ಚಡ್ಡಿ, ರಶ್ಯಾದ ಜತೆ ಕೋಳಿ ಮಾಂಸ, ಎಲ್‌ಸಾಲ್ವಡೋರ್‌ನ ಸ್ಕರ್ಟ್ ರಫ್ತಿನ ಬಗ್ಗೆ WTO ಒಪ್ಪಂದಕ್ಕೆ ವಿರೋಧವಾದ ನಿರ್ಬಂಧಗಳ ಬಗ್ಗೆ ವಿವಾದ.

❑ ಜಿನೇವಾದಲ್ಲಿ CTBT ಒಪ್ಪಂದ ಭಾರತದ ವಿಟೋದಿಂದ ವಿಫಲ. ಆದರೆ ಅದನ್ನೇ ವಿಶ್ವಸಂಸ್ಥೆಯಲ್ಲಿ ಆಸ್ಟ್ರೇಲಿಯಾ ಮಂಡಿಸಿ ಬಹುಮತದಿಂದ ಮಂಜೂರು. ಆದರೂ ಸಹಿ ಹಾಕದಿರಲು ಭಾರತದ ದೃಢ ನಿಲುವು.

❑ ಸೌದಿ ಅರೇಬಿಯಾದಲ್ಲಿ ಅಮೆರಿಕನ್ ಸೇನಾ ನೆಲೆಗಳ ಮೇಲೆ ಇಸ್ಲಾಮಿಕ್ ತೀವ್ರವಾದಿಗಳಿಂದ ಬಾಂಬ್ ಧಾಳಿ. ಹರಾರೆಯಲ್ಲಿ ನಡೆದ ಗುಂಪು-15 ಸಮ್ಮೇಳನದಲ್ಲಿ WTO ಸಮ್ಮೇಳನದಲ್ಲಿ ವಾಣಿಜ್ಯೇತರ(ಕಾರ್ಮಿಕ ಕಲ್ಯಾಣ ಮಾನಕಗಳು, ಬಂಡವಾಳ ಹೂಡಿಕೆಗೆ ನಿರ್ಬಂಧ ಇತ್ಯಾದಿ) ವಿಷಯಗಳನ್ನು ಎತ್ತುವುದರ ವಿರುದ್ಧ ಪ್ರಬಲ ಐಕ್ಯ ಪ್ರತಿರೋಧಕ್ಕೆ ನಿರ್ಧಾರ.

❑ ಅಮರಿಕದ ಅಟ್ಲಾಂಟದಲ್ಲಿ ನಡೆದ ಶತಮಾನದ ಒಲಿಂಪಿಕ್ಸ್ ಅರಾಜಕತೆ, ವಾಣಿಜ್ಯೀಕರಣಕ್ಕೆ ಕುಖ್ಯಾತವಾಯಿತು. ಅಟ್ಲಾಂಟ ಒಲಿಂಪಿಕ್ಸ್ ಕ್ರೀಡೆಗಳಿಗೆ ಕೊಕಾ ಕೋಲಾಪಿಕ್ಸ್ ಎಂಬ ಅಡ್ಡ ಹೆಸರು ಶಾಶ್ವತವಾಯಿತು.

❑ ಜಪಾನಿ-ಮಿಲಿಟರಿ ಒಪ್ಪಂದದ ಬಗ್ಗೆ ಜಪಾನಿನಲ್ಲಿ ತೀವ್ರ ಪ್ರತಿಭಟನೆ. ಒಕಿನಾವದಿಂದ-ಹಿರೋಶಿಮಾದವರೆಗೆ ಜಾಥಾ.

❑ ಉತ್ತರ ಇರಾಕ್ ಕುರ್ದಿಶ್ ಪ್ರದೇಶದಲ್ಲಿ ಎರಡು ಕುರ್ದಿಶ್ ಬಣಗಳ ನಡುವೆ ಆಂತರಿಕ ಕಲಹದಲ್ಲಿ , ಅಧ್ಯಕ್ಷ ಸದ್ದಾಂರ ಪಡೆಗಳು ಒಂದು ಬಣಕ್ಕೆ ಬೆಂಬಲ ನೀಡಿದ್ದಕ್ಕೆ, ಇರಾಕ್ ಮೇಲೆ ಅಮೆರಿಕದಿಂದ ಬಾಂಬ್ ಧಾಳಿ.

❑ ಸದ್ದಾಂ ಹುಸೇನರನ್ನು ಉರುಳಿಸುವ ಸಿಐಎ ಪಿತೂರಿ ವಿಫಲ.

❑ ಕುರ್ದಿಶ್ ಪ್ರದೇಶಗಳ ಮೇಲೆ ಅಮೆರಿಕದ ಬಾಂಬ್ ಧಾಳಿ.

❑ ಘಾಲಿಯವರನ್ನು ಎರಡನೇ ಬಾರಿ ಮಹಾಕಾರ್ಯದರ್ಶಿ ಮಾಡಲು ಭದ್ರತಾ ಸಮಿತಿ ನಿರ್ಣಯ-ಅಮೆರಿಕದ ವಿಟೋ.

❑ ಘಾಲಿಯವರ ಪುನರಾಯ್ಕೆ ಬಗೆಗಿನ ಬಿಕ್ಕಟ್ಟಿನಲ್ಲಿ ಅಮೆರಿಕಾ ಏಕಾಂಗಿ, ಆದರೂ ಕೊನೆಗೂ ಅಮೆರಿಕದ ಒತ್ತಡ, ಒಡೆದು ಆಳುವ ನೀತಿಗೆ ಮಣಿದು ಭದ್ರತಾ ಸಮಿತಿ ಅಸ್ತು.

❑ ಅಮೆರಿಕದ ಬೆಂಬಲ ಗಳಿಸಿದ ಘಾನಾದ ಅನ್ನನ್ ಹೊಸ ಮಹಾಕಾರ್ಯದರ್ಶಿ.

❑ APEC ಸಮ್ಮೇಳನದಲ್ಲಿ ಮಾಹಿತಿ ತಂತ್ರಜ್ಞಾನದ ಆಮದಿಗೆ ಎಲ್ಲಾ ನಿರ್ಬಂಧ ಕಿತ್ತು ಹಾಕುವುದನ್ನು ಕ್ರಿ.ಶ.2000ದೊಳಗೆ ಜಾರಿಗೆ ತರಲು ಮೂರನೇ ಜಗತ್ತಿನ ದೇಶಗಳ ತೀವ್ರ ವಿರೋಧ. ಕ್ಲಿಂಟನ್‌ರ ಒತ್ತಡದಿಂದ ಕೊನೆಗೂ ಆ ಬಗ್ಗೆ ಒಪ್ಪಂದ.

❑ WTOನಲ್ಲೂ ಅಮೆರಿಕಕ್ಕೆ ಈ ಬಗ್ಗೆ ಪೂರ್ಣ ವಿಜಯ ಸಿಗದಿದ್ದರೂ, ಅಮೆರಿಕದ ಒತ್ತಡಕ್ಕೆ ಕಾರ್ಮಿಕ ಕಲ್ಯಾಣ ಮಾನದಂಡಗಳ ಬಗ್ಗೆ, ವಿದೇಶಿ ಬಂಡವಾಳ ಹೂಡಿಕೆ ಮೇಲೆ ನಿರ್ಬಂಧಗಳ ಬಗ್ಗೆ ಅಧ್ಯಯನಕ್ಕೆ ಒಪ್ಪಿಗೆ,ಮೂರನೇ ಜಗತ್ತಿನ ದೇಶಗಳ ಐಕ್ಯ ಪ್ರತಿರೋಧದ ಅಭಾವ.

ಬಂಡವಾಳಶಾಹಿ ಜಗತ್ತಿನಲ್ಲಿ

❑ ಫ್ರೆಂಚ್ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮಹಾನ್ ಮುಷ್ಕರ ಹಾಗೂ ವಿಜಯ. ಹೋರಾಟಕ್ಕೆ ಇಡೀ ದೇಶದ ಕಾರ್ಮಿಕ ರಂಗದ, ವಿದ್ಯಾರ್ಥಿಗಳ, ಜನತೆಯ ಬೆಂಬಲ.

❑ ಆಸ್ಟ್ರೇಲಿಯಾದಲ್ಲಿ ಲೇಬರ್ ಪಕ್ಷಕ್ಕೆ ಪರಾಭವ.

❑ ಇಂಡೋನೇಶ್ಯಾ-ಆಸ್ಟ್ರೇಲಿಯಾಗಳ ನಡುವೆ ಆತಂಕಕಾರಿ ಮಿಲಿಟರಿ ಒಪ್ಪಂದ.

❑ ಇಟಲಿಯಲ್ಲಿ ಕಮ್ಯುನಿಸ್ಟ್ ಪಕ್ಷ ಬೆಂಬಲಿತ ಎಡ-ಮಧ್ಯಮ ಪಂಥೀಯ ಸರಕಾರ ರಚನೆ. ಬಲಪಂಥೀಯ, ಫ್ಯಾಸಿಸ್ಟ್ ಹಾಗೂ ಪ್ರತ್ಯೇಕತಾ ಶಕ್ತಿಗಳಿಗೆ ಭಾರಿ ಪರಾಭವ.

❑ ಅಮೆರಿಕದ ಅಟ್ಲಾಂಟದ ಒಲಿಂಪಿಕ್ ಪಾರ್ಕ್‌ನಲ್ಲಿ ಬಾಂಬ್ ಸ್ಫೋಟ, ಬಲಪಂಥೀಯ ಅಮೆರಿಕನ್ ಉಗ್ರವಾದಿಗಳ ಕೃತ್ಯ.

❑ ಒಲಿಂಪಿಕ್ಸ್‌ಗಿಂತ ಸ್ವಲ್ಪ ಮುಂಚೆ ನ್ಯೂಯಾರ್ಕಿನಿಂದ ಹೊರಟ TWA ಜಂಬೋ ವಿಮಾನ ನಿಗೂಢ ಅಪಘಾತ, ಮಿಲಿಟರಿ ಕವಾಯತಿನಲ್ಲಿ ಹೊಡೆಯಲಾದ ಕ್ಷಿಪಣಿಗೆ TWA ಜಂಬೋ ಬಲಿ ಎಂಬ ತೀವ್ರ ಅನುಮಾನ.

❑ ಅಮೆರಿಕದ ದಕ್ಷಿಣದ ಪ್ರಾಂತ್ಯಗಳಲ್ಲಿ 33 ಕರಿ ಚರ್ಚುಗಳ ಸುಡುವಿಕೆ.

❑ ಅಧ್ಯಕ್ಷರಾಗಿ ಕ್ಲಿಂಟನ್ ಮರು ಆಯ್ಕೆ. ಆದರೆ ಎರಡೂ ಸದನಗಳಲ್ಲಿ ರಿಪಬ್ಲಿಕನ್ ಸ್ಪಷ್ಟ ಬಹುಮತ.

❑ ಬ್ರಿಟನ್‌ನಲ್ಲಿ ಹುಚ್ಚು ಹಸುರೋಗಕ್ಕೆ ಸಾವಿರಾರು ಹಸುಗಳ ಬಲಿ. ಬ್ರಿಟನ್‌ನಿಂದ ದನದ ಮಾಂಸದ ಮೇಲೆ ಯುರೋಪಿಯನ್ ಸಮುದಾಯದ ನಿಷೇಧ. ಆ ಬಗ್ಗೆ ಯುರೋಪಿಯನ್ ಸಮುದಾಯದಲ್ಲಿ ತೀವ್ರ ಬಿಕ್ಕಟ್ಟು.

❑ ಅಮೆರಿಕದ ಮೂರು ಬೃಹತ್ ಯೂನಿಯನುಗಳು ವಿಲೀನ. 20 ಲಕ್ಷ ಸದಸ್ಯರ ಭಾರಿ ಯೂನಿಯನ್‌ಗಳ ರಚನೆ.

ಮಾಜಿ ಸಮಾಜವಾದಿ ದೇಶಗಳಲ್ಲಿ

❑ ರಶ್ಯಾದ ಪಾರ್ಲಿಮೆಂಟಿನ ಸ್ಪೀಕರ್ ಆಗಿ ಕಮ್ಯುನಿಸ್ಟ್ ಆಯ್ಕೆ.

❑ ರಶ್ಯಾದಲ್ಲಿ ಐದು ಲಕ್ಷ ಕಾರ್ಮಿಕರ ದೀರ್ಘ ಮುಷ್ಕರ.

❑ ಅಧ್ಯಕ್ಷ ಯೆಲ್ಟ್‌ಸಿನ್‌ನ ವಿರುದ್ಧ ಎಡ-ದೇಶಪ್ರೇಮಿ ಕೂಟದ ಐಕ್ಯ ಅಭ್ಯರ್ಥಿ. ಕಮ್ಯುನಿಸ್ಟ್ ಝುಗನೋವ್, ಜನರಲ್ ಲೆಬೆದೆವ್, ರಾಷ್ಟ್ರೀಯ ತೀವ್ರವಾದಿ ಝುರ್‌ನೋವ್‌ಸ್ಕಿ ಇತರ ಗಂಭೀರ ಸವಾಲು ತೋರಬಲ್ಲ ಅಭ್ಯರ್ಥಿಗಳು.

❑ ಚುನಾವಣಾ ಪೂರ್ವ ಸಮೀಕ್ಷೆಗಳಲ್ಲಿ ಹಲವು ವಾರಗಳ ಕಾಲ ಝುಗನೋವ್ ಅತ್ಯಂತ ಹೆಚ್ಚು ಬೆಂಬಲದ ಅಭ್ಯರ್ಥಿ.

❑ ಯೆಲ್ಸಿನ್ ಗಾಬರಿ-ಸಾಮ್ರಾಜ್ಯಶಾಹಿ ವಲಯಗಳಲ್ಲಿ ನಡುಕ. ಪೆನ್‌ಶನ್, ಹಳೆ ಸಂಬಳ ಬಾಕಿ ಸಂದಾಯದ ಭರವಸೆಗಳ ಮಹಾಪೂರ ಯೆಲ್ಸಿನ್‌ರಿಂದ. ಕುಂತಲ್ಲಿ ನಿಂತಲ್ಲಿ ಹೋದಲ್ಲಿ, ಬಂದಲ್ಲಿ ಯೆಲ್ಸಿನ್ನರಿಂದ ಆಶ್ವಾಸನೆ, ಸಹಾಯಗಳ ಸುರಿಮಳೆ-ಅವರ ಅಧ್ಯಕ್ಷೀಯ ಅಧಿಕಾರಗಳ ಮುಕ್ತ ದುರುಪಯೋಗ. ಸರಕಾರಿ ಸ್ವಾಮ್ಯದ ಎಲ್ಲಾ ಸುದ್ದಿ ಮಾಧ್ಯಮಗಳ ದುರುಪಯೋಗ. ಇತರ ಅಭ್ಯರ್ಥಿಗಳ ಪ್ರಚಾರದಲ್ಲಿ ಅಡೆತಡೆ, ಸಂಪನ್ಮೂಲಗಳಲ್ಲಿ ಭಾರಿ ತಾರತಮ್ಯ.

❑ ಚೆಚೆನ್ಯಾದಲ್ಲಿ ತೀವ್ರ ಯುದ್ಧ. ರಶ್ಯಾ ಪಡೆಗಳಿಗೆ ತೀವ್ರ ಹಿನ್ನಡೆ.

❑ ಗೋರ್ಬಚೇವ್ ಸಹ ಒಬ್ಬ ಅಭ್ಯರ್ಥಿ. ಬೆಂಬಲ ಶೇಕಡಾ 1ಕ್ಕಿಂತ ಕಡಿಮೆ. ಚುನಾವಣಾ ಪ್ರಚಾರ ಸಭೆಯೊಂದರಲ್ಲಿ ಕ್ರುದ್ಧ ಸಭಿಕರಿಂದ ಕಪಾಳಮೋಕ್ಷ.

❑ ಚೆಚೆನ್ ನಾಯಕ ದುದಯೆಲ್ ನಿಧನ. ಆತನ ಉತ್ತರಾಧಿಕಾರಿ ಜತೆ ಶಾಂತಿ ಒಪ್ಪಂದ.

❑ ಚುನಾವಣೆಯ ಸ್ವಲ್ಪ ದಿನಗಳ ಮೊದಲು ಚೆಚೆನ್ಯಾದಲ್ಲಿ ಶಾಂತಿ ಒಪ್ಪಂದದ ನಾಟಕ

❑ ಮೊದಲ ಸುತ್ತಿನಲ್ಲಿ ಯೆಲ್ಟ್‌ಸಿನ್‌ಗೆ ಸ್ಪಷ್ಟ ಬಹುಮತ ಇಲ್ಲ. ಜನರಲ್ ಲೆಬೆದೆವ್‌ನ್ನು ಭದ್ರತಾ ಸಲಹೆಗಾರ ಮಾಡುವ ಮೂಲಕ ಒಲೈಕೆ.

❑ ಎರಡನೇ ಸುತ್ತಿನ ಚುನಾವಣೆಯಲ್ಲಿ ಯೆಲ್ಸಿನ್‌ಗೆ ಜನರಲ್ ಲೆಬೆದೆವ್ ಬೆಂಬಲ. ಎರಡನೇ ಸುತ್ತಿನಲ್ಲಿ ಯೆಲ್ಸಿನ್ ಸ್ವಲ್ಪ ಅಂತರದಿಂದ ವಿಜಯ.

❑ ಎರಡನೇ ಸುತ್ತಿನ ಮತದಾನದ ಮೊದಲೇ ಯೆಲ್ಸಿನ್ನರಿಗೆ ಹೃದಯಾಘಾತ. ಪಂಚ-ಬೈಪಾಸ್ ಶಸ್ತ್ರ ಚಿಕಿತ್ಸೆಗೆ ಯೆಲ್ಸಿನ್ ಕಾಯುತ್ತಿರುವಾಗ ಕ್ರೆಮ್ಲಿನ್‌ನಲ್ಲಿ ಅಧಿಕಾರಕ್ಕೆ ತೀವ್ರ ಹೋರಾಟ. ಚೆಚೆನ್ ಶಾಂತಿ ಒಪ್ಪಂದ ಮುರಿಯುವಿಕೆ, ಪುನಃ ಕಾದಾಟ.

❑ ಜನರಲ್ ಲೆಬೆದೆವ್ ಪ್ರಯತ್ನ-ಚೆಚೆನ್ ಶಾಂತಿ ಒಪ್ಪಂದಕ್ಕೆ ಪುನಃ ಒಪ್ಪಂದ.

❑ ಯಲ್ಸಿನ್‌ರಿಂದ ಜನರಲ್ ಲೆಬೆದೆವ್ ಪ್ರಯತ್ನಕ್ಕೆ ಬೆಂಬಲ.

❑ ಯೆಲ್ಸಿನ್ ಆಸ್ಪತ್ರೆಯಿಂದಲೇ ಜನರಲ್ ಲೆಬೆದೆವ್ ಬರ್ಖಾಸ್ತು. ಜನರಲ್ ಲೆಬೆದೆವ್‌ರಿಂದ ಹೊಸ ಪಕ್ಷ.

ಮೂರನೇ ಜಗತ್ತಿನ ದೇಶಗಳಲ್ಲಿ

❑ ಪ್ಯಾಲಿಸ್ಟೀನ್‌ನಲ್ಲಿ ಚುನಾವಣೆ-ಅರಾಫತ್ ಅಧ್ಯಕ್ಷರಾಗಿ ಆಯ್ಕೆ. ಪಿ.ಎಲ್.ಓ.ಗೆ ಭಾರೀ ಬಹುಮತ.

ಲೋಕಸಂಚಾರ



ಶರತ್‌ಚಂದ್ರ

❑ ಕೊಲಂಬೊ ಸೆಂಟ್ರಲ್ ಬ್ಯಾಂಕ್‌ನಲ್ಲಿ ಭಾರಿ ಸ್ಫೋಟ. ಎಲ್.ಟಿ.ಟಿ.ಇ.ಯ ಕೃತ್ಯ ಎಂಬ ಶಂಕೆ.

❑ ಬಾಂಗ್ಲಾದೇಶದಲ್ಲಿ ಚುನಾವಣೆ- ಪ್ರಮುಖ ವಿರೋಧ ಪಕ್ಷಗಳಿಂದ ಬಹಿಷ್ಕಾರ - ಚುನಾವಣೆ ಗೆದ್ದ ಬಿಎನ್‌ಪಿಯ ಖಲಿದಾ ಜೀಯಾ ಸರಕಾರದ ಬಹಿಷ್ಕಾರ. ತೀವ್ರ ಆಂದೋಲನ - ಸಂವೈಧಾನಿಕ ಬಿಕ್ಕಟ್ಟು.

❑ ದೇಶ ಬಿಟ್ಟು ಹೋಗಿ ಮರಳಿದ್ದ ಸದ್ದಾಂ ಅಳಿಯಂದರುಗಳ ಕೊಲೆ.

❑ ನೇಪಾಳ ಕಮ್ಯುನಿಸ್ಟ್ ವಿರೋಧಿ ಸರಕಾರದ ವಿರುದ್ಧ ಅವಿಶ್ವಾಸ ಮತ. ಸ್ವಲ್ಪದರಲ್ಲಿ ಹಾಗೂ ಅನ್ಯಾಯಯುತ ಕ್ರಮಗಳಿಂದ ಸರಕಾದ ರಕ್ಷಣೆ.

❑ ಬಾಂಗ್ಲಾದೇಶದಲ್ಲಿ ಖಲಿದಾ ಜಿಯಾ ಸರಕಾರ ರಾಜೀನಾಮೆ-ಮರುಚುನಾವಣೆ-ಹಸಿನಾರ ಅವಾಮಿ ಲೀಗ್ ಸರಕಾರ.

❑ ಲೆಬನಾನ್ ಮೇಲೆ ಇಸ್ರೇಲಿ ಆಕ್ರಮಣ - 16 ದಿನಗಳ ಕಾಲ.

❑ ಇಸ್ರೇಲಿನಲ್ಲಿ ತೀವ್ರ ಭಯೋತ್ಪಾದಕ ಚಟುವಟಿಕೆ - ಚುನಾವಣೆಯಲ್ಲಿ ಲೇಬರ್ ಪಕ್ಷ ಪರಾಭವ - ಬಲಪಂಥೀಯ ಪ್ಯಾಲೆಸ್ಟೇನ್ ಶಾಂತಿ ಒಪ್ಪಂದದ ವಿರೋಧಿ ಉಗ್ರವಾದಿ ನೇತನ್ಯಾಹ್ಯೂರಿಂದ ಸರಕಾರ ರಚನೆ.

❑ ಪ್ಯಾಲೆಸ್ಟೀನ್ -ಇಸ್ರೇಲ್ ಶಾಂತಿ ಒಪ್ಪಂದದಲ್ಲಿ ತೀವ್ರ ಬಿಕ್ಕಟ್ಟು. ಅರಾಫತ್ ರಿಂದ ಸಾರ್ವತ್ರಿಕ ಮುಷ್ಕರಕ್ಕೆ ಕರೆ.

❑ ಶ್ರೀಲಂಕಾದಲ್ಲಿ ಮುಲ್ಲೈತ್ತೀವು ಮಿಲಿಟರಿ ಕ್ಯಾಂಪ್ ಮೇಲೆ ಎಲ್.ಟಿ.ಟಿ.ಇ. ಹಠಾತ್ ಧಾಳಿ. ಸೈನ್ಯಕ್ಕೆ ತೀವ್ರ ಸಾವು ನೋವು. ಶಸ್ತ್ರಾಸ್ತ್ರ ನಷ್ಟ. ಆಂತರಿಕ ಕಲಹ ತೀವ್ರ.

❑ ಪಾಕಿಸ್ತಾನದಲ್ಲಿ ಬೆನಜೀರ್ ಸರಕಾರ ವಿರುದ್ಧ ತೀವ್ರ ಆಕ್ರೋಶ. ಪ್ರತಿಭಟನೆ, ಅತೃಪ್ತಿ. ಬೆನಜೀರ್ ಪತಿಗೆ 'ಮಿಸ್ಟರ್ ಟೆನ್ ಪರ್ಸೆಂಟ್' ಅಡ್ಡ ಹೆಸರು. ಭ್ರಷ್ಟಾಚಾರ ಆಪಾದನೆ. ಅಧ್ಯಕ್ಷರು, ಸುಪ್ರೀಂ ಕೋರ್ಟ್ ಜತೆ ಬೆನಜಿರ್ ಸರಕಾರದ ಘರ್ಷಣೆ.

❑ ಕರಾಚಿಯಲ್ಲಿ ಮುಂದುವರಿದ ಜನಾಂಗೀಯ ದಂಗೆ. ಬೆನಜಿರ್ ಸಹೋದರ ಮುರ್ತಾಝಾ ಭುಟ್ಟೋ ಕೊಲೆ. ಅಧ್ಯಕ್ಷರು ಹಾಗೂ ಬೆನಜಿರ್ ಮಧ್ಯೆ 'ನೀವು ಮಾಡಿಸಿದ್ದು' ಎಂಬ ಆಪಾದನೆ. ಬೆನಜಿರ್ ಸರಕಾರ ವಜಾ. ಅಧ್ಯಕ್ಷರ ಆಡಳಿತ.

❑ ಅಫಘಾನಿಸ್ತಾನದಲ್ಲಿ ಯಾದವೀ ಕಲಹ ಮುಂದುವರಿಕೆ. ತಾಲಿಬಾನ್ ವಿಜಯ ಗಳಿಸುತ್ತಾ ಕಾಬೂಲು ವಶ. ಮಾಜಿ ಅಧ್ಯಕ್ಷ ನಜೀಬುಲ್ಲಾರ ಅಮಾನುಷ ಕೊಲೆ. ಮಹಿಳೆಯರು ಶಿಕ್ಷಣ, ಉದ್ಯೋಗಗಳಲ್ಲಿ ತೊಡಗಬಾರದೆಂಬ ತಾಲಿಬಾನ್ ಸರಕಾರದ ಕ್ರಮಗಳಿಗೆ ತೀವ್ರ ಖಂಡನೆ.

❑ ತಾಲಿಬಾನ್‌ಗೆ ಮಿಲಿಟರಿ ಹಿನ್ನಡೆ. ಇತರ ಗೆರಿಲ್ಲಾ ಗುಂಪುಗಳಿಂದ ಕಾಬೂಲಿನಿಂದ ಉತ್ತರಕ್ಕೆ ಹೋಗಲು ತೀವ್ರ ಪ್ರತಿರೋಧ.

❑ ಇಂಡೋನೇಶ್ಯಾದಲ್ಲಿ ತೀವ್ರ ಸರಕಾರಿ ವಿರೋಧಿ ದಂಗೆಗಳು, ಮಾಜಿ ಅಧ್ಯಕ್ಷ ಸುಕರ್ಣೋಪುತ್ರಿ ಮೇಘಾವತಿ ಮೇಲೆ ರಾಜದ್ರೋಹ ಪಿತೂರು ಆಪಾದನೆ.

❑ ದಕ್ಷಿಣ ಕೊರಿಯಾದ ಮಾಜಿ ಅಧ್ಯಕ್ಷ, ಸೇನಾ ಮುಖ್ಯಸ್ಥರಿಗೆ ಗಲ್ಲುಶಿಕ್ಷೆ.

❑ ಯುಎಇಯಿಂದ ಕಾನೂನು ಬಾಹಿರ ಕಾರ್ಮಿಕರ ದೊಡ್ಡ ಸಂಖ್ಯೆಯಲ್ಲಿ ಸ್ವದೇಶಗಳಿಗೆ ವಿದೇಶ ಕಾರ್ಮಿಕರ ವಾಪಸಾತಿ. ಒಮ್ಮೆ ಭಾರಿ ಬೇಡಿಕೆಯಲ್ಲಿದ್ದ ಈಗ ಬೇಡವಾದ ವಿದೇಶಿ ಕಾರ್ಮಿಕರು.

❑ ಭಾರತ, ಪಾಕಿಸ್ತಾನ, ನೇಪಾಳಗಳಿಗೆ ಚೀನಿ ಭೇಟಿ.

❑ ಚೀನಾ, ರಶ್ಯಾ ನಡುವೆ ಮಿಲಿಟರಿ ಸಹಕಾರ.

❑ ಬಾಂಗ್ಲಾದೇಶದ ಸ್ವಾತಂತ್ರ್ಯ ಬೆಳ್ಳಿಹಬ್ಬ ದಿನಾಚರಣೆ.

❑ ಪೆರುವಿನಲ್ಲಿ ಜಪಾನಿ ರಾಯಭಾರಿ ಕಛೇರಿಯಲ್ಲಿ ಪೆರು ಹಾಗೂ ವಿದೇಶಿ ಗಣ್ಯರ ಒತ್ತೆಯಾಳು ಹಿಡಿದ ಬಿಕ್ಕಟ್ಟು.

❑ ನಿಕರಾಗುವ ಚುನಾವಣೆಗಳಲ್ಲಿ ವ್ಯಾಪಕ ವ[illegible] ಅನ್ಯಾಯ, ಡೇನಿಯಲ್ ಒರ್ಟೆಗಾರ ಸ್ಯಾಂ[illegible] ನಾಯಕತ್ವದಿಂದ ತೀವ್ರ ಪ್ರತಿರೋಧ.

ಪೌರ ಕಾರ್ಮಿಕರಿಗೆ ಪ್ರತಿತಿಂಗಳು ಸಂಬಳ ಸಿಗುವಂತಾಗುವುದು ಹೇಗೆ?

-ಎನ್.ಕೆ.ಉಪಾಧ್ಯಾಯ

ದಸಂಬರ 26 ರಿಂದ ರಾಜ್ಯದ ಹೆಚ್ಚಿನ ನಗರಸಭೆ - ಪುರಸಭೆಗಳ ಸಾವಿರಾರು ನೌಕರರು ಸರಕಾರಿ ಖಜಾನೆಯಿಂದಲೇ ವೇತನ ಸಿಗಬೇಕೆಂಬ ಬೇಡಿಕೆಯನ್ನು ಮುಂದಿಟ್ಟು ಮುಷ್ಕರ ನಡೆಸಿದ್ದಾರೆ. ಅದರ ಜೊತೆಯಲ್ಲಿಯೇ ತಮ್ಮನ್ನು ಸರಕಾರಿ ನೌಕರರೆಂದು ಪರಿಗಣಿಸಬೇಕೆಂದೂ ಕೇಳುತ್ತಿದಾರೆ. ಸ್ಥಾನಿಕ ಸಂಸ್ಥೆಗಳಲ್ಲಿಯ ನೌಕರರನ್ನು ಸರಕಾರಿ ನೌಕರರೆಂದು ಪರಿಗಣಿಸಿ ಸರಕಾರಿ ಖಜಾನೆಯಿಂದಲೇ ಸರಕಾರದವರೇ ಸಂಬಳ ವಿತರಣೆ ಮಾಡಬೇಕು ಎಂಬುದು ಪ್ರಶ್ನಾರ್ತಕವಾದ ವಿಷಯ. ಅದರ ಕುರಿತು ಹೆಚ್ಚಿನ ಚರ್ಚೆ ಅಗತ್ಯ.

ಈಗ ಕೆಲಸಗಾರರ ಮುಂದಿರುವ ಮುಖ್ಯ ಪ್ರಶ್ನೆ ಯಾವುದೆಂದರೆ ಅವರಿಗೆ ಪ್ರತಿತಿಂಗಳು ವೇತನ ಸಿಗಬೇಕು, ಈಗ ಹಲವಾರು ನಗರಸಭೆಗಳು 5-6 ತಿಂಗಳು ತಮ್ಮ ಕೆಲಸಗಾರರಿಗೆ-ನೌಕರರಿಗೆ ವೇತನ ನೀಡುವ ಪರಿಸ್ಥಿತಿಯಲಿಲ್ಲ. ದೇವರಾಜ ಅರಸರು ಮುಖ್ಯಮಂತ್ರಿಯಾಗಿದ್ದಾಗಲೇ ನಗರಸಭೆಗಳು ವಸೂಲಿ ಮಾಡುತ್ತಿದ್ದ ಅಕ್ಟ್ರಾಯ್ ಕರವನ್ನು ರದ್ದು ಪಡಿಸಲಾಗಿದೆ. ಅದರಿಂದಾಗಿ ನಗರ ಸಭೆಗಳ ಸಂಪನ್ಮೂಲಕ್ಕೆ ದೊಡ್ಡ ಪೆಟ್ಟು ಬಿದ್ದಿದೆ. ಅಕ್ಟ್ರಾಯಿ ಬದಲಾಗಿ ಸರಕಾರ ಕೆಲವು ವಸ್ತುಗಳಮೇಲೆ ಪ್ರವೇಶತೆರಿಗೆ ಹೇರಿ ಪ್ರತಿ ನಗರ ಸಭೆಗಳು ವಸೂಲಿ ಮಾಡುತ್ತಿದ್ದ ಅಕ್ಟ್ರಾಯಿಯ ಒಟ್ಟು ಆದಾಯವನ್ನು ಪರಿಶೀಲಿಸಿ ಅದರ ಶೇ. 10 ರಷ್ಟನ್ನು ಅನುದಾನದ ರೂಪದಲ್ಲಿ ನಗರ ಸಭೆಗಳಿಗೆ ಕೊಡಬೇಕೆಂಬ ನಿರ್ಣಯ ಇತ್ತು. ಆದರೆ ಅದನ್ನು ಸಮಯಕ್ಕೆ ಸರಿಯಾಗಿ ಮೂರು ತಿಂಗಳಿಗೊಂದು ಸಲ ಕೂಡಾ ಕೊಡುತ್ತಿರಲಿಲ್ಲ. ಅದರ ಜೊತೆಯಲ್ಲಿಯೇ ಮನರಂಜನೆ ಕರದ ಒಂದು ಭಾಗವನ್ನು ಸರಕಾರ ಕೊಡುತ್ತಿತ್ತು. ವೀರಪ್ಪ ಮೊಯಿಲಿ ಸರಕಾರ ಅದನ್ನೂ ನಿಲ್ಲಿಸಿತು. ಕಾರಣ ಗೊತ್ತಿಲ್ಲ. ವೀಲ್ ಟ್ಯಾಕ್ಸ್‌ನಲ್ಲಿಯೂ ಪಾಲು ಬೇಕೆಂದು ನಗರಸಭೆಗಳು ಬೇಡಿದ್ದವು. ಸರಕಾರ ಒಪ್ಪಿದ್ದಿಲ್ಲ. ಆಸ್ತಿ ತೆರಿಗೆ ಸರಿಯಾಗಿ ವಸೂಲಿ ಆಗುತ್ತಿಲ್ಲ, ಹೀಗಾಗಿ ನಗರ ಸಭೆಗಳಲ್ಲಿಯ ನೌಕರರಿಗೆ - ಪೌರಕಾರ್ಮಿಕರಿಗೆ ಸರಿಯಾಗಿ ಪಗಾರ ವಿತರಣೆ ಆಗುತ್ತಿರಲಿಲ್ಲ. ಸರಕಾರ ನೌಕರರನ್ನು ಬದ್ಲಿ ಮಾಡುತ್ತಿದ್ದು ಅವರಿಗೆ ಸರಿಯಾಗಿ ವೇತನ ಸಿಗದೆ ಅವರೆಲ್ಲ ಹಲವಾರು ಸಮಸ್ಯೆಗಳನ್ನೆದುರಿಸಬೇಕಾಗಿ ಬರುತ್ತಿತ್ತು. ಪ್ರತಿತಿಂಗಳು ಸಂಬಳ ಪಡೆಯಲು ನೌಕರರೆಲ್ಲಾ ಪರದಾಡಬೇಕಾಗುತ್ತಿತ್ತು. ನಗರ ಸಭೆಗಳೂ ಸರಕಾರವೂ ಇಂಥ ಗಂಭೀರ ಸಮಸ್ಯೆಯ ಕುರಿತು ಪರಿಹಾರ ಒದಗಿಸದಿರುವುದರಿಂದ ಹಲವಾರು ಸಲ ಹೋರಾಟ ನಡೆಯುತ್ತಲೇ ಬಂದಿದೆ.ಕೊನೆಗೆ ನಗರಸಭೆಗಳಿಗೆ ಸಂಪನ್ಮೂಲ ಹೆಚ್ಚಿಸುವ ಕುರಿತು ವರದಿ ಮಾಡಲು ಸರಕಾರದವರು ಆರ್ಥಿಕ ತಜ್ಞ ಡಾ|| ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಕಮಿಶನ್‌ನ್ನು ನೇಮಿಸಿದರು. ಆ ಕಮಿಶನ್ ತನ್ನ ವರದಿಯಲ್ಲಿ ಸದ್ಯ ಸರಕಾರದವರು ಸ್ಥಳೀಯ ಸಂಸ್ಥೆಗಳಿಗೆ ಮತ್ತು ಗ್ರಾಮ ಪಂಚಾಯತಿಗಳಿಗೆ ಯೋಜನೇತರ ಕಂದಾಯವನ್ನು ಶೇ 34.27 ರಿಂದ ಶೇ 36ಕ್ಕೆ ಹೆಚ್ಚಿಸಬೇಕೆಂದು ಶಿಫಾರಸು ಮಾಡಿದೆ. ಅಂದರೆ ನಗರಸಭೆಗಳಿಗೆ ಇನ್ನೂ ರೂ 26 ಕೋಟಿ ಲಭ್ಯವಾಗುತ್ತದೆ. ಈಗ ನಗರಸಭೆಗಳ ನೌಕರರಿಗೆ ಮತ್ತು ಪೌರಕಾರ್ಮಿಕರ ತಿಂಗಳ ವೇತನವಾಗಿ 75 ಕೋಟಿ ರೂಪಾಯಿ ವಾರ್ಷಿಕ ಬೇಕಾಗುತ್ತದೆ. ಡಾ|| ತಿಮ್ಮಯ್ಯ ಕಮಿಟಿಯ ಶಿಫಾರಸಿನ ಪ್ರಕಾರ 25 ಕೋಟಿ ಲಭ್ಯವಾದರೂ ಕೂಡ ಇನ್ನೂ 15 ಕೋಟಿ ಕಡಿಮೆ ಬೀಳುತ್ತದೆ. ಅದನ್ನು ಕರ ವಸೂಲಿಯ ಮೂಲಕ ತುಂಬಿಕೊಳ್ಳಬೇಕೆಂದು ಸರಕಾರ ಹೇಳುತ್ತದೆ. ಸದ್ಯ ನಗರ ಸಭೆಗಳು ವಸೂಲಿ ಮಾಡುತ್ತಿರುವ ಕರಗಳು ಶೇ 20-25 ರಷ್ಟು ಮಾತ್ರ. ಮುತುವರ್ಜಿ ವಹಿಸಿ ಕರ ವಸೂಲಿ ಮಾಡಿದರೆ ಸಮಸ್ಯೆಗಳಿಗೆ ಸ್ವಲ್ಪ ಪರಿಹಾರ ಸಿಗಬಹುದಾಗಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಇನ್ನೂ ಸ್ವಲ್ಪ ಹೆಚ್ಚು ಅನುದಾನ ನೀಡಿ ನಗರಸಭೆ-ಪುರಸಭೆಗಳು ಕನಿಷ್ಟ ಶೇ 60-70 ರಷ್ಟಾದರೂ ಆಸ್ತಿ ಕರ ಮತ್ತಿನ್ನಿತರ ಕರಗಳನ್ನು ಕಟ್ಟುನಿಟ್ಟಾಗಿ ವಸೂಲಿ ಮಾಡಿದರೆ ಮಾತ್ರ ಈ ಸಮಸ್ಯೆಗಳಿಗೆ ಪರಿಹಾರ ಸಿಗಲು ಸಾಧ್ಯ. ಹೆಚ್ಚಾಗಿ ಹಿಂದುಳಿದ ಜನರಿರುವ ಪೌರ ಕಾರ್ಮಿಕರ ವೇತನದ ಕುರಿತು ಖಾಯಂ ರೀತಿಯ ಪರಿಹಾರ ಒದಗಿಸುವುದು ಅತ್ಯಗತ್ಯ. ಆದ್ದರಿಂದ ಮುಷ್ಕರದ ಮುಂದಾಳುಗಳು ಮತ್ತು ಸರಕಾರ ಸಾರ್ವಜನಿಕ ಆರೋಗ್ಯ ಮತ್ತಿನ್ನಿತರ ನಾಗರೀಕ ಸೌಲಭ್ಯಗಳನ್ನು ಗಂಭೀರವಾಗಿ ಪರಿಗಣಿಸಿ ಈ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿದು ಮುಷ್ಕರವನ್ನು ಮುಕ್ತಾಯಗೊಳಿಸುವುದು ಅತ್ಯಗತ್ಯ. □

ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಡಿವೈಎಫ್‌ಐ ಘಟಕದ ಹೊಸ ವರ್ಷದ ಗ್ರೀಟಿಂಗ್ ಕಾರ್ಡ್‌ನ ಒಂದು ಚಿತ್ರ.



ಅಣಕ

ಶರತ್ ಚಂದ್ರ

1996 ಹೆಂಗಿತ್ರೀ?........ ಹಿಂಗಿತ್ರೀ!!

1996 ಕಳಚಿಕೊಳ್ಳುತ್ತಿದ್ದಂತೆ ನಮ್ಮ ವರದಿಗಾರ ನಕ್ಷತ್ರಿಕ, ಕಳೆದುಹೋದ ವರ್ಷ ಹೆಂಗಿತ್ರೀ? ಎಂದು ಹಲವಾರು ಗಣ್ಯರು, ಕೆಲವು ನಗಣ್ಯರನ್ನು ಭೇಟಿ ಮಾಡಿ ಅವರು... ಹಿಂಗಿತ್ರೀ ಎಂದದ್ದನ್ನು ಗೀಚಿಕೊಂಡು ಬಂದಿದ್ದಾನೆ. ಕೆಲವು ಗಣ್ಯರನ್ನು ಹುಡುಕಿಕೊಂಡು,ಕೋರ್ಟು,ಕಛೇರಿ,ಲಾಕಪ್, ಕಾಡು ಮೇಡು ಅಲೆಯಬೇಕಾದ್ದರಿಂದ ಸ್ವಲ್ಪ ವಿಳಂಬವಾಗಿದೆ ಕ್ಷಮಿಸಿ.

ವಕೀಲ ಜಾಮೀನುವಾಲಾ: ವಿವಿಧ ರೀತಿಯ ಜಾಮೀನುಗಳ ಎಲ್ಲಾ ವಿಳಪವರಗಳನ್ನು ಅರ್ಥೈಸುವ, ಅವಕ್ಕೆ ಅರ್ಜಿ ಗುಜರಾಯಿಸಿ, ಸಿಗದಿದ್ದರೆ ಮೇಲಿನ ಕೋರ್ಟುಗಳಿಗೆ ಹೋಗುವ, ಭಾರಿ ಚಾರಿತ್ರಿಕ ತೀರ್ಪುಗಳನ್ನು ವಿಶ್ಲೇಷಿಸುವ ಶ್ರೀಮಂತ ಅನುಭವ ನೀಡಿದ ಅಮೋಘ ವರ್ಷ.

ನ್ಯಾಯಧೀಶ ಕಾನೂನುವಾಲಾ: ಗಣ್ಯರ ಜಮೀನು, ಭದ್ರತೆ, ಆರೋಗ್ಯ, ರೋಗ, ಪರಿಸರ ಕಲ್ಮಶ, ವಿದ್ಯುತ್ ಬೆಳೆ, 'ಗಿಲ್ಲಿ'ವರೋ ಇಲ್ಲವೋ, ಕಾರ್ಖಾನೆ ಮುಚ್ಚಿಸಬೇಕೋ ಅಥವಾ ತೆಗೆಯಬೇಕೋ, ಸೌಂದರ್ಯ ಕುಡಕೊಂಡು ನೋಡಬೇಕೋ ಅಥವಾ ನೋಡಲೇ ಬಾರದೋ - ಇಂತಹ ಎಲ್ಲಾ ವೈವಿಧ್ಯಮಯ ಕೇಸುಗಳಿಂದ ಕ್ರಿಯಾಶೀಲವಾದ ಚಾರಿತ್ರಿಕ ವರ್ಷ.

ಬೆಂಗಳೂರು ಕನ್ನಡಿಗ: ದಹಲಿಯ ಅಕಾಡೆಮಿಗಳು, ಭವನಗಳು, ಕ್ಯಾಬಿನ್‌ಗಳು ಕೈ ಬೀಸಿ ಕರೆದು ಕನ್ನಡಿಗರು ವಲಸೆ ಹೋಗುತ್ತಿರುವುದರಿಂದ ಬೆಂಗಳೂರಿನ ಪೌರ ಸಮಸ್ಯೆ ಸುಧಾರಿಸಬಹುದೇ ಎಂಬ ಆಸೆ ಹುಟ್ಟಿಸಿದ ವರ್ಷ.

ವೀರಪ್ಪನ್: ನಾನು ಮಹಾತ್ಮಗಾಂಧಿ ರಸ್ತೆಯಲ್ಲೇ ಓಡಾಡುತ್ತಿರುತ್ತೇನೆ. 1997ರಲ್ಲೂ ನೀವು ನನ್ನನ್ನು ಹುಡುಕ್ತಾನೆ ಇರ್ತಿರಾ ಎಂದು ಅಣಕಿಸಿದ ವರ್ಷ.

ವಿಚಾರವಾದಿ: ಹದಿಮೂರು ದಿನ ಆಳಿದ ವಾಜಪೇಯಿ ಸರಕಾರದ ಪತನ, ಹದಿಮೂರು ಪಕ್ಷಗಳ ಸಂಯುಕ್ತ ರಂಗ ಸರಕಾರ ಸ್ಥಾಪನೆ ನಂತರ ಹದಿಮೂರು ದುರಾದೃಷ್ಟ ಸಂಖ್ಯೆ ಆಗಲೇಬೇಕಾಗಿಲ್ಲ ಎಂದು ಎಲ್ಲರಿಗೂ ಮನವರಿಕೆಯಾದ ವರ್ಷ.

ಸೀತಾರಾಂ ಕೇಸರಿ: ಒಂದು ತಲೆಗೆ ಒಂದೇ ಟೋಪಿ ಎಂಬ ಹಳೇ ಕಾಂಗ್ರೆಸ್ ನೀತಿ ತಾತ್ಕಾಲಿಕವಾಗಿ ಜಾರಿಯಾದ ವರ್ಷ.

ನರಸಿಂಹರಾವ್, ಚಂದ್ರಸ್ವಾಮಿ: ಕೆಲವರಿಗೆ ಯಾವಾಗಲೂ ಟೋಪಿ ಹಾಕಬಹುದು, ಹಲವರಿಗೆ ಕೆಲವೊಮ್ಮೆ ಟೋಪಿ ಹಾಕಬಹುದು. ಆದರೆ ಎಲ್ಲರಿಗೂ ಯಾವಾಗಲೂ ಟೋಪಿ ಹಾಕುವುದು ಸಾಧ್ಯವಿಲ್ಲ. ಒಂದು ಟೋಪಿಯನ್ನು ಯಾವಾಗಲೂ ಉಳಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಹಳೇ ನಾಣ್ಣುಡಿ ಟೋಪಿಯಿಂದ ತಲೆಯೊಳಗೆ ಹೋದ ವರ್ಷ.

ಮಿಲ್ಖಾಸಿಂಗ್: ಭಾರತೀಯರು ವಿದೇಶಿ ಚಿನ್ನದ ವ್ಯಾಮೋಹ ತ್ಯಜಿಸಿದ್ದಾರೆ. ಇನ್ನೆಂದೂ ಅವರ ಬಗ್ಗೆ ವ್ಯಾಮೋಹಗೊಂಡು ಮುಖಭಂಗ ಪಡೆಯಲಾಗುವುದಿಲ್ಲ ಎಂದು ಜಗತ್ತಿಗೆ ಸಾರಿದ ವರ್ಷ.

ಅಶೋಕ ಸಿಂಘಾಲ್: 'ಕರಸೇವೆ' ರಿಪೀಟ್ ಮಾಡುವ 'ಛಾನ್ಸೇ' ಸಿಗದೆ ಕಳೆದುಹೋದ ಇನ್ನೊಂದು ವರ್ಷ.

ಬಾಳಾಠಾಕ್ರೆ: ಹಿಂದೂ ಸಂಸ್ಕೃತಿ-ಮೈಕಲ್ ಜಾಕ್ಸನ್, ಹುಸೇನ್, ಸರಸ್ವತಿ, ಸೀರೆ, ಎನ್ರೋನ್, ಕಿಣಿ ಎಂಬ ಸರಳ ಸಮೀಕರಣ ಇಡೀ ಭಾರತಕ್ಕೆ ಚುರುಕ್ ಅನ್ನುವಂತೆ ಮುಟ್ಟಿಸಿದ ವರ್ಷ.

ಕಾನ್ಷಿರಾಂ: ಮನುವಾದವನ್ನು ಸೋಲಿಸಬೇಕಾದರೆ ಮನುವಾದಿಗಳ ಜತೆ ಮೈತ್ರಿ ಸಾಧಿಸಬೇಕು. ಮನುವಾದಿಗಳು ಅಸ್ಪೃಶ್ಯರಲ್ಲ ಎಂಬ ಮಾಯಾವಾದಕ್ಕೆ ಬಹುಜನರು ಗೋಣಾಡಿಸಿದ ವರ್ಷ.

ಅಡ್ವಾಣಿ: ನಾವು ಅಸ್ಪೃಶ್ಯತೆಗೆ ವಿರುದ್ಧ. ಮನುವಾದವೂ 'ಬಹುಜನ' ಹಿತಾಯ ಬಹು ಜನ ಸುಖಾಯ ಅಂತಲೇ ಹೇಳಿದ್ದು. ಶಂಕರರದ್ದೂ ಮಾಯಾವಾದವೇ. ಆ ಮಹಾನ್ ಪರಂಪರೆಯ ವಾರಸುದಾರರು ನಾವು ಎಂದು ಬಹುಜನರಿಗೆ ಅರಿವಾಗಲು ಆರಂಭವಾದ ವರ್ಷ.

ವಾಜಪೇಯಿ: ನಾವು ರಾಷ್ಟ್ರೀಯ ಮುಖ್ಯ ಧಾರೆಯ ಪಕ್ಷಗಳಿಗಿಂತ ಬೇರೆಯಲ್ಲ. ನಮ್ಮಲ್ಲೂ ಎಲ್ಲಾ ವಿಚಾರಗಳಿಗೆ ಮನ್ನಣೆ ಇದೆ. ಎನ್ರೋನ್ ಪರಕ್ಕೂ, ವಿರೋಧಕ್ಕೂ ನಮ್ಮಲ್ಲಿ ಕಚ್ಚೆಯವರೂ ಇದ್ದಾರೆ, ಚಡ್ಡಿಯವರೂ ಇದ್ದಾರೆ, ಕಚ್ಚೆ ಬಿಚ್ಚುವವರೂ ಇದ್ದಾರೆ, ಚಡ್ಡಿ ಬಿಚ್ಚುವವರನ್ನು ಮಾತ್ರ ವಿರೋಧಿಸುತ್ತೇವೆ. ಅವರ ವಿರುದ್ಧ ಗುಜರಾತ್‌ನಂತೆ ನಮ್ಮ ಸರಕಾರ ಬಲಿ ಕೊಟ್ಟಾದರೂ ಹೋರಾಡಲು ಸಿದ್ಧ ಎಂದು ನಮ್ಮ ಪಕ್ಷ ಬಿಚ್ಚಿ ಸಾರಿದ ವರ್ಷ.

ಜಯಾ: ವರ್ಷಗಳಿಂದ ಜನಸೇವೆಯಲ್ಲಿ ತೊಡಗಿ, ನನ್ನ ಹತ್ತಿರ ಇರುವ ರೇಷ್ಮೆ ಸೀರೆ, ಚಿನ್ನ, ನಗನಾಣ್ಯ, ನೋಟು ಎಲ್ಲಾ ಎಣಿಸಲು ಪುರುಸೊತ್ತೇ ಇರಲಿಲ್ಲ. ಅದಕ್ಕೆ ಪುರುಸೊತ್ತು ಸಿಕ್ಕು ಎಣಿಸಲಾರಂಭಿಸಿದಾಗ, ಎಣಿಸಲೂ ಜನ ಕಳಿಸಿದ್ದಾರಲ್ಲ ಎಂಥ ಪುಣ್ಯವಂತೆ ನಾನು ಎಂತಹ ವಿಶ್ರಾಂತಿಭರಿತ ವರ್ಷ.

ಅಮಿತಾಭ್ ಬಚ್ಚನ್: ಅಯ್ಯೋ ಪಟೇಲರೇ ನಾನು ಇನ್ನೂ ಎಣಿಸಿ ಆಗಿಲ್ಲ. 1996 ಕಳೆದು ಹೋಯಿತೆ? ಇನ್ನೂ ಬಟವಾಡೆನೂ ಮಾಡಿಲ್ಲ, ಜನ ಬೊಂಬಡಿ ಹೊಡೀತಿದಾರೆ.

ಬೇತಾಳ ಮತ್ತು ತ್ರಿವಿಕ್ರಮಥ ಎಲ್ಲಾ ಪ್ರಚಲಿತ ವಿದ್ಯಮಾನಗಳನ್ನು ಆರ್ಥಿಕ, ಸಾಂಸ್ಕೃತಿಕ, ಸೈದ್ಧಾಂತಿಕಗಳಿಂದಲೂ ವಿಶ್ಲೇಷಿಸಿ, ಸೀರಿಯಸ್ಸಾಗಿ ಕೊರೆಯುವ 'ಐಕ್ಯರಂಗ'ದವರಿಗೂ ತಲೆ ಚಿಟ್ಟು ಹಿಡಿಸಿ ಎಲ್ಲರನ್ನೂ 'ಅಣಕ' ಮಾಡುವಂತ ಪ್ರಚೋದಿಸಿದ ವರ್ಷ.

ಬಾಳ ಠಾಕ್ರೆಯ 'ಹಿಂದುತ್ವ'ದ ಹೂರಣ ಗೊತ್ತೆ ನಿಮಗೆ?

ತೆರಿಗೆಗಳ್ಳರಾದ ಕೈಗಾರಿಕೋದ್ಯಮಿಗಳ ನಿವಾಸಗಳ, ಕಛೇರಿಗಳ ಮೇಲೆ ನಡೆಯುತ್ತಿರುವ ಧಾಳಿಗಳನ್ನು ನಿಲ್ಲಿಸಬೇಕೆಂದು ಶಿವಸೇನಾ ಮುಖ್ಯಸ್ಥ ಬಾಳ ಠಾಕ್ರೆ ಘೋಷಿಸಿದ್ದಾರೆ. ಮಹೀಂದ್ರಾ ಮತ್ತು ಮಹೀಂದ್ರಾ ಹಾಗೂ ಚಬ್ರಿಯಾನಂತಹ ಕೈಗಾರಿಕೋದ್ಯಮಿಗಳ ಮೇಲೆ ತೆರಿಗೆ ಧಾಳಿ ನಡೆದ ಹಿನ್ನೆಲೆಯಲ್ಲಿ ದೇಶದ ಆರ್ಥಿಕತೆಗೆ "ಕಾಣಿಕೆ" ನೀಡಿದ ಕೈಗಾರಿಕೋದ್ಯಮಿಗಳ ಮೇಲೆ ಧಾಳಿ ನಡೆಯಬಾರದು ಎಂದು ಠಾಕ್ರೆ ವಾದಿಸಿದ್ದಾರೆ(ಹಿಂದೂ ದೈನಿಕ 16.12.96) ಸರಿಯಾಗಿ ಲೆಕ್ಕ ಪತ್ರಗಳನ್ನಿರಿಸಿ, ಸರಕಾರಕ್ಕೆ ತೆರಿಗೆಯನ್ನು ವಂಚನೆ ಮಾಡದ ಪ್ರಾಮಾಣಿಕವಾಗಿ ವ್ಯವಹಾರ ನಡೆಸುತ್ತಿರುವ ಕೈಗಾರಿಕೆ, ವಾಣಿಜ್ಯ ಕಂಪನಿಗಳ ಮೇಲೆ ರಾಜಕೀಯ ಸೇಡು ತೀರಿಸಿಕೊಳ್ಳಲು ಧಾಳಿ ನಡೆಸುವುದು ನಿಜಕ್ಕೂ ಖಂಡನೀಯ. ಆದರೆ ಸರಕಾರಗಳಿಗೆ ಕೋಟಿಗಟ್ಟಲೆ ತೆರಿಗೆಯನ್ನು ವಂಚಿಸಿ, ಜನಸಾಮಾನ್ಯರಿಗೆ ದುಬಾರಿ ಬೆಲೆಗಳಲ್ಲಿ ಸರಕನ್ನು ನೀಡಿ ತಮ್ಮ ಖಾಸಗಿ ಆಸ್ತಿಯನ್ನು ವಿಸ್ತರಿಸಿ, ವಿಲಾಸೀ ಜೀವನವನ್ನು ನಡೆಸುವ ಕೈಗಾರಿಕೋದ್ಯಮಿಗಳ ಪರ ಈ ಖೋಟಾ ಹಿಂದೂವಾದಿ ದನಿಯೆತ್ತಿದ್ದಾರೆ. 'ಹಿಂದುತ್ವ'ವಾದಿಗಳ ನಿಜ ಸ್ವರೂಪಕ್ಕೆ ಬೇರೆ ಪುರಾವೆ ಬೇಕೆ? ಇವರು ಬಡಜನರ ಪರವಾಗಿದ್ದಾರೆಯೇ ಎಂದು ರೈತ-ಕಾರ್ಮಿಕರಾದಿಯಾಗಿ ಪ್ರಗತಿಪರರೆಲ್ಲರೂ ಪ್ರಶ್ನಿಸಬೇಕಾಗಿದೆ.

ಶ್ರೀಮಂತ ಕೈಗಾರಿಕೋದ್ಯಮಿ ಪೊದ್ದಾರ್ ಕುಟುಂಬದ ಮನೆಯಲ್ಲಿ ನಡೆದ ಖಾಸಗಿ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಠಕ್ಕ(?)ರೆಯವರು, ಯುವಜನರಲ್ಲಿ ವಿದೇಶೀ ವ್ಯಾಮೋಹ ಮತ್ತು ಪಾಪ್ ಸಂಸ್ಕೃತಿಯನ್ನು ಹುಟ್ಟಿಸುವ ಮೈಕೆಲ್ ಜಾಕ್ಸನ್ ಕಾರ್ಯಕ್ರಮವನ್ನು ಸಮರ್ಥಿಸಿಕೊಳ್ಳುತ್ತಾ, ಆದರೂ, ತಾನೊಬ್ಬ ಅಪ್ಪಟ ಹಿಂದೂವಾದಿ ಎಂದು ಮತ್ತೊಂದು ಕಪಟ ನಾಟಕವನ್ನಾಡಿದ್ದಾರೆ. ಮಾತ್ರವಲ್ಲ, ಮೈಕೆಲ್ ಜಾಕ್ಸನ್ ಕಾರ್ಯಕ್ರಮಕ್ಕೆ ಬಿಜೆಪಿ-ಶಿವಸೇನಾ ಸರಕಾರವು ತೆರಿಗೆ ವಿನಾಯತಿ ನೀಡುವುದರ ಮೂಲಕ 5 ಕೋಟಿ ರೂಪಾಯಿಯನ್ನು ಸರಕಾರಕ್ಕೆ ವಂಚಿಸಿದೆ ಎಂಬುದೀಗ ಎಲ್ಲರಿಗೂ ಗೊತ್ತಿರುವ ಸಂಗತಿ.

ಬಡತನದ ಬವಣೆಯೆಂಬುದನ್ನೇ ಅರಿಯದ ಪೊದ್ದಾರ್ ಕುಟುಂಬದ ಸದಸ್ಯರನ್ನು ಮೆಚ್ಚಿಸಲು ಠಾಕ್ರೆಯವರು ಆ ಸಮಾರಂಭದಲ್ಲಿ ಹೇಳಿದ 'ಜೋಕು' ಇಡೀ ಭಾರತೀಯರನ್ನೇ ಅವಹೇಳನ ಮಾಡುವಂತದ್ದು. ಅಂದಿನ ಸೋವಿಯತ್ ಒಕ್ಕೂಟದ ಪ್ರಧಾನಿ ಬ್ರೆಜ್ನೇವ್ ಮತ್ತು ಭಾರತದ ಪ್ರಧಾನಿ ಜವಾಹರಲಾಲ್ ನೆಹರೂರವರು ಕಾರಿನಲ್ಲಿ ಹೋಗುತ್ತಿದ್ದಾಗ ರಸ್ತೆಯಲ್ಲಿ ಮೂತ್ರ ಮಾಡುತ್ತಿರುವವರನ್ನು ಕಂಡು 'ಫರ್ಟಿಲೈಸರ್ ಕಾರ್ಪೊರೇಶನ್ ಆಫ್ ಇಂಡಿಯಾ' ಅಂದರೆ ಭಾರತ ಗೊಬ್ಬರ ನಿಗಮ ಎಂದರಂತೆ. ರಶ್ಯಾದ ರಾಜಧಾನಿ ಮಾಸ್ಕೊದಲ್ಲಿ ಪ್ರಯಾಣ ಮಾಡುತ್ತಿದ್ದಾಗ, ಒಬ್ಬಾತ ಮಾತ್ರ ರಸ್ತೆಯಲ್ಲಿ ಮೂತ್ರ ಮಾಡುವುದನ್ನು ಕಂಡು ಅವನನ್ನು ಬಂಧಿಸಿದಾಗ ಆತ ಭಾರತದ ರಾಯಭಾರಿ ಕಛೇರಿಯಲ್ಲಿ ಕೆಲಸ ಮಾಡುವಾತ ಎಂದು ತಿಳಿಯಿತಂತೆ! ಹಿಂದೂ ಸಂಸ್ಕೃತಿಯ ಬಗ್ಗೆ ಉದ್ದುದ್ದ ಭಾಷಣ ಮಾಡುವ ಕಪಟ ಹಿಂದೂವಾದಿ ಬಾಳಾ ಠಕ್ಕ(?)ರೆಯವರನ್ನು ಬಯಲಿಗೆಳೆಯಲು ಇನ್ನೆಷ್ಟು ಉದಾಹರಣೆಗಳು, 'ಜೋಕು'ಗಳು ಬೇಕು?

ಇದು ಶ್ರೀಮಂತರನ್ನು ಓಲೈಸಿಕೊಳ್ಳಲು ಇಡೀ ಭಾರತೀಯ ಸಮುದಾಯವನ್ನು ಅವಹೇಳನ ಮಾಡುವ ಖೋಟಾ ಹಿಂದೂವಾದಿಗಳ ಠಕ್ಕುತನವಲ್ಲದೆ ಮತ್ತೇನು?

ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಗೋಪಿನಾಥ ಮುಂಡೆ 'ತಮಾಶಾ ಡ್ಯಾನ್ಸರ್' ಎಂದೇ ಪ್ರಖ್ಯಾತಳಾಗಿರುವ ಮಹಿಳೆಯೊಂದಿಗೆ ಇಟ್ಟುಕೊಂಡಿದ್ದಾರೆ ಎನ್ನಲಾಗಿರುವ ಸಂಬಂಧವನ್ನು ಮತ್ತು ಮಹಾತ್ಮಾಗಾಂಧಿಯವರು ಮಹಿಳಾ ಕಾರ್ಯಕರ್ತರೊಂದಿಗೆ ತಿರುಗಾಡುತ್ತಿದ್ದುದನ್ನು ಒಂದೇ ತಕ್ಕಡಿಯಲ್ಲಿ ತೂಗಿ ನೋಡುವ ಬಾಳ ಠಾಕ್ರೆಯವರ ದುಷ್ಟ ಮನಸ್ಸಿಗೆ ಬೇರೆ ಕನ್ನಡಿ ಬೇಕೆ? ಇಂತಹ ಠಕ್ಕ ರಾಜಕಾರಣಿಗಳ ಗೋಸುಂಬೆತನವನ್ನು ಮಟ್ಟ ಹಾಕಿದಲ್ಲಿ ಮಾತ್ರ ಭವ್ಯ ಭಾರತದ ಕನಸು ನನಸಾಗುತ್ತದೆ.

\- ಬಾಲಕೃಷ್ಣ

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು